# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI(C)

ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ ಸಂಪುಟ: 36 ಸಂಚಿಕೆ: 11 ಜನವರಿ 2024 ಬೆಲೆ: ರೂ. 7/-


**ಒಳ ಪುಟಗಳಲ್ಲಿ.............**


ಕಾರ್ಮಿಕ ವರ್ಗದ ಸರ್ವಾಧಿಕಾರದ ಕಾಲಘಟ್ಟದಲ್ಲಿ......2
ಬಗೆಹರಿಯದ ಜೆ.ಸಿ.ಐ ಪಕ್ಷಗಳ ಒಳಜಗಳ .......4
ಪ್ಯಾಲೆಸ್ತೈನ್ ಮೇಲೆ ಇಸ್ರೇಲ್ ಮಾರಣಾಂತಿಕ ದಾಳಿ.....6
ಸಿಲ್ಕ್ಯಾರಾ ಸುರಂಗ ದುರಂತ.........9
ಪ್ರಿಪೆಯ್ಡ್ ಸ್ಮಾರ್ಟ್ ಮೀಟರ್ ಏಕೆ ಬೇಡ?....10




**ಕಾರ್ಮಿಕ ವರ್ಗದ ಮಹಾನ್ ನಾಯಕ ವಿ. ಐ. ಲೆನಿನ್ ಮರಣ ಶತಾಬ್ದಿ ಸಂದರ್ಭದಲ್ಲಿ ಅವರ ಬೋಧನೆಯಿಂದ ಕಲಿಯೋಣ!**

## ಎಸ್‌ಯುಸಿಐ(ಸಿ): ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ದೇಶವ್ಯಾಪಿ

# ಸಹಿ ಸಂಗ್ರಹ ಆಂದೋಲನ

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ದೇಶದ ಜನತೆ ಈ ಬಂಡವಾಳಶಾಹಿ ಪರ, ಕಾರ್ಪೊರೇಟ್ ಪರ ಸರ್ಕಾರಗಳ ನೀತಿಗಳಿಂದ ಅನುಭವಿಸುತ್ತಿರುವ ಸಮಸ್ಯೆಗಳ ವಿರುದ್ಧ ದೇಶಾದ್ಯಂತ ಸಹಿ ಸಂಗ್ರಹಿಸುವ ಚಳವಳಿಯನ್ನು ಹಮ್ಮಿಕೊಂಡಿದೆ. ಅದರಂತೆ ಕರ್ನಾಟಕದಲ್ಲೂ ಪಕ್ಷವು ಹಲವಾರು ಜಿಲ್ಲೆಗಳಲ್ಲಿ ಜನಸಾಮಾನ್ಯರಿಂದ ಸಾರ್ವಜನಿಕವಾಗಿ ಸಹಿ ಸಂಗ್ರಹಿಸುತ್ತಿದ್ದು, ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರು, ಮೈಸೂರು, ಧಾರವಾಡ, ಬಳ್ಳಾರಿ, ಕಲಬುರ್ಗಿ, ರಾಯಚೂರು, ಕೊಪ್ಪಳ, ವಿಜಯನಗರ ಮೊದಲಾದ ಜಿಲ್ಲೆಗಳಲ್ಲಿ ಆಂದೋಲನಕ್ಕೆ ಚಾಲನೆ ನೀಡಲಾಯಿತು.



ಧಾರವಾಡ



ಸಹಿಮಾಡಿ ಉದ್ಘಾಟನೆ ಮಾಡಿದ ಪ್ರೊ.ಟಿ.ಆರ್.ಚಂದ್ರಶೇಖರ್ - ಹೊಸಪೇಟೆ

**ರಾಷ್ಟ್ರಪತಿಗಳಿಗೆ ಸಲ್ಲಿಸಲಿರುವ ಮನವಿಪತ್ರದಲ್ಲಿರುವ ಬೇಡಿಕೆಗಳು ಇಂತಿವೆ:**

**ಬೇಡಿಕೆಗಳ ಪಟ್ಟಿ**

1. ಬೆಲೆ ಏರಿಕೆಯನ್ನು ತಡೆಗಟ್ಟಬೇಕು, ಅಗತ್ಯ ವಸ್ತುಗಳ ಸಗಟು ಮತ್ತು ಚಿಲ್ಲರೆ ವ್ಯಾಪಾರವನ್ನು ಸರ್ಕಾರ ನಿರ್ವಹಿಸಬೇಕು.
2. ಜನವಿರೋಧಿ ರಾಷ್ಟ್ರೀಯ ಶಿಕ್ಷಣ ನೀತಿ– 2020 ಅನ್ನು ತಕ್ಷಣವೇ ಹಿಂಪಡೆಯಬೇಕು. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೇಸರೀಕರಣವನ್ನು ನಿಲ್ಲಿಸಬೇಕು.
3. ಎಲ್ಲರಿಗೂ ಖಾಯಂ ಉದ್ಯೋಗಗಳನ್ನು ಒದಗಿಸಬೇಕು. ಉದ್ಯೋಗ ನೀಡುವ ತನಕ ನಿರುದ್ಯೋಗ ಭತ್ಯೆಯನ್ನು ನೀಡಬೇಕು.
4. ಸರ್ಕಾರ ಎಲ್ಲರಿಗೂ ಉಚಿತ ಆರೋಗ್ಯ ಸೇವೆ ನೀಡಬೇಕು. ಆರೋಗ್ಯ ವಲಯದ ಖಾಸಗೀಕರಣವನ್ನು ನಿಲ್ಲಿಸಬೇಕು.
5. ಏಕಸ್ವಾಮ್ಯ ಬಂಡವಾಳಿಗರ ಪರವಾದ, ಜನವಿರೋಧಿಯಾದ ವಿದ್ಯುತ್ ಕಾಯ್ದೆ–2022 ಅನ್ನು ರದ್ದುಗೊಳಿಸಬೇಕು. ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ನಿಲ್ಲಿಸಬೇಕು.

5ನೇ ಪುಟಕ್ಕೆ....

"ಯಾವ ಸಮಸ್ಯೆಗಳನ್ನು ಈಗ ಇಡೀ ರಷ್ಯಾದ ಕಾರ್ಮಿಕ ವರ್ಗವು ಒಗ್ಗಟ್ಟಾಗಿ ನಿಂತು ಕ್ರಾಂತಿಕಾರಿ ಸಂಘರ್ಷದಿಂದ ಕ್ರಿಯೆಯ ಮೂಲಕ ಬಗೆಹರಿಸಲು ಮುನ್ನುಗ್ಗುತ್ತಿದೆಯೋ ಅಂತಹ ನಿಜವಾಗಿಯೂ ಬಹುಮುಖ್ಯವಾಗಿರುವ ಹಾಗೂ ಮೂಲಭೂತವಾಗಿರುವ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳಿಂದ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮುವಾದಿ ಮತೀಯ ದ್ವೇಷದ ಕಿಚ್ಚನ್ನು ಎಬ್ಬಿಸುವ ಕೆಲಸದಲ್ಲಿ ಪ್ರತಿಗಾಮಿ ಬಂಡವಾಳಶಾಹಿಯು ಇತರೆಲ್ಲೆಡೆ ತನ್ನನ್ನು ತೊಡಗಿಸಿಕೊಂಡಿರುವಂತೆ, ಈಗ ರಷ್ಯಾದಲ್ಲಿ ಈ ಕೆಲಸವನ್ನು ಆರಂಭಿಸಿದೆ. ಕಾರ್ಮಿಕ ವರ್ಗದ ಶಕ್ತಿಗಳನ್ನು ಒಡೆಯುವಂತಹ ಪ್ರತಿಗಾಮಿ ನೀತಿಯು, ಇಂದು 'ಬ್ಲಾಕ್ ಹಂಡ್ರೆಡ್' ನರಮೇಧದ ಮಾದರಿಯಲ್ಲಿ ಕಾಣಿಸಿಕೊಳ್ಳುತ್ತಿರುವುದು ನಾಳೆ ಇನ್ನೂ ಸೂಕ್ಷ್ಮ ಸ್ವರೂಪವನ್ನು ಪಡೆದುಕೊಳ್ಳಬಹುದು. ನಾವು, ಅದೇನೇ ಆದರೂ ಸಹ ಸಮಾಧಾನದಿಂದ, ಸತತವಾಗಿ ಮತ್ತು ಅತ್ಯಂತ ಸಹನೆಯಿಂದ ಕಾರ್ಮಿಕ ವರ್ಗದ ಐಕ್ಯತೆಯನ್ನು ಮತ್ತು ವೈಜ್ಞಾನಿಕ ವಿಶ್ವ ದೃಷ್ಟಿಕೋನವನ್ನು ಪ್ರಚಾರ ಮಾಡುತ್ತಾ ಅದನ್ನು ವಿರೋಧಿಸುತ್ತೇವೆ. ಈ ತಿಳುವಳಿಕೆಯೇ ಇತರೆಲ್ಲ ವ್ಯತ್ಯಾಸಗಳನ್ನು ಬಡಿದೆಬ್ಬಿಸುವುದಕ್ಕೆ ಮದ್ದು ಆಗಿದೆ. –ಲೆನಿನ್

(ಸಮಾಜವಾದ ಮತ್ತು ಧರ್ಮ, ಲೆನಿನ್ ಸಂಗ್ರಹಿತ ಕೃತಿಗಳು, ಸಂ.10)

## ಅಭೂತಪೂರ್ವ ಯಶಸ್ಸು ಕಂಡ ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ





ದಾವಣಗೆರೆ: ಜನವರಿ 6 ಮತ್ತು 7ರಂದು ಎಐಎಂಎಸ್‌ಎಸ್ ಸಂಘಟಿಸಿದ 7ನೇ ರಾಜ್ಯ ಮಟ್ಟದ ಮಹಿಳಾ ಸಮ್ಮೇಳನದ ಚಿತ್ರಗಳು: ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಲೇಖಕಿ, ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ರೂಪಾ ಹಾಸನ. ವೇದಿಕೆಯಲ್ಲಿ ಡಾ|| ಅನುರಾಧ ಪಿ ಎಂ, ಎಐಎಂಎಸ್‌ಎಸ್ ಅಖಿಲ ಭಾರತ ಅಧ್ಯಕ್ಷರಾದ ಕಾ|| ಕೆಯಾ ಡೆ, ಪ್ರಧಾನ ಕಾರ್ಯದರ್ಶಿ ಕಾ|| ಛಬಿ ಮೊಹಂತಿ, ರಾಜ್ಯ ಅಧ್ಯಕ್ಷರಾದ ಕಾ|| ಬಿ.ಆರ್.ಅಪರ್ಣಾ ಮತ್ತು ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿಗಳಾದ ಕಾ|| ಕೆ.ಉಮಾ (ಎಡ ಚಿತ್ರ). ಸಮ್ಮೇಳನದಲ್ಲಿ ಭಾಗವಹಿಸಿದ ಮಹಿಳಾಸ್ತೋಮ (ಬಲ ಚಿತ್ರ)

# ಕಾರ್ಮಿಕ ವರ್ಗದ ಸರ್ವಾಧಿಕಾರದ ಕಾಲಘಟ್ಟದಲ್ಲಿ ರಾಜಕೀಯ ಮತ್ತು ಆರ್ಥಿಕತೆ

**ಕಾರ್ಮಿಕ ವರ್ಗದ ಮಹಾನ್ ನಾಯಕ ಮತ್ತು ರಷ್ಯಾದ ಕ್ರಾಂತಿಯ ರೂವಾರಿ ಲೆನಿನ್ ಅವರು ಕೊನೆಯುಸಿರೆಳೆದು 2024ರ ಜನವರಿ 21ರಂದು ನೂರು ವರ್ಷಗಳಾಗುತ್ತವೆ. ಅವರ ಮರಣ ಶತಾಬ್ದಿಯ ಸಂದರ್ಭದಲ್ಲಿ ಅವರು 1919ರಲ್ಲಿ ಬರೆದ ಲೇಖನವೊಂದರ ಸಂಕ್ಷಿಪ್ತ ಅನುವಾದವನ್ನು ಇಲ್ಲಿ ಪ್ರಕಟಿಸಲಾಗಿದೆ. ಕ್ರಾಂತಿಯ ನಂತರದ ಸೋವಿಯತ್ ರಷ್ಯಾದ ಕುರಿತು ಅವರು ಇಲ್ಲಿ ವಿವರಿಸಿದ್ದಾರೆ.**

ಸೋವಿಯತ್ ಅಧಿಕಾರದ 2ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನನಗೆ ಈ ವಿಷಯದ ಕುರಿತು ಒಂದು ಕಿರುಪುಸ್ತಕ ಬರೆಯಬೇಕೆಂಬ ಉದ್ದೇಶವಿತ್ತು. ಆದರೆ ದೈನಂದಿನ ಕೆಲಸದ ಒತ್ತಡದಿಂದಾಗಿ ಇಲ್ಲಿಯವರೆಗೆ ಕೆಲವೊಂದು ಭಾಗಗಳ ಪ್ರಾಥಮಿಕ ತಯಾರಿಯ ಹೊರತು ಇನ್ನೇನೂ ಮಾಡಲಾಗಿಲ್ಲ. ಆದ್ದರಿಂದ, ಈ ವಿಷಯದ ಅತಿ ಮುಖ್ಯ ಚಿಂತನೆಗಳುಳ್ಳ ಸಂಕ್ಷಿಪ್ತೀಕೃತ ಪ್ರಬಂಧವನ್ನು ಬರೆಯಲು ತೀರ್ಮಾನಿಸಿದೆ...

ಬಂಡವಾಳಶಾಹಿ ವ್ಯವಸ್ಥೆ ಮತ್ತು ಕಮ್ಯುನಿಸಂ ವ್ಯವಸ್ಥೆಗಳ ನಡುವೆ ಖಚಿತವಾಗಿ ಒಂದು ಸ್ಥಿತ್ಯಂತರ ಕಾಲಘಟ್ಟವಿರಲಿದ್ದು ಅದು ಈ ಎರಡೂ ಸಾಮಾಜಿಕ ಆರ್ಥಿಕತೆಗಳ ವೈಶಿಷ್ಟ್ಯತೆ ಮತ್ತು ಗುಣಲಕ್ಷಣಗಳನ್ನು ಬೆಸೆಯಬೇಕು ಎಂಬುದರಲ್ಲಿ ಸೈದ್ಧಾಂತಿಕವಾಗಿ ಯಾವುದೇ ಸಂದೇಹವಿಲ್ಲ. ಈ ಸ್ಥಿತ್ಯಂತರ ಅವಧಿಯು ಮರಣಶಯ್ಯೆಯಲ್ಲಿರುವ ಬಂಡವಾಳವಾದ ಮತ್ತು ಶೈಶವಾವಸ್ಥೆಯಲ್ಲಿರುವ ಕಮ್ಯುನಿಸಂ ನಡುವಿನ ಅಥವಾ ಬೇರೆ ಪದಗಳಲ್ಲಿ ಹೇಳುವುದಾದರೆ, ಸೋತ ಆದರೆ ಸರ್ವನಾಶ ಹೊಂದದ ಬಂಡವಾಳಶಾಹಿ ಮತ್ತು ನವಜಾತ ಆದರೆ ಬಹಳ ದುರ್ಬಲವಾದ ಕಮ್ಯುನಿಸಂ ನಡುವಿನ ಸಂಘರ್ಷದ ಕಾಲಘಟ್ಟವಾಗಿರಬೇಕು.

ಈ ಸ್ಥಿತ್ಯಂತರ ಗುಣಲಕ್ಷಣಗಳಿರುವ ಒಂದು ಐತಿಹಾಸಿಕ ಯುಗದ ಅವಶ್ಯಕತೆಯು, ಮಾರ್ಕ್ಸ್‌ವಾದಿಗಳಿಗೆ ಮಾತ್ರವಲ್ಲ ಬೆಳವಣಿಗೆಯ ಸಿದ್ಧಾಂತದ ಬಗ್ಗೆ ಅಲ್ಪಸ್ವಲ್ಪ ಪರಿಚಯವಿರುವ ಯಾವುದೇ ವಿದ್ಯಾವಂತ ವ್ಯಕ್ತಿಗೂ ಸ್ಪಷ್ಟವಾಗಿರುತ್ತದೆ. ಹಾಗಿದ್ದೂ, ಸ್ಥಿತ್ಯಂತರ ಸಮಾಜವಾದದ ಕುರಿತು, ಸಮಕಾಲೀನ ಪೆಟಿ ಬೂರ್ಜ್ವಾ ಜನತಂತ್ರವಾದಿಗಳಿಂದ ನಾವು ಕೇಳುವ ಮಾತುಗಳಲ್ಲಿ ಈ ಸತ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ. ವರ್ಗ ಸಂಘರ್ಷದ ಕುರಿತ ಜಿಗುಪ್ಸೆ, ಅದನ್ನು ತಪ್ಪಿಸುವ ಅವರ ಕನಸು, ಅದನ್ನು ಕಡೆಗಣಿಸುವ, ಅದರೊಂದಿಗೆ ರಾಜಿ ಮಾಡಿಸುವ, ಅದರ ತೀವ್ರತೆಯನ್ನು ಕಡಿಮೆ ಮಾಡುವ ಅವರ ಪ್ರಯತ್ನಗಳಿಂದ ಪೆಟಿ ಬೂರ್ಜ್ವಾ ಜನತಂತ್ರವಾದಿಗಳು ಪ್ರತ್ಯೇಕವಾಗಿ ಎದ್ದು ಕಾಣುತ್ತಾರೆ. ಹಾಗಾಗಿ ಅಂತಹ ಜನತಂತ್ರವಾದಿಗಳು ಬಂಡವಾಳವಾದದಿಂದ ಕಮ್ಯುನಿಸಂ ಕಡೆಗಿನ ಸ್ಥಿತ್ಯಂತರವಾದ ಒಂದು ಐತಿಹಾಸಿಕ ಕಾಲಘಟ್ಟದ ಅವಶ್ಯಕತೆಯನ್ನು ಒಂದೋ ನಿರಾಕರಿಸುತ್ತಾರೆ ಅಥವಾ ಈ ಎರಡು ವಿರೋಧಿ ಶಕ್ತಿಗಳಲ್ಲಿ ಒಂದರ ನಾಯಕತ್ವ ವಹಿಸಿ ಹೋರಾಡುವ ಬದಲು ಅವರೆಡರ ನಡುವೆ ರಾಜಿಮಾಡಿಸಲು ಬೇಕಾದ ತಂತ್ರಗಳನ್ನು ಹೆಣೆಯುತ್ತಾರೆ.

ರಷ್ಯಾ ಬಹಳವೇ ಹಿಂದುಳಿದಿರುವುದರಿಂದ ಮತ್ತು ಅದರ ಪೆಟಿ ಬೂರ್ಜ್ವಾ ಲಕ್ಷಣದ ಕಾರಣದಿಂದ, ನಮ್ಮ ದೇಶದಲ್ಲಿನ ಕಾರ್ಮಿಕ ವರ್ಗದ ಸರ್ವಾಧಿಕಾರವು ಮುಂದುವರಿದ ದೇಶಗಳಲ್ಲಿ ಇರಬಹುದಾದ ರೀತಿಗಿಂತ, ನಿರ್ದಿಷ್ಟವಾಗಿ ಕೆಲವು ಅಂಶಗಳಲ್ಲಿ ಅನಿವಾರ್ಯವಾಗಿ ಭಿನ್ನವಾಗಿರಲಿದೆ. ಆದರೆ ಮೂಲಭೂತ ಶಕ್ತಿಗಳು ಹಾಗೂ ಸಾಮಾಜಿಕ ಆರ್ಥಿಕತೆಯ ಮೂಲ ಸ್ವರೂಪಗಳು ಬೇರೆ ಯಾವುದೇ ಬಂಡವಾಳಶಾಹಿ ದೇಶದಂತೆ ರಷ್ಯಾದಲ್ಲಿಯೂ ಸಹ ಅದೇ ರೀತಿಯಲ್ಲಿಯೇ ಇರುವುದರಿಂದ, ಈ ವಿಶಿಷ್ಟತೆಗಳು, ಕಡಿಮೆ ಮಹತ್ವದ್ದಾಗಿರುವುದಕ್ಕೆ ಮಾತ್ರವೇ ಅನ್ವಯವಾಗುತ್ತವೆ. ಸಾಮಾಜಿಕ ಆರ್ಥಿಕತೆಯ ಮೂಲ ಸ್ವರೂಪಗಳೆಂದರೆ ಬಂಡವಾಳವಾದ, ಸಣ್ಣ ಮಟ್ಟದ ಸರಕು ಉತ್ಪಾದನೆ ಮತ್ತು ಕಮ್ಯುನಿಸಂ. ಮೂಲಭೂತ ಶಕ್ತಿಗಳೆಂದರೆ, ಬಂಡವಾಳಶಾಹಿ ವರ್ಗ, ಪೆಟಿ ಬೂರ್ಜ್ವಾ ವರ್ಗ(ವಿಶೇಷವಾಗಿ ರೈತಾಪಿ ವರ್ಗ) ಮತ್ತು ಕಾರ್ಮಿಕ ವರ್ಗ.

ರಷ್ಯಾದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರದ ಕಾಲಘಟ್ಟದ ಆರ್ಥಿಕ ವ್ಯವಸ್ಥೆಯು ಕಾರ್ಮಿಕರ ಸಂಘರ್ಷವನ್ನು ಪ್ರತಿನಿಧಿಸುತ್ತದೆ; ಈ ಬೃಹತ್ ದೇಶದಲ್ಲಿ ಅವರು ಕಮ್ಯುನಿಸ್ಟ್ ತತ್ವದ ಆಧಾರದಲ್ಲಿ ಒಗ್ಗೂಡಿ ತಮ್ಮ ಮೊದಲ ಹೆಜ್ಜೆ ಇಟ್ಟಿದ್ದಾರೆ. ಅದೆಂದರೆ, ಇನ್ನೂ ಉಳಿದಿರುವ ಸಣ್ಣ ಮಟ್ಟದ ಸರಕು ಉತ್ಪಾದನೆ ಮತ್ತು ಬಂಡವಾಳವಾದಗಳ ವಿರುದ್ಧದ ಸಂಘರ್ಷ. ಕಮ್ಯುನಿಸ್ಟ್ ತತ್ವದ ಆಧಾರದಲ್ಲಿ ಒಗ್ಗೂಡುವುದೆಂದರೆ, ಮೊದಲಿಗೆ ಉತ್ಪಾದನಾ ಮೂಲಗಳ ಮೇಲೆ ಖಾಸಗಿ ಒಡೆತನವನ್ನು ರದ್ದುಪಡಿಸಲಾಗಿದೆ; ಎರಡನೆಯದಾಗಿ ಕಾರ್ಮಿಕ ವರ್ಗದ ರಾಜ್ಯಾಧಿಕಾರವು, ಸರ್ಕಾರಿ ಮಾಲೀಕತ್ವದ ಭೂಮಿ ಮತ್ತು ಉದ್ದಿಮೆಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಂಘಟಿಸುತ್ತಿದೆ. ಕಾರ್ಮಿಕರನ್ನು ವಿವಿಧ ಉತ್ಪಾದನಾ ವಿಭಾಗಗಳಿಗೆ ಮತ್ತು ಉದ್ದಿಮೆಗಳಿಗೆ ಹಂಚಿಕೆ ಮಾಡುತ್ತಿದೆ, ಸರ್ಕಾರಕ್ಕೆ ಸೇರಿದ ದೊಡ್ಡ ಸಂಖ್ಯೆಯ ಬಳಕೆಯ ವಸ್ತುಗಳನ್ನು ದುಡಿಯುವ ಜನರಿಗೆ ವಿತರಣೆ ಮಾಡುತ್ತಿದೆ.

ನಾವು, ಒಂದೇ ಕ್ರಾಂತಿಕಾರಿ ಹೊಡೆತದಿಂದ ತತ್‌ಕ್ಷಣದಲ್ಲಿ ಸಾಧಿಸುವಂಥದ್ದನ್ನು ತಕ್ಷಣದಲ್ಲೇ ಮಾಡಿದ್ದೆವು. ಕಾರ್ಮಿಕ ವರ್ಗದ ಸರ್ವಾಧಿಕಾರದ ಮೊದಲ ದಿನವೇ, ಅಂದರೆ ನವೆಂಬರ್ 8, 1917ರಂದೇ ದೊಡ್ಡ ಭೂಮಾಲಿಕರ ಖಾಸಗಿ ಒಡೆತನವನ್ನು ಯಾವುದೇ ಪರಿಹಾರ ನೀಡದೆ ರದ್ದುಗೊಳಿಸಲಾಯಿತು, ದೊಡ್ಡ ಭೂಮಾಲಿಕರ ಸ್ವತ್ತನ್ನು ವಶಪಡಿಸಿಕೊಳ್ಳಲಾಯಿತು. ಕೆಲವೇ ತಿಂಗಳ ಅವಧಿಯಲ್ಲಿ ಎಲ್ಲಾ ಬಂಡವಾಳಶಾಹಿಗಳ, ಕಾರ್ಖಾನೆಗಳು, ಪಾಲುದಾರಿಕೆಯ ಕಂಪನಿಗಳು, ಬ್ಯಾಂಕುಗಳು, ರೈಲ್ವೆ ಮುಂತಾದವುಗಳ ಆಸ್ತಿಗಳನ್ನು ಕೂಡ ಯಾವುದೇ ಪರಿಹಾರ ನೀಡದೆ ವಶಪಡಿಸಿಕೊಳ್ಳಲಾಯಿತು. ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಕೈಗಾರಿಕೆಗಳನ್ನು ರಾಜ್ಯದ ಹತೋಟಿಗೆ ತಂದಾಗಿದೆ; ಕಾರ್ಮಿಕರು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಕಾರ್ಖಾನೆಗಳನ್ನು ಹಾಗೂ ರೈಲ್ವೆಯನ್ನು ಬಹುಮಟ್ಟಿಗೆ ಕಾರ್ಮಿಕರಿಗೆ ವಹಿಸಿಕೊಟ್ಟಿದ್ದಾಗಿದೆ. ಆದರೆ ಕೃಷಿಗೆ ಸಂಬಂಧಿಸಿದಂತೆ ಈ ಕೆಲಸ ಈಗಷ್ಟೇ ಆರಂಭವಾಗಿದೆ. ಸಣ್ಣ ಸರಕು ಉತ್ಪಾದನಾ ಕೃಷಿಯಿಂದ ಕಮ್ಯುನಿಸ್ಟ್ ಕೃಷಿಯೆಡೆಗಿನ ಪರಿವರ್ತನೆಯ ಹಂತವಾಗಿ ಸಣ್ಣ ರೈತರನ್ನು ಒಳಗೊಂಡ ವಿವಿಧ ಬಗೆಯ ಸಹಕಾರಿ ಸೊಸೈಟಿಗಳನ್ನು ಸಂಘಟಿಸುವ ಕೆಲಸ ಆರಂಭಿಸಿದ್ದೇವೆ. ಅದೇ ರೀತಿ, ಖಾಸಗಿ ವ್ಯಾಪಾರದ ಬದಲು ಸರ್ಕಾರವೇ ಉತ್ಪನ್ನಗಳ ಸಂಗ್ರಹ ಮತ್ತು ವಿತರಣೆಯನ್ನು ಕೈಗೆತ್ತಿಕೊಂಡಿದೆ; ಅಂದರೆ ಸರ್ಕಾರವೇ ದವಸ ಧಾನ್ಯಗಳ ಸಂಗ್ರಹ ಮಾಡಿ, ನಗರಗಳಲ್ಲಿ ವಿತರಿಸುವುದು ಮತ್ತು ಕೈಗಾರಿಕಾ ಉತ್ಪನ್ನಗಳನ್ನು ಸಂಗ್ರಹಿಸಿ ಗ್ರಾಮೀಣ ಪ್ರದೇಶದಲ್ಲಿ ವಿತರಿಸುವುದು.

ರೈತವಾರು ಕೃಷಿಯು ಸಣ್ಣ ಮಟ್ಟದ ಸರಕು ಉತ್ಪಾದನೆಯಾಗಿ ಮುಂದುವರಿದಿದೆ. ಇಲ್ಲಿ ಬಂಡವಾಳವಾದಕ್ಕೆ ಅತ್ಯಂತ ವಿಶಾಲವಾದ, ಬಲವಾದ, ಆಳವಾದ ಬೇರುಗಳಿರುವ ಅಡಿಪಾಯವಿದೆ. ಕಮ್ಯುನಿಸಂ ಜೊತೆಗೆ ನಡೆಯುವ ಕಡು ಸಂಘರ್ಷದಲ್ಲಿ ಬಂಡವಾಳವಾದವು ಇದರ ಆಧಾರದಲ್ಲಿ ಉಳಿಯುತ್ತದೆ ಅಥವಾ ಹೊಸದಾಗಿ ಉದಯಿಸುತ್ತದೆ. ಈ ಸಂಘರ್ಷವು ಖಾಸಗಿ ಸಟ್ಟಾ ವ್ಯಾಪಾರ ಮತ್ತು ಲಾಭಕೋರತನ ಹಾಗೂ ಸರ್ಕಾರಿ ಸಂಗ್ರಹಣೆ ಮತ್ತು ವಿತರಣೆಗಳ ನಡುವೆ ಇದೆ. ಉದಾಹರಣೆಗೆ: ಆಹಾರ ಇಲಾಖೆಯ ಅಂಕಿಅಂಶಗಳ ಪ್ರಕಾರ ರಷ್ಯಾದಲ್ಲಿ 1917ರ ಆಗಸ್ಟ್ 1ರಿಂದ 1918ರ ಆಗಸ್ಟ್ 1ರವರೆಗೆ ಸರ್ಕಾರ ಸಂಗ್ರಹಣೆ ಮಾಡಿದ ದವಸ ಧಾನ್ಯಗಳ ಪ್ರಮಾಣ 300 ಲಕ್ಷ ಪೂಡ್‌ಗಳು (1 ಪೂಡ್=16.38ಕೆಜಿ). ಅದರ ಮುಂದಿನ ವರ್ಷದಲ್ಲಿ ಇದು 1100 ಲಕ್ಷ ಪೂಡ್‌ಗಳಷ್ಟಾಗಿದೆ. ಈ ವರ್ಷದ (1919–20)ರ ಮೊದಲ 3 ತಿಂಗಳಲ್ಲೇ ಇದು, 450 ಲಕ್ಷ ಪೂಡ್‌ಗಳು. ಬಂಡವಾಳವಾದದ ಮೇಲೆ ಕಮ್ಯುನಿಸಂನ ವಿಜಯದ ದೃಷ್ಟಿಯಿಂದ ನೋಡಿದರೆ, ಈ ಅಂಕಿಅಂಶಗಳು ನಿಧಾನವಾಗಿಯಾದರೂ, ಸ್ಥಿರವಾದ ಏಳಿಗೆಯನ್ನು ಸ್ಪಷ್ಟವಾಗಿ ತೋರಿಸಿವೆ. ರಷ್ಯಾದಲ್ಲಿರುವ ಮತ್ತು ವಿದೇಶಗಳ ಬಂಡವಾಳಶಾಹಿಗಳು ಪ್ರಪಂಚದ ಎಲ್ಲಾ ಬಲಿಷ್ಠ ಶಕ್ತಿಗಳ ಬೆಂಬಲದೊಂದಿಗೆ ರಷ್ಯಾದಲ್ಲಿ ನಡೆಸುತ್ತಿರುವ ಅಂತರ್ಯುದ್ಧವು ಪ್ರಪಂಚದಲ್ಲೇ ಸರಿಸಾಟಿಯಿಲ್ಲದ ಸಂಕಷ್ಟಗಳನ್ನು ತಂದಿರುವ ಸಂದರ್ಭದಲ್ಲಿ ಈ ಏಳಿಗೆಯನ್ನು ಸಾಧಿಸಲಾಗಿದೆ.

> **ದುಡಿಯುವ ಜನತೆ, ಹಳೆಯ ಕಾಲದ ಶೋಷಣೆ, ದಬ್ಬಾಳಿಕೆಯಿಂದ, ಜಮೀನ್ದಾರರು ಮತ್ತು ಬಂಡವಾಳಶಾಹಿಗಳಿಂದ ವಿಮುಕ್ತಿ ಪಡೆದಿದ್ದಾರೆ. ನೈಜ ಸ್ವಾತಂತ್ರ್ಯ ಮತ್ತು ನೈಜ ಸಮಾನತೆಯ ದಿಕ್ಕಿನ ಕಡೆಗಿನ ಅವರ ಈ ನಡೆ, ಅದರ ಆಯಾಮ ಮತ್ತು ವೇಗವನ್ನು ಪರಿಗಣಿಸಿದರೆ, ಇಡೀ ಪ್ರಪಂಚದಲ್ಲಿ ಅದಕ್ಕೆ ಸರಿಸಾಟಿಯೇ ಇಲ್ಲ.–ಲೆನಿನ್, ಸಮಾಜವಾದಿ ಸೋವಿಯತ್ ಒಕ್ಕೂಟದ ಬಗ್ಗೆ**

ಆದ್ದರಿಂದ ಎಲ್ಲಾ ದೇಶಗಳ ಬಂಡವಾಳಿಗರ ಮತ್ತು ಅವರ ಬಂಟರ ಸುಳ್ಳು, ಅಪಪ್ರಚಾರಗಳು ಏನೇ ಇದ್ದರೂ, ನಮ್ಮ ದೇಶದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರದ ಮೂಲಭೂತ ಆರ್ಥಿಕ ಸಮಸ್ಯೆಗೆ ಸಂಬಂಧಿಸಿದಂತೆ ಬಂಡವಾಳವಾದದ ಮೇಲೆ ಕಮ್ಯುನಿಸಂನ ವಿಜಯ ಖಾತ್ರಿಯಾಗಿದೆ. ಪ್ರಪಂಚದಾದ್ಯಂತ ಬಂಡವಾಳಶಾಹಿಗಳು ಬೋಲ್ಶೆವಿಷಂ ವಿರುದ್ಧ ಕೋಪದಿಂದ ಕುದಿಯುತ್ತಿದ್ದಾರೆ ಮತ್ತು ಮಿಲಿಟರಿ ಆಕ್ರಮಣಗಳನ್ನು, ಸಂಚುಗಳನ್ನು ರೂಪಿಸುತ್ತಿದ್ದಾರೆ, ಏಕೆಂದರೆ ಮಿಲಿಟರಿ ಬಲದ ಮೂಲಕ ಹೊಸಕಿ ಹಾಕದೆ ಹೋದರೆ ಸಮಾಜವಾದಿ ಆರ್ಥಿಕತೆಯನ್ನು ಮರುರಚಿಸುವಲ್ಲಿ ನಮ್ಮ ಯಶಸ್ಸು ಶತಃಸಿದ್ಧ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ.

ಕೇಂದ್ರ ಅಂಕಿಅಂಶಗಳ ಮಂಡಳಿಯು ರಷ್ಯಾದ 26 ಪ್ರಾಂತ್ಯಗಳ ಕುರಿತು ಸಂಗ್ರಹಿಸಿದ ಮಾಹಿತಿಯ ಪ್ರಕಾರ ನಗರಗಳಿಗೆ ಸರಬರಾಜು ಮಾಡಿದ ದವಸಧಾನ್ಯಗಳ ಅರ್ಧದಷ್ಟು ಭಾಗವನ್ನು ಸರ್ಕಾರದ ಆಹಾರ ಇಲಾಖೆ ಪೂರೈಸಿದೆ. ಉಳಿದ ಅರ್ಧ ಭಾಗವನ್ನು ಲಾಭಕೋರರು ಪೂರೈಕೆ ಮಾಡಿದ್ದಾರೆ. ಕಾರ್ಮಿಕನೊಬ್ಬ ಸರ್ಕಾರ ಒದಗಿಸುವ ಬ್ರೆಡ್‌ಗೆ, ಲಾಭಕೋರರಿಂದ ಕೊಳ್ಳುವ ಬೆಲೆಗಿಂತ ಹತ್ತುಪಟ್ಟು ಕಡಿಮೆ ಬೆಲೆ ನೀಡುತ್ತಾನೆ ಎಂಬುದನ್ನು ನೆನಪಿಡಿ.

ದುಡಿಯುವ ಜನತೆ, ಹಳೆಯ ಕಾಲದ ಶೋಷಣೆ, ದಬ್ಬಾಳಿಕೆಯಿಂದ, ಜಮೀನ್ದಾರರು ಮತ್ತು ಬಂಡವಾಳಶಾಹಿಗಳಿಂದ ವಿಮುಕ್ತಿ ಪಡೆದಿದ್ದಾರೆ. ನೈಜ ಸ್ವಾತಂತ್ರ್ಯ ಮತ್ತು ನೈಜ ಸಮಾನತೆಯ ದಿಕ್ಕಿನ ಕಡೆಗಿನ ಅವರ ಈ ನಡೆ, ಅದರ ಆಯಾಮ ಮತ್ತು ವೇಗವನ್ನು ಪರಿಗಣಿಸಿದರೆ, ಇಡೀ ಪ್ರಪಂಚದಲ್ಲಿ ಅದಕ್ಕೆ ಸರಿಸಾಟಿಯೇ ಇಲ್ಲ. ಬೂರ್ಜ್ವಾ ವರ್ಗದ ಬೆಂಬಲಿಗರು (ಪೆಟಿ ಬೂರ್ಜ್ವಾ ಡೆಮಾಕ್ರೆಟ್ಸ್‌ಗಳು ಸೇರಿದಂತೆ) ಸ್ವಾತಂತ್ರ್ಯ ಮತ್ತು ಸಮಾನತೆಯ ಕುರಿತು ಮಾತನಾಡುವಾಗ ಈ ಸತ್ಯವನ್ನು ಕಡೆಗಣಿಸಿ, ಬಂಡವಾಳಶಾಹಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಮಾತ್ರ ಪರಿಗಣಿಸುತ್ತಾರೆ. ಅದನ್ನೇ ಸಾಮಾನ್ಯವಾಗಿ ಪ್ರಜಾಸತ್ತೆ ಅಥವಾ 'ಶುದ್ಧ ಪ್ರಜಾಸತ್ತೆ' ಎಂದು ಸುಳ್ಳುಸುಳ್ಳೇ ಘೋಷಿಸುತ್ತಾರೆ.

ಆದರೆ ದುಡಿಯುವ ಜನತೆ ನೈಜ ಸಮಾನತೆ ಮತ್ತು ನೈಜ ಸ್ವಾತಂತ್ರ್ಯದ (ಜಮೀನ್ದಾರರು ಮತ್ತು ಬಂಡವಾಳಶಾಹಿಗಳಿಂದ ಸ್ವಾತಂತ್ರ್ಯ) ಬಗ್ಗೆ ಮಾತ್ರ ಕಾಳಜಿ ಹೊಂದಿದ್ದಾರೆ ಹಾಗೂ ಈ ಕಾರಣದಿಂದಲೇ ಸೋವಿಯತ್ ಸರ್ಕಾರಕ್ಕೆ ತಮ್ಮ ಪೂರ್ಣ ಬೆಂಬಲ ನೀಡಿದ್ದಾರೆ. ಈ ರೈತಾಪಿ ದೇಶದಲ್ಲಿ ಕಾರ್ಮಿಕ ವರ್ಗದ ಸರ್ವಾಧಿಕಾರದಿಂದ ತಕ್ಷಣದಲ್ಲಿ, ಮೊದಲಿಗೆ ಮತ್ತು ಅತಿಹೆಚ್ಚು ಪ್ರಯೋಜನ ಪಡೆದವರು ರೈತರೇ. ಜಮೀನ್ದಾರರು ಮತ್ತು ಬಂಡವಾಳಶಾಹಿಗಳ ಆಳ್ವಿಕೆಯಲ್ಲಿ ರೈತರು ಅರೆಹೊಟ್ಟೆಯಲ್ಲೇ ಬದುಕಿದ್ದರು. ಶತಮಾನಗಳಿಂದ ರೈತರು ತಮಗಾಗಿ ದುಡಿಯುವ ಅವಕಾಶವನ್ನು ಎಂದೂ ಪಡೆಯಲಿಲ್ಲ. ಕಾರ್ಮಿಕ ವರ್ಗದ ಸರ್ವಾಧಿಕಾರದಡಿಯಲ್ಲಿ ರೈತರು ಮೊಟ್ಟ ಮೊದಲ ಬಾರಿಗೆ ತಮಗಾಗಿ ದುಡಿಯುತ್ತಿದ್ದಾರೆ ಮತ್ತು ನಗರವಾಸಿಗಳಿಗಿಂತ ಉತ್ತಮ ಆಹಾರ ಸೇವಿಸುತ್ತಿದ್ದಾರೆ. ರೈತರು ಮೊದಲ ಬಾರಿಗೆ ಸ್ವಾತಂತ್ರ್ಯವನ್ನು, ತಾವೇ ಬೆಳೆದ ಅನ್ನವನ್ನು ತಿನ್ನುವ ಸ್ವಾತಂತ್ರ್ಯವನ್ನು, ಹಸಿವೆಯಿಂದ ಸ್ವಾತಂತ್ರ್ಯವನ್ನು ಕಂಡಿದ್ದಾರೆ. ಭೂಮಿಯ ಹಂಚಿಕೆಯಲ್ಲೂ ಗರಿಷ್ಠ ಸಮಾನತೆಯನ್ನು ಸ್ಥಾಪಿಸಲಾಗಿದೆ, ಬಹುತೇಕ ಪ್ರಕರಣಗಳಲ್ಲಿ ರೈತರು ತಮ್ಮ ಕುಟುಂಬಗಳಲ್ಲಿರುವ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಭೂಮಿಯನ್ನು ವಿಂಗಡಣೆ ಮಾಡಿಕೊಂಡಿದ್ದಾರೆ.

### ಸಮಾಜವಾದವೆಂದರೆ ವರ್ಗಗಳ ನಿರ್ಮೂಲನೆ

ವರ್ಗಗಳನ್ನು ನಿರ್ಮೂಲನೆ ಮಾಡಬೇಕೆಂದರೆ ಮೊದಲಿಗೆ ಭೂಮಾಲೀಕರು ಮತ್ತು ಬಂಡವಾಳಶಾಹಿಗಳನ್ನು ಕಿತ್ತೊಗೆಯಬೇಕು. ಈ ಭಾಗವನ್ನು ಈಗಾಗಲೇ ಸಾಧಿಸಲಾಗಿದೆ. ಇದು ಕಠಿಣವಾದದ್ದಲ್ಲ. ಎರಡನೆಯದಾಗಿ ಕಾರ್ಖಾನೆಯ ಕಾರ್ಮಿಕ ಹಾಗೂ ರೈತನ ನಡುವಿನ ಅಂತರವನ್ನು ನಿರ್ಮೂಲನೆ ಮಾಡಿ, ಎಲ್ಲರನ್ನೂ ಕಾರ್ಮಿಕರನ್ನಾಗಿ ಮಾಡಬೇಕು. ಇದನ್ನು ಒಂದೇ ಏಟಿಗೆ ಮಾಡಲು ಸಾಧ್ಯವಿಲ್ಲ. ಇದು ಎಷ್ಟು ಕಠಿಣವಾದ ಮತ್ತು ದೀರ್ಘ ಸಮಯ ಬಯಸುವ ಕೆಲಸವೆಂದರೆ, ಇದಕ್ಕೆ ಸರಿಸಾಟಿಯೇ ಇಲ್ಲ. ಇದು ಒಂದು ವರ್ಗವನ್ನು ಅಧಿಕಾರದಿಂದ ಕಿತ್ತೊಗೆಯುವ ಮೂಲಕ ಪರಿಹರಿಸುವ ಸಮಸ್ಯೆಯಲ್ಲ. ಇದನ್ನು ಇಡೀ ಸಾಮಾಜಿಕ ಆರ್ಥಿಕತೆಯನ್ನು ಮರುರಚನೆ ಮಾಡುವ ಮೂಲಕ, ವ್ಯಕ್ತಿಗತ, ಅಸಂಘಟಿತ, ಸಣ್ಣ ಮಟ್ಟದ ಸರಕು ಉತ್ಪಾದನೆಯನ್ನು ಬೃಹತ್ ಪ್ರಮಾಣದ ಸಾಮಾಜಿಕ ಉತ್ಪಾದನೆಯಾಗಿ ಪರಿವರ್ತನೆ ಮಾಡುವ ಮೂಲಕ ಮಾತ್ರ ಪರಿಹರಿಸಬಹುದು. ಇದು ಸಮಯ ಬಯಸುವಂಥದ್ದು. ದುಡುಕಿನ ಮತ್ತು ಎಚ್ಚರ

3ನೇ ಪುಟಕ್ಕೆ....

## ಕಾರ್ಮಿಕ ವರ್ಗದ ಸರ್ವಾಧಿಕಾರದ ಕಾಲಘಟ್ಟದಲ್ಲಿ ರಾಜಕೀಯ ಮತ್ತು ಆರ್ಥಿಕತೆ

3ನೇ ಪುಟದಿಂದ...

ರಹಿತ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಕ್ರಮಗಳಿಂದ ಇದು ಇನ್ನಷ್ಟು ಕ್ಲಿಷ್ಟಗೊಂಡು ತಡವಾಗಬಹುದು. ರೈತನಿಗೆ ಆತನ ಕೃಷಿ ಕೌಶಲ್ಯವನ್ನು ಸಾಕಷ್ಟು ಉತ್ತಮ ಪಡಿಸಲು ಸಹಾಯ ಮಾಡುವ ಮೂಲಕ ಮಾತ್ರವೇ ಕ್ರಾಂತಿಕಾರಿ ಬದಲಾವಣೆಗೆ ವೇಗವರ್ಧನೆ ನೀಡಲು ಸಾಧ್ಯ.

ಈ ಕಷ್ಟದ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರದಲ್ಲಿನ ಕಾರ್ಮಿಕ ವರ್ಗವು ಮಾಡಬೇಕಾದುದ್ದೆಂದರೆ, ರೈತ ಕಾರ್ಮಿಕರನ್ನು ರೈತ ಮಾಲೀಕರಿಂದ, ದುಡಿಯುವ ರೈತರನ್ನು ವ್ಯಾಪಾರಿ ರೈತರಿಂದ, ಕೃಷಿ ಕಾರ್ಮಿಕರನ್ನು ಲಾಭಕೋರ ರೈತರಿಂದ ಪ್ರತ್ಯೇಕಿಸುವ ಕೆಲಸ. ಇದರಲ್ಲೇ ಸಮಾಜವಾದದ ಇಡೀ ಜೀವಾಳ ಅಡಗಿರುವುದು. ಆದರೆ ವಾಸ್ತವ ಬದುಕಿನಲ್ಲಿ ಈ ಅಂತರವನ್ನು ಗುರುತಿಸುವುದು ಸುಲಭವಲ್ಲ, ಆದರೂ ಇದು ಅಸಾಧ್ಯವೇನಲ್ಲ. 1918–19ರ ಅವಧಿಯಲ್ಲಿ ಯಾವ ರೈತ ನೂತನ ಕಾರ್ಮಿಕವರ್ಗದ ಸರ್ಕಾರದಲ್ಲಿ ಇತಿಮಿತಿಗಳಿದ್ದರೂ, ಅವನ್ನೆಲ್ಲಾ ಸಹಿಸಿಕೊಂಡು ನಗರಗಳ ಹಸಿದ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿದ ದರದಲ್ಲಿ 400 ಲಕ್ಷ ಪೂಡ್ ಧಾನ್ಯಗಳನ್ನು ಪೂರೈಸಿದನೋ, ಆ ರೈತನೇ ದುಡಿಮೆಗಾರ ರೈತ. ಆತ ನಮ್ಮ ಕಾಮ್ರೇಡ್ ಆಗಿದ್ದು, ಸಮಾಜವಾದಿ ಕಾರ್ಮಿಕನಿಗೆ ಸಮನಾದವನು, ಬಂಡವಾಳಶಾಹಿಯ ವಿರುದ್ಧದ ಸಮರದಲ್ಲಿ ಅವನ ಸಹೋದರ. ಆದರೆ, ಯಾವ ರೈತ, ನಗರದ ಕಾರ್ಮಿಕರ ಹಸಿವಿನ ದುರುಪಯೋಗ ಪಡೆದುಕೊಂಡು, ಸರ್ಕಾರವನ್ನು ವಂಚಿಸಿ, ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹತ್ತುಪಟ್ಟು ಹೆಚ್ಚು ಬೆಲೆಗೆ ಕದ್ದುಮುಚ್ಚಿ 400 ಲಕ್ಷ ಪೂಡ್ ಧಾನ್ಯಗಳನ್ನು ಮಾರಾಟ ಮಾಡಿ, ಎಲ್ಲೆಡೆ ಮೋಸ, ದರೋಡೆಗಳಿಗೆ ಎಳಸುತ್ತಾನೋ, ಆ ರೈತ ಒಬ್ಬ ಲಾಭಕೋರ, ಬಂಡವಾಳಶಾಹಿಯ ಮಿತ್ರ, ಕಾರ್ಮಿಕನ ವರ್ಗಶತ್ರು, ಓರ್ವ ಶೋಷಕ.....

ನೀವು ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾತಂತ್ರಕ್ಕೆ ಭಂಗ ತರುವವರು ಎಂದು ಅವರು ನಮ್ಮೆಡೆಗೆ ಎಲ್ಲಾ ದಿಕ್ಕುಗಳಿಂದ ಬೊಬ್ಬೆ ಹೊಡೆಯುತ್ತಾರೆ. ಅದಕ್ಕೆ ಅವರು, ನಮ್ಮ ಸಂವಿಧಾನದಲ್ಲಿ ಲಾಭಕೋರ ರೈತರು–ಕಾರ್ಮಿಕರ ನಡುವಿರುವ ಅಸಮಾನತೆಯನ್ನು, ಸಂವಿಧಾನ ಸಭೆಯ ವಿಸರ್ಜನೆಯನ್ನು, ಹೆಚ್ಚುವರಿ ಧಾನ್ಯಗಳನ್ನು ಬಲವಂತದಿಂದ ವಶಪಡಿಸಿಕೊಂಡಿರುವುದನ್ನು ತೋರಿಸುತ್ತಾರೆ. ನಮ್ಮ ಉತ್ತರವೆಂದರೆ: ದುಡಿಮೆಗಾರ ರೈತರು ಶತಮಾನಗಳಿಂದ ಬಲಿಯಾಗಿರುವ ನೈಜ ಅಸಮಾನತೆಯ ನಿರ್ಮೂಲನೆಗೆ ಮತ್ತು ಸ್ವಾತಂತ್ರ್ಯದ ಕೊರತೆಯ ನಿವಾರಣೆಗೆ ವಿಶ್ವದ ಯಾವ ಪ್ರಭುತ್ವವೂ ಇಷ್ಟು ಕೆಲಸ ಮಾಡಿಲ್ಲ. ನಾವು ದುಡಿಮೆಗಾರ ರೈತ ಮತ್ತು ಲಾಭಕೋರ ರೈತನ ನಡುವಿನ, ಶೋಷಿತ ಮತ್ತು ಶೋಷಕನ ನಡುವಿನ, ಹಸಿದವನ ಮತ್ತು ಹೊಟ್ಟೆ ಬಿರಿಯ ಉಂಡವನ ನಡುವಿನ ಸಮಾನತೆಯನ್ನು ಪುರಸ್ಕರಿಸುವುದಿಲ್ಲ. ಅಥವಾ ಒಬ್ಬ ಇನ್ನೊಬ್ಬನನ್ನು ಶೋಷಿಸುವ ಸ್ವಾತಂತ್ರ್ಯವನ್ನೂ ಒಪ್ಪುವುದಿಲ್ಲ...

ಕಾರ್ಮಿಕ ವರ್ಗದ ಸರ್ವಾಧಿಕಾರದ ಕಾಲಘಟ್ಟದಲ್ಲಿ ಇನ್ನೂ ವರ್ಗಗಳು ಉಳಿದುಕೊಂಡಿವೆ ಮತ್ತು ಉಳಿದೇ ಉಳಿಯುತ್ತವೆ. ವರ್ಗಗಳು ಕಣ್ಮರೆಯಾದಾಗ ಸರ್ವಾಧಿಕಾರದ ಅಗತ್ಯ ಇರುವುದಿಲ್ಲ. ಕಾರ್ಮಿಕ ವರ್ಗದ ಸರ್ವಾಧಿಕಾರವಿಲ್ಲದೆ ಅವು ಕಣ್ಮರೆಯಾಗುವುದಿಲ್ಲ. ವರ್ಗಗಳು ಉಳಿದಿವೆ, ಆದರೆ ಈ ಕಾಲಘಟ್ಟದಲ್ಲಿ ಪ್ರತಿಯೊಂದು ವರ್ಗವೂ ಬದಲಾವಣೆ ಹೊಂದಿದೆ, ವರ್ಗ ಸಂಬಂಧಗಳೂ ಬದಲಾವಣೆ ಹೊಂದಿವೆ. ಕಾರ್ಮಿಕ ವರ್ಗದ ಸರ್ವಾಧಿಕಾರದಲ್ಲಿ ವರ್ಗ ಸಂಘರ್ಷವು ಕಣ್ಮರೆಯಾಗುವುದಿಲ್ಲ; ಅದು ಬೇರೆಯೇ ಸ್ವರೂಪವನ್ನು ಪಡೆದುಕೊಳ್ಳುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ಕಾರ್ಮಿಕ ವರ್ಗವು ಶೋಷಿತ ವರ್ಗ, ಉತ್ಪಾದನಾ ಮೂಲಗಳಿಂದ ವಂಚಿತವಾದ ವರ್ಗ, ಬಂಡವಾಳಶಾಹಿ ವರ್ಗಕ್ಕೆ ನೇರವಾಗಿ ಮತ್ತು ಸಂಪೂರ್ಣವಾಗಿ ಎದುರಾಳಿಯಾದ ಏಕೈಕ ವರ್ಗ. ಆದ್ದರಿಂದ ಕೊನೆಯವರೆಗೂ ಕ್ರಾಂತಿಕಾರಿಯಾಗಿ ಉಳಿಯುವ ಸಾಮರ್ಥ್ಯವುಳ್ಳ ಏಕೈಕ ವರ್ಗ. ಬಂಡವಾಳಶಾಹಿಯನ್ನು ಕಿತ್ತೊಗೆದು ರಾಜಕೀಯ ಅಧಿಕಾರವನ್ನು ಗೆದ್ದ ಮೇಲೆ ಕಾರ್ಮಿಕ ವರ್ಗವು ಆಳುವ ವರ್ಗವಾಗಿದೆ, ಅದು ರಾಜ್ಯಾಧಿಕಾರದ ಮೇಲೆ ನಿಯಂತ್ರಣ ಹೊಂದಿದೆ, ಈಗಾಗಲೇ ಸಾಮಾಜೀಕರಣ ಗೊಂಡಿರುವ ಉತ್ಪಾದನಾ ಮೂಲಗಳ ಮೇಲೆ ಹತೋಟಿ ಪಡೆದಿದೆ, ಅದು ಚಂಚಲವಾದ ಮಧ್ಯಮ ವರ್ಗಗಳಿಗೆ ಮತ್ತು ಶಕ್ತಿಗಳಿಗೆ ಮಾರ್ಗದರ್ಶನ ನೀಡುತ್ತದೆ. ಇವೆಲ್ಲವೂ ವರ್ಗ ಸಂಘರ್ಷದ ನಿರ್ದಿಷ್ಟ ಕಾರ್ಯಗಳು. ಇವುಗಳನ್ನು ಹಿಂದೆ ಕಾರ್ಮಿಕ ವರ್ಗ ಮಾಡಿಲ್ಲ, ಮಾಡಲು ಸಾಧ್ಯವೂ ಇರಲಿಲ್ಲ.

ಇಲ್ಲಿ ಭೂಮಾಲಿಕರು ಮತ್ತು ಬಂಡವಾಳಶಾಹಿಗಳ ಶೋಷಕ ವರ್ಗವು ನಿರ್ಮೂಲನೆಯಾಗಿಲ್ಲ ಮತ್ತು ಒಂದೇ ಏಟಿಗೆ ಅದು ಸಾಧ್ಯವೂ ಇಲ್ಲ. ಅವರು ಅಪ್ಪಚ್ಚಿಯಾಗಿದ್ದಾರೆ, ಆದರೆ ನಾಶ ಹೊಂದಿಲ್ಲ. ಅವರಿಗೆ ಇನ್ನೂ ಅಂತರರಾಷ್ಟ್ರೀಯ ಬಂಡವಾಳಶಾಹಿಯ ರೂಪದಲ್ಲಿ ಒಂದು ಬುನಾದಿ ಇದೆ. ಅವರು ಇನ್ನೂ ಕೆಲವು ಉತ್ಪಾದನಾ ಮೂಲಗಳನ್ನು ಉಳಿಸಿಕೊಂಡಿದ್ದಾರೆ, ಅವರಲ್ಲಿ ಇನ್ನೂ ಹಣವಿದೆ, ವಿಶಾಲ ಸಾಮಾಜಿಕ ಸಂಪರ್ಕವಿದೆ. ಅವರು ಸೋತಿರುವ ಕಾರಣ ಅವರ ಪ್ರತಿರೋಧದ ಶಕ್ತಿಯು ನೂರು, ಸಾವಿರ ಪಟ್ಟು ಹೆಚ್ಚಾಗಿದೆ. ಸರ್ಕಾರ, ಮಿಲಿಟರಿ, ಆರ್ಥಿಕ, ಆಡಳಿತಾತ್ಮಕ ಕೌಶಲ್ಯವು ಅವರಿಗೆ ಹೆಚ್ಚುಗಾರಿಕೆಯನ್ನು ತಂದು ಕೊಟ್ಟಿವೆ. ಹಾಗಾಗಿ, ಅವರು ಎಷ್ಟು ಜನ ಇದ್ದಾರೋ, ಅದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ಅವರಿಗೆ ಬಂದಿದೆ. ಆದ್ದರಿಂದ ವರ್ಗ ಸಂಘರ್ಷವು ಹೆಚ್ಚು ತೀಕ್ಷ್ಣವಾಗಿದೆ.....

ಕೊನೆಯದಾಗಿ, ಕಾರ್ಮಿಕ ವರ್ಗದ ಸರ್ವಾಧಿಕಾರದಡಿಯಲ್ಲಿ ಕೂಡ ರೈತರು ಪೆಟಿ ಬೂರ್ಜ್ವಾಸಿಗಳಂತೆ ಸಾಮಾನ್ಯವಾಗಿ, ಮಧ್ಯಂತರ ಸ್ಥಾನದಲ್ಲಿದ್ದಾರೆ. ಒಂದೆಡೆ ಅವರು ಭೂಮಾಲಿಕರ ಮತ್ತು ಬಂಡವಾಳಶಾಹಿಗಳ ಶೋಷಣೆಯಿಂದ ವಿಮುಕ್ತಿ ಪಡೆಯಲು ಕಾರ್ಮಿಕರೊಂದಿಗೆ ಕೈಜೋಡಿಸಿದ ದೊಡ್ಡ ಸಂಖ್ಯೆಯ ದುಡಿಯುವ ಜನ ಸಮೂಹವೂ ಹೌದು, ಇನ್ನೊಂದೆಡೆ, ಅವರು ಅಸಂಘಟಿತರಾದ ಸಣ್ಣ ಆಸ್ತಿ ಒಡೆಯರು, ವ್ಯಾಪಾರಿಗಳೂ ಹೌದು. ಅವರ ಈ ಆರ್ಥಿಕ ಸ್ಥಾನಮಾನ ಅವರನ್ನು ಕಾರ್ಮಿಕ ವರ್ಗ ಮತ್ತು ಬಂಡವಾಳಶಾಹಿ ವರ್ಗಗಳ ನಡುವೆ ಹೊಯ್ದಾಡುವಂತೆ ಮಾಡುತ್ತದೆ....ಇಂತಹ ವರ್ಗದ ಮೇಲೆ ತನ್ನ ಪ್ರಭಾವ ಬೀರಲು, ಅದಕ್ಕೆ ಮಾರ್ಗದರ್ಶನ ನೀಡಲು ಮತ್ತು ನಾಯಕತ್ವ ನೀಡಲು ಕಾರ್ಮಿಕ ವರ್ಗವು ಪ್ರಯತ್ನಿಸಬೇಕು.....

ಪ್ರಜಾಪ್ರಭುತ್ವದ ಮೂಲಕ ಸಮಾಜವಾದದೆಡೆಗೆ ಪರಿವರ್ತನೆ ಸಾಧ್ಯವಿದೆ ಎಂಬ ಎರಡನೇ ಅಂತರರಾಷ್ಟ್ರೀಯದ ಪ್ರತಿನಿಧಿಗಳ ಸಾಮಾನ್ಯೀಕೃತ ಹೇಳಿಕೆಗಳು ಎಂತಹ ಅಸಂಬದ್ಧ ಮತ್ತು ಸೈದ್ಧಾಂತಿಕ ಮೂರ್ಖತನ ಎಂಬುದನ್ನು ಅರಿಯಬೇಕಿದೆ. ಪ್ರಜಾಪ್ರಭುತ್ವ ಎಂಬುದು ನಿರಪೇಕ್ಷ ಮತ್ತು ವರ್ಗಗಳನ್ನುಮೀರಿದ್ದು ಎಂಬ ಪೂರ್ವಗ್ರಹವೇ ಇಂತಹ ತಪ್ಪಿನ ಮೂಲ....ಸ್ವಾತಂತ್ರ್ಯ, ಸಮಾನತೆ ಮತ್ತು ಪ್ರಜಾತಂತ್ರಗಳ ಕುರಿತಾದ ಸಾಮಾನ್ಯ ಮಾತುಗಳು ಬಂಡವಾಳಶಾಹಿ ಸರಕು ಉತ್ಪಾದನಾ ಸಂಬಂಧಗಳಿಂದ ರೂಪುಗೊಂಡಿರುವ ಪರಿಕಲ್ಪನೆಗಳ ಕುರುಡಾದ ಪುನರಾವರ್ತನೆಯೇ. ಕಾರ್ಮಿಕ ವರ್ಗದ ಸರ್ವಾಧಿಕಾರದ ನಿರ್ದಿಷ್ಟ ಸಮಸ್ಯೆಗಳನ್ನು ಇಂತಹ ಸಾಮಾನ್ಯೀಕರಣಗಳಿಂದ ಪರಿಹರಿಸಲು ಯತ್ನಿಸುವುದೆಂದರೆ ಬಂಡವಾಳಶಾಹಿ ವರ್ಗದ ತತ್ವ, ಸಿದ್ಧಾಂತಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತೆಯೇ ಸರಿ.

ಕಾರ್ಮಿಕ ವರ್ಗದ ದೃಷ್ಟಿಯಿಂದ ಕೇಳಬಹುದಾದ ಪ್ರಶ್ನೆಯೆಂದರೆ, ಯಾವ ವರ್ಗದ ಶೋಷಣೆಯಿಂದ ಸ್ವಾತಂತ್ರ್ಯ? ಯಾವ ವರ್ಗದೊಂದಿಗೆ ಯಾವ ವರ್ಗಕ್ಕೆ ಸಮಾನತೆ? ಪ್ರಜಾಪ್ರಭುತ್ವವೆಂಬುದು ಆಧಾರಿತವಾಗಿರುವುದು ಖಾಸಗಿ ಆಸ್ತಿಯ ಮೇಲೆಯೇ ಅಥವಾ ಖಾಸಗಿ ಆಸ್ತಿ ನಿರ್ಮೂಲನೆಗಾಗಿ ನಡೆಯುವ ಸಂಘರ್ಷದ ಮೇಲೆಯೇ?

ತುಂಬಾ ಹಿಂದೆಯೇ ಎಂಗೆಲ್ಸ್, ತಮ್ಮ ಆಂಟಿ ಡ್ಯೂರಿಂಗ್ (Anti Duhring) ಕೃತಿಯಲ್ಲಿ – ಸಮಾನತೆಯ ಪರಿಕಲ್ಪನೆಯು ಸರಕು ಉತ್ಪಾದನಾ ಸಂಬಂಧಗಳಿಂದ ರೂಪುಗೊಂಡಿದೆ; ಸಮಾನತೆ ಎಂಬುದನ್ನು ವರ್ಗಗಳ ನಿರ್ಮೂಲನೆ ಎಂದು ಅರ್ಥೈಸದೇ ಹೋದರೆ ಅದು ಒಂದು ಪೂರ್ವಗ್ರಹ ಎಂದು ವಿವರಿಸಿದ್ದಾರೆ. ಬಂಡವಾಳಶಾಹಿ ಜನತಂತ್ರ ಮತ್ತು ಸಮಾಜವಾದಿ ಸಮಾನತೆಗಳ ನಡುವೆ ಇರುವ ವಿಭಿನ್ನತೆಯನ್ನು ಸತತವಾಗಿ ಮರೆಯಲಾಗುತ್ತಿದೆ. ಇದನ್ನು ಮರೆಯದಿದ್ದರೆ, ಆಗ ಕಾರ್ಮಿಕ ವರ್ಗವು ಬಂಡವಾಳಶಾಹಿಯನ್ನು ಕಿತ್ತೊಗೆಯುವುದರ ಮೂಲಕ ವರ್ಗಗಳ ನಿರ್ಮೂಲನೆಯ ಕಡೆಗೆ ಅತ್ಯಂತ ನಿರ್ಣಾಯಕ ಹೆಜ್ಜೆಯನ್ನು ಇಡುತ್ತದೆ ಎಂಬುದು ನಿಚ್ಚಳವಾಗುತ್ತದೆ. ಮತ್ತು ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕಾರ್ಮಿಕ ವರ್ಗವು ವರ್ಗ ಸಂಘರ್ಷವನ್ನು ಮುಂದುವರಿಸಬೇಕು, ಅದಕ್ಕಾಗಿ ರಾಜ್ಯಾಧಿಕಾರದ ಅಸ್ತ್ರವನ್ನು ಬಳಸಿಕೊಂಡು ವಿವಿಧ ಯುದ್ಧ ತಂತ್ರಗಳ ಮೂಲಕ ಪದಚ್ಯುತ ಬಂಡವಾಳಶಾಹಿ ವರ್ಗ ಮತ್ತು ಚಂಚಲ ಪೆಟಿ ಬೂರ್ಜ್ವಾಸಿಗಳ ಮೇಲೆ ಒತ್ತಡ ಹೇರಬೇಕು ಎಂಬುದು ಸ್ಪಷ್ಟವಾಗುತ್ತದೆ.

(ಕಲೆಕ್ಟೆಡ್ ವರ್ಕ್ಸ್, ಸಂಪುಟ 30, ಪುಟ 107–117. ಸಂಕ್ಷಿಪ್ತ ಅನುವಾದ)

## ಕಲಬುರ್ಗಿ: ರೈಲ್ವೆ ಸೌಲಭ್ಯಗಳಿಗಾಗಿ ಪ್ರತಿಭಟನೆ

ರೈಲ್ವೆ ಖಾಸಗೀಕರಣವನ್ನು ವಿರೋಧಿಸಿ, ರೈಲ್ವೆ ನಿಲ್ದಾಣಕ್ಕೆ ಮೂಲ ಸೌಕರ್ಯಗಳನ್ನು ಒದಗಿಸಲು, ಕಲಬುರ್ಗಿಯಿಂದ ಬೆಂಗಳೂರಿಗೆ ಫಾಸ್ಟ್ ಪ್ಯಾಸೆಂಜರ್ ರೈಲು ಆರಂಭಿಸಲು ಆಗ್ರಹಿಸಿ ಎಸ್‌ಯುಸಿಐ(ಸಿ) ಪಕ್ಷದ ವತಿಯಿಂದ ಕಲಬುರ್ಗಿ ಮತ್ತು ಶಹಾಬಾದ್ ರೈಲ್ವೆ ನಿಲ್ದಾಣಗಳ ಮುಂದೆ ಪ್ರತಿಭಟನೆ ನಡೆಸಲಾಯಿತು.







### ಕೊಪ್ಪಳ: ಕಾಳಿದಾಸ ನಗರಕ್ಕೆ ಮೂಲಭೂತ ಸೌಕರ್ಯಗಳಿಗಾಗಿ ಒತ್ತಾಯಿಸಿ ನಡೆದ ಪ್ರತಿಭಟನೆ



# ಬಗೆಹರಿಯದ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳ ಒಳಜಗಳ

## ಬದಲಾಗದ ಹೊಸ ಕಾಂಗ್ರೆಸ್ ಸರ್ಕಾರದ ನೀತಿ – ಧೋರಣೆಗಳು

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಎಂಟು ತಿಂಗಳು ಕಳೆದು ಹೋದವು. ಹಿಂದಿನ ಬಿಜೆಪಿ ಸರಕಾರದ ಭಾರೀ ಭ್ರಷ್ಟಾಚಾರದಿಂದ ಬೇಸತ್ತಿದ್ದ ಜನ ದೊಡ್ಡ ಬಹುಮತದೊಂದಿಗೆ ಕಾಂಗ್ರೆಸ್ಸನ್ನು ಬೆಂಬಲಿಸಿ ಅಧಿಕಾರಕ್ಕೆ ತಂದಿದ್ದರು. ಆದರೆ ಚುನಾವಣೆಯ ಫಲಿತಾಂಶ ಘೋಷಣೆಯಾದರೂ ಮುಖ್ಯಮಂತ್ರಿಯ ಸ್ಥಾನದ ಆಯ್ಕೆ ಕಾಂಗ್ರೆಸ್‌ಗೆ ಕಠಿಣ ಸವಾಲಾಗಿತ್ತು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಮುಸುಕಿನ ಗುದ್ದಾಟದಿಂದಾಗಿ ರಾಜ್ಯದ ಜನತೆ ತಮ್ಮ ಚುನಾಯಿತ ಮುಖ್ಯಮಂತ್ರಿಯ ಮುಖ ನೋಡಲು ದಿನಗಟ್ಟಲೆ ಕಾಯಬೇಕಾಯಿತು. ಅಂತೂ ಇಂತೂ ಹೊಂದಾಣಿಕೆಯೊಂದಿಗೆ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿ ಮತ್ತು ಶಿವಕುಮಾರ್‌ರವರು ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ ಅಂದಿನಿಂದ ಇಂದಿನವರೆಗೆ ಕಾಂಗ್ರೆಸ್‌ನಲ್ಲಿ ಒಳ ಜಗಳ, ಬಣ ರಾಜಕೀಯ ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಲೇ ಇವೆ. ಮೂರು ಜನ ಉಪಮುಖ್ಯಮಂತ್ರಿಗಳು ಇರಬೇಕೆಂದು, ಹಿರಿಯ ನಾಯಕರನ್ನು ಮಂತ್ರಿಗಳನ್ನು ಮಾಡಬೇಕೆಂದು, ಸಿದ್ದರಾಮಯ್ಯನವರು ಎರಡು ವರ್ಷದ ನಂತರ ನಿರ್ಗಮಿಸುತ್ತಾರೆ ಎಂದು, ನಿಗಮ ಮಂಡಳಿಗಳಿಗೆ ಶಾಸಕರನ್ನು, ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸದಿದ್ದರೆ ಅವರು ಪಕ್ಷ ಬಿಟ್ಟು ಹೋಗುತ್ತಾರೆ ಎನ್ನುವ ವಿವಿಧ ರೀತಿಯ ಸುದ್ದಿಗಳು ಕಾಂಗ್ರೆಸ್ ವಲಯದಿಂದಲೇ ಹರಿದಾಡುತ್ತಿವೆ. ಇದಕ್ಕೆ ಕಡಿವಾಣ ಬೀಳುವ ಲಕ್ಷಣಗಳು ಸದ್ಯದಲ್ಲಿ ಕಾಣುತ್ತಿಲ್ಲ.

ಪ್ರಧಾನಿ ಮೋದಿ ಅವರ ಮುಖ ತೋರಿಸಿ ಅಬ್ಬರದ ಪ್ರಚಾರ ನಡೆಸಿ ಅಧಿಕಾರಕ್ಕೆ ಒಂದೇ ಗೇಣು ಎಂದು ಎಣಿಸಿದ್ದ ಬಿಜೆಪಿ ರಾಜ್ಯದಲ್ಲಿ ಹೀನಾಯ ಸೋಲು ಕಂಡು ಕೇವಲ 65 ಸ್ಥಾನಗಳಿಗೆ ಕುಸಿದ ನಂತರ ಮುರಿದ ಮನೆಯಂತಾಗಿದೆ. ಆರು ತಿಂಗಳಾದರೂ ವಿರೋಧ ಪಕ್ಷದ ನಾಯಕರನ್ನು ಮತ್ತು ಹೊಸ ರಾಜ್ಯ ಅಧ್ಯಕ್ಷರನ್ನು ನೇಮಿಸಲು ಸಾಧ್ಯವಾಗದ ಸ್ಥಿತಿ ತಲುಪಿ ಜನರ ಅಪಹಾಸ್ಯಕ್ಕೆ ಗುರಿಯಾಯಿತು. ಮಾಜಿ ಮುಖ್ಯಮಂತ್ರಿ ಮತ್ತು ಅಂದಿನ ಬಿಜೆಪಿ ಹಿರಿಯ ನಾಯಕರಾಗಿದ್ದ ಜಗದೀಶ್ ಶೆಟ್ಟರ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ಮೂಲಕ ನಿರಂತರವಾಗಿ ಬಿಜೆಪಿಯ ರಾಷ್ಟ್ರ ನಾಯಕರನ್ನು ಮತ್ತು ಬಿಜೆಪಿಯ ಪಕ್ಷಪಾತ ಧೋರಣೆಯನ್ನು ಕಟುವಾಗಿ ವಿಮರ್ಶಿಸುತ್ತಾ ಬಂದಿದ್ದಾರೆ. ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ಅವರು ಸಹ ಪರೋಕ್ಷವಾಗಿ ಬಿಜೆಪಿಯ ಹೈಕಮಾಂಡ್ ಅನ್ನು ಟೀಕಿಸುತ್ತಾ ಬಂದಿದ್ದಾರೆ. ಆರು ತಿಂಗಳ ಬಳಿಕ ವಿಜಯೇಂದ್ರ ಬಿಜೆಪಿಯ ರಾಜ್ಯ ಅಧ್ಯಕ್ಷರಾಗಿ, ಆರ್. ಅಶೋಕ್ ಅವರು ವಿರೋಧ ಪಕ್ಷದ ನಾಯಕರಾಗಿ ನೇಮಕಗೊಂಡರೂ, ಬಿಜೆಪಿಯ ಒಳ ಜಗಳ ತಾರಕಕ್ಕೆ ಏರಿದೆಯೇ. ಹೊರತು ಶಮನವಾಗಿಲ್ಲ. ಬಿಜೆಪಿಯ ಕಟ್ಟಾಳುಗಳೆಂದು ಬಿಂಬಿಸಿಕೊಂಡಿದ್ದ ಹಲವಾರು ಹಿರಿಯ ನಾಯಕರು ಮುನಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದ ಪ್ರಬಲ ನಾಯಕನೆಂದು ತಮ್ಮನ್ನು ಬಿಂಬಿಸಿಕೊಂಡಿರುವ ಬಸವನಗೌಡ ಪಾಟೀಲ್ ಯತ್ನಾಳ್ ಅವರು ನಿರಂತರವಾಗಿ ಬಿಜೆಪಿಯ ಆಂತರಿಕ ನಿರ್ವಹಣೆಯನ್ನು ಬಹಿರಂಗವಾಗಿ ಟೀಕಿಸುತ್ತ ಬಂದಿದ್ದಾರೆ. ಕೋವಿಡ್ ಸಂಕಷ್ಟದ ದಿನಗಳಲ್ಲಿಯೇ ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ, 40 ಸಾವಿರ ಕೋಟಿ ರೂ.ಗಳ ಹಗರಣ ನಡೆದಿದೆ ಎಂದು, ಅದಕ್ಕೆ ಬೇಕಾದ ದಾಖಲೆಗಳು ತಮ್ಮಲ್ಲಿ ಇವೆ ಎಂದು ಹೇಳಿಕೊಂಡಿದ್ದಾರೆ, ತಾಕತ್ತಿದ್ದರೆ ತಮ್ಮನ್ನು ಪಕ್ಷದಿಂದ ವಜಾಗೊಳಿಸಲಿ, ದಾಖಲೆಗಳನ್ನು ಬಿಡುಗಡೆಗೊಳಿಸುತ್ತೇನೆ ಎಂದು ಸವಾಲು ಹಾಕಿದ್ದಾರೆ. ಇದರಿಂದ ದಿಗ್ಭ್ರಮೆಗೆ ಒಳಗಾಗಿರುವ ಬಿಜೆಪಿ ರಾಜ್ಯದಲ್ಲಿ ಅಸಹಾಯಕ ಸ್ಥಿತಿಯಲ್ಲಿ ನಲುಗಿ ಹೋಗಿದೆ.

### ಸಂದರ್ಭಸಾಧಕ ಜೆಡಿಎಸ್ – ಬಿಜೆಪಿ ಅಪವಿತ್ರ ಮೈತ್ರಿ

ಇನ್ನೊಂದೆಡೆ, ಅತಂತ್ರ ಸ್ಥಿತಿಯ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗುವ ಕನಸು ಕಂಡಿದ್ದ ಜೆಡಿ(ಎಸ್) ನ ಕುಮಾರಸ್ವಾಮಿ ಅವರು, ಅವರ ತಂದೆ ಮಾಜಿ ಪ್ರಧಾನಿ ದೇವೇಗೌಡರು ಉಪಾಯದಿಂದ ವರಸೆ ಬದಲಾಯಿಸಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ. ಹಿಂದೆ ಜೆಡಿ(ಎಸ್)– ಬಿಜೆಪಿ ಮೈತ್ರಿ ಸರ್ಕಾರ ರಚನೆಯಾಗಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅದು ತಮ್ಮ ನಿರ್ಧಾರವಲ್ಲ, ಕುಮಾರಸ್ವಾಮಿಯ ನಿರ್ಧಾರ, ಅದು ತಪ್ಪು ನಡೆ ಎಂದು ಸಾರ್ವಜನಿಕವಾಗಿ ತಮ್ಮನ್ನು ಸೆಕ್ಯುಲರ್ ರಾಜಕಾರಣಿ ಎಂದು ಬಿಂಬಿಸಿಕೊಂಡಿದ್ದ ದೇವೇಗೌಡರು ಈಗ ಬಿಜೆಪಿ ಬಿಟ್ಟು ದೇಶದಲ್ಲಿ ಯಾರೂ ರಾಜಕಾರಣ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಮುಂದಿನ ಅವಧಿಗೆ ಕೇಂದ್ರದಲ್ಲಿ ಮೋದಿಯವರು ಪ್ರಧಾನಿಯಾಗಿ ಆಯ್ಕೆಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಈ ಎಲ್ಲಾ ಹೊಗಳಿಕೆಗಳು ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಜೆಡಿ(ಎಸ್), ಅಸ್ಥಿರತೆ ಹೊಂದಿರುವ ಬಿಜೆಪಿಯಿಂದ ಲಾಭ ಪಡೆದುಕೊಂಡು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲು ಹುನ್ನಾರವೆಂಬುದು ಇಂದಿನ ರಾಜಕೀಯದ ಪ್ರಾಥಮಿಕ ಪಾಠ ಗೊತ್ತಿದ್ದವರಿಗೂ ಅರಿವಾಗುತ್ತಿದೆ! ದೇವೇಗೌಡ ಕುಟುಂಬದ ಬಿಜೆಪಿ ಸಖ್ಯವನ್ನು ವಿರೋಧಿಸಿ ಜೆಡಿ(ಎಸ್)ನ ರಾಜ್ಯ ಅಧ್ಯಕ್ಷರಾಗಿದ್ದ ಸಿ.ಎಂ. ಇಬ್ರಾಹಿಂ ರವರು ಬಂಡಾಯ ಹೂಡಿದ್ದಾರೆ. ಈಗ ರಾಷ್ಟ್ರಮಟ್ಟದಲ್ಲಿ ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಜೆಡಿ(ಎಸ್)ನಾಯಕರು ತಮ್ಮದೇ ನಿಜವಾದ ಜೆಡಿ(ಎಸ್) ಎಂದು ಘೋಷಿಸಿಕೊಂಡು ಪ್ರತ್ಯೇಕ ಪದಾಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ.

ಕಳೆದ ಒಂದು ವರ್ಷದ ಕರ್ನಾಟಕದ ರಾಜಕೀಯದಲ್ಲಿ ಯಾರು ಯಾವ ಪಕ್ಷದಲ್ಲಿದ್ದರು? ಯಾರ ನಿಲುವು ಏನಾಗಿತ್ತು? ಯಾರು ಯಾರನ್ನು ವಿಮರ್ಶೆ ಮಾಡುತ್ತಿದ್ದಾರೆ? ಆ ವಿಮರ್ಶೆ, ಟೀಕೆಗಳ ಹಿಂದಿರುವ ಒಳ ಮರ್ಮಗಳೇನು? ಯಾರು ಯಾರನ್ನು ಟೀಕಿಸಿದರೆ ಯಾವ ಹುದ್ದೆ ದೊರಕಬಹುದು, ಮಂತ್ರಿ– ಅಧಿಕಾರದ ಸ್ಥಾನ ದೊರಕಬಹುದು ಎನ್ನುವ ಹೀನ ಲೆಕ್ಕಾಚಾರಗಳೇ ಕಣ್ಣ ಮುಂದೆ ಗೋಚರಿಸುತ್ತಿವೆ. ರಾಜಕೀಯದಲ್ಲಿ ನೀತಿ, ನೈತಿಕತೆ, ಮೌಲ್ಯಗಳು ಕೊಚ್ಚೆಗುಂಡಿ ಸೇರಿವೆ.

ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಳೆದ 9 ವರ್ಷಗಳಿಂದ ದೇಶದ ಅಭಿವೃದ್ಧಿ ಮಾಡಲಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಅದಾನಿ, ಅಂಬಾನಿ ಸೇರಿದಂತೆ ಕೆಲವೇ ಬಂಡವಾಳಗಾರರ, ಕಾರ್ಪೊರೇಟ್ ಮನೆತನಗಳ ಅಭಿವೃದ್ಧಿಯನ್ನೇ ದೇಶದ ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಬಹುಸಂಖ್ಯಾತ ದುಡಿಯುವ ವರ್ಗ ವಿಪರೀತ ಬೆಲೆ ಏರಿಕೆ, ಶಿಕ್ಷಣ– ಆರೋಗ್ಯದ ವ್ಯಾಪಾರೀಕರಣ, ನಿರುದ್ಯೋಗ, ಹಸಿವು, ಬಡತನ ಮುಂತಾದ ಜ್ವಲಂತ ಸಮಸ್ಯೆಗಳಿಂದ ಕಂಗೆಟ್ಟಿದೆ. ಜನಸಾಮಾನ್ಯರ ಮೇಲೆ ಅತಿಹೆಚ್ಚಿನ ತೆರಿಗೆಯ ಭಾರ ಹೊರಿಸಿ ಕಳೆದ 9 ವರ್ಷಗಳಲ್ಲಿ ಸುಮಾರು 20 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತವನ್ನು ಬಂಡವಾಳಗಾರರಿಗೆ ಕಾರ್ಪೊರೇಟ್ ತೆರಿಗೆ ವಿನಾಯ್ತಿ, ಸಾಲ ಮನ್ನಾ, ವಸೂಲಾಗದ ಸಾಲ, ಉತ್ತೇಜಕಗಳ ಹೆಸರಿನಲ್ಲಿ ನೀಡಲಾಗಿದೆ. ನಿಜವಾಗಿಯೂ ಜನಪರವಾಗಿದ್ದರೆ ಅತಿ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಜನಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಕಳೆದ 9 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಸುಮಾರು 98 ಲಕ್ಷ ಕೋಟಿಗೂ ಅಧಿಕ ಸಾಲ ಮಾಡಿದೆ. 2014 ರಲ್ಲಿ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದಾಗ ಈ ದೇಶದ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ 40 ಸಾವಿರ ರೂಪಾಯಿಗಳಿದ್ದ ಸಾಲವು ಇಂದು 2023ರಲ್ಲಿ 1,46,000 ರೂಪಾಯಿಗಳಿಗೆ ಏರಿದೆ. ಇನ್ನೊಂದೆಡೆ, ಭಾರತದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ತಲಾ ಆದಾಯ ಹೆಚ್ಚಾಗಿದೆ. ಅದು ಡಾಲರ್ 442 ರಿಂದ ಡಾಲರ್ 2389ಕ್ಕೆ ಏರಿಕೆಯಾಗಿದೆ ಎಂದು ಬಿಂಬಿಸಲಾಗುತ್ತಿದೆ. ಆದರೆ ಈ ಅಂಕಿ ಅಂಶಗಳು ವಾಸ್ತವದಲ್ಲಿ ಹೊಸದಾಗಿ ಸೃಷ್ಟಿಯಾಗಿರುವ ಆದಾಯ ಮತ್ತು ಸಂಪತ್ತು ದೇಶದ ಅತಿ ಶ್ರೀಮಂತ ವರ್ಗದ ಪಾಲಾಗಿವೆ. ಎನ್ನುವ ಸತ್ಯವನ್ನು ಮರೆಮಾಚುತ್ತದೆ. ಈ ಸಂಪತ್ತು ದೇಶದ ಶೇ.1 ಅತೀ ಶ್ರೀಮಂತರ ಮತ್ತು ಶೇ.10ರಷ್ಟು ಶ್ರೀಮಂತರ ಪಾಲಾದರೆ, ದೇಶದ ಬಡವರು ಮತ್ತಷ್ಟು ಬಡವರಾಗಿದ್ದಾರೆ. ದೇಶದ ಶೇ.10 ರಷ್ಟು ಶ್ರೀಮಂತರು ಶೇ.57 ರಷ್ಟು ಆದಾಯವನ್ನು ಗಳಿಸುತ್ತಿದ್ದರೆ ಶೇ.1 ರಷ್ಟು ಅತೀ ಶ್ರೀಮಂತರು ಶೇ. 22ರಷ್ಟು ಆದಾಯವನ್ನು ಕಬಳಿಸುತ್ತಿದ್ದಾರೆ. ದೇಶದ ಈ ಪರಿಸ್ಥಿತಿಯ ಪರಿಣಾಮ ಕರ್ನಾಟಕದ ಮೇಲೂ ಆಗಿದೆ ಎನ್ನುವುದನ್ನು ಮರೆಯುವಂತಿಲ್ಲ.

### ಮೋದಿ ಸರ್ಕಾರ ಜಾರಿಗೊಳಿಸಿದ ಆರ್ಥಿಕ ನೀತಿಗಳ ಅವಾಂತರಗಳು ಮತ್ತು ಕರ್ನಾಟಕಕ್ಕೆ ಆಗಿರುವ ದೊಡ್ಡ ಅನ್ಯಾಯ

ಮೋದಿ ಸರ್ಕಾರ ಜಾರಿಗೊಳಿಸಿರುವ 2017ರ ಜಿಎಸ್‌ಟಿ ನೀತಿ ಮತ್ತು 15ನೇ ಹಣಕಾಸು ಆಯೋಗದ ಶಿಫಾರಸ್ಸುಗಳು ಭಾರತದ ಫೆಡರಲ್ ವ್ಯವಸ್ಥೆಗೆ ಮತ್ತು ರಾಜ್ಯಗಳ ಆದಾಯಗಳ ಮೂಲಕ್ಕೇ ಪೆಟ್ಟು ಕೊಟ್ಟಿದೆ. ಅದರಲ್ಲೂ ಕರ್ನಾಟಕಕ್ಕೆ ಭಾರಿ ಹೊಡೆತ ಕೊಟ್ಟಿರುವುದು ಸಾಬೀತಾಗಿದೆ. ಕೇಂದ್ರವು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ತೆರಿಗೆ ಆದಾಯದಲ್ಲಿ ಕರ್ನಾಟಕಕ್ಕೆ ಶೇ. 4.74 ರಷ್ಟು ಸಂದಾಯವಾಗಬೇಕೆಂದು 14ನೇ ಹಣಕಾಸು ಆಯೋಗ ಶಿಫಾರಸ್ಸು ಮಾಡಿತ್ತು. 2019–20 ರವರೆಗೆ ಕರ್ನಾಟಕಕ್ಕೆ ಇದೇ ಪಾಲು ಸಿಗುತ್ತಿತ್ತು. ವಾಸ್ತವದಲ್ಲಿ ಮುಂದಿನ ವರ್ಷಗಳಲ್ಲಿ ಇದು ಇನ್ನೂ ಏರಿಕೆಯಾಗಬೇಕಿತ್ತು. ಆದರೆ 15ನೇ ಹಣಕಾಸು ಆಯೋಗ ಅದನ್ನು ಶೇ. 3.64ಕ್ಕೆ ಇಳಿಸಿತು. ಇದರ ಪರಿಣಾಮವಾಗಿ, ಕರ್ನಾಟಕಕ್ಕೆ ಕೇಂದ್ರದಿಂದ ಬರುವ ರೂ. 48,517 ಕೋಟಿ ರೂಪಾಯಿಗಳಷ್ಟು ಪಾಲು 2023–24 ರಲ್ಲಿ ರೂ.37,252 ಕೋಟಿಗಳಿಗೆ ಕುಸಿಯಿತು. ಅಂದರೆ 2023–24ರ ಆರ್ಥಿಕ ವರ್ಷವೊಂದರಲ್ಲೇ ರೂ. 11,265 ಕೋಟಿಗಳಷ್ಟು ಭಾರೀ ಖೋತಾ ಆಯಿತು. ಆದರೆ ಮೋದಿ ಅವರ ತವರು ರಾಜ್ಯ ಗುಜರಾತಿಗೆ 2018–19ರಲ್ಲಿ ರೂ. 23,489 ಕೋಟಿಗಳಷ್ಟು ತೆರಿಗೆ ಪಾಲು ಸಂದಾಯವಾಗಿದ್ದರೆ, 2023–24 ರಲ್ಲಿ ರೂ.35,525 ಕೋಟಿಗಳನ್ನು ನೀಡಲಾಗಿದೆ. ಶೇ. 51 ರಷ್ಟು ಬಾರೀ ಜಿಗಿತ! ಇದಕ್ಕೆ ರಾಜಕೀಯ ಕಾರಣಗಳನ್ನು ಬಿಟ್ಟರೆ ಯಾವ ವೈಜ್ಞಾನಿಕ ಮಾನದಂಡಗಳೂ ಕಾಣುತ್ತಿಲ್ಲವೆಂದು ಸ್ವತಃ ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

### ಅಧಿಕಾರದಲ್ಲಿ ಆಸೀನವಾಗಿರುವ ಕಾಂಗ್ರೆಸ್ ರಾಜ್ಯದಲ್ಲಿ ಮಾಡಿದ್ದೇನು?

ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಯಾವುದೇ ಜನಕಲ್ಯಾಣ ಯೋಜನೆಗಳು ಜಾರಿಗೊಂಡರೆ ಅವು ಸ್ವಾಗತಾರ್ಹ ಕ್ರಮಗಳೇ, ನಾವೂ ಅದನ್ನು ಸ್ವಾಗತಿಸುತ್ತೇವೆ. ಅದೇ ರೀತಿ ಕರ್ನಾಟಕ ಸರ್ಕಾರ ಘೋಷಿಸಿರುವ ಐದು ಗ್ಯಾರಂಟಿಗಳು ಬೆಲೆಯೇರಿಕೆ, ಬಡತನದಲ್ಲಿ ತತ್ತರಿಸಿರುವ ಬಡ ಜನಗಳಿಗೆ ಅಲ್ಪ ಪ್ರಮಾಣದಲ್ಲಿ ನೆರವಾಗುವುದರಲ್ಲಿ ಸಂಶಯವಿಲ್ಲ. ಆದರೆ ಅವುಗಳನ್ನು ಬಡಜನಗಳಿಗೆ ಮುಟ್ಟಿಸುವಲ್ಲಿ ಇನ್ನೂ ಪರಿಣಾಮಕಾರಿಯಾಗಿ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಕಾಂಗ್ರೆಸ್ ಪಕ್ಷ ತಾನು ಘೋಷಿಸಿದ ಐದು ಗ್ಯಾರಂಟಿಗಳ ಬಗ್ಗೆ ಹೆಮ್ಮೆಯಿಂದ ಬೀಗುತ್ತಿದೆ. ಆದರೆ ವಾಸ್ತವದಲ್ಲಿ ಈ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಸಂಪೂರ್ಣವಾಗಿ ತಲುಪಿಸಲು ಇನ್ನೂ ಸಾಧ್ಯವಾಗಿಲ್ಲ. ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸಿದ್ದರೂ, ಪ್ರಯಾಣಿಕರ ಅವಶ್ಯಕತೆಗನುಗುಣವಾಗಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಿಲ್ಲ. ಇದರ ಪರಿಣಾಮವಾಗಿ ಎಲ್ಲ ಜನಗಳು ಪ್ರಯಾಣದ ಅವಧಿಯನ್ನು ನಿಂತು, ಜೋತುಬಿದ್ದು ಕಳೆಯು ನರಕ ಯಾತನೆ ಅನುಭವಿಸುವಂತಾಗಿದೆ. ಎಂಟು ತಿಂಗಳ ನಂತರ ಈಗ ಚಾಲನೆ ಪಡೆದಿರುವ ಯುವನಿಧಿ ಹಣವು ಇತ್ತೀಚೆಗೆ ಪದವಿ ಮುಗಿಸಿದ ಆಯ್ದ ಕೆಲವು ನಿರುದ್ಯೋಗಿಗಳಿಗೆ ತಲುಪುತ್ತದೆ. ಆದರೆ ದಶಕಗಳಗಟ್ಟಲೇ ಚಾತಕ ಪಕ್ಷಿಗಳಂತೆ ಕಾದು ಕುಳಿತಿದ್ದ ಅಸಂಖ್ಯಾತ ನಿರುದ್ಯೋಗಿಗಳಿಗೆ ಇದರಿಂದ ಯಾವ ಪ್ರಯೋಜನವೂ ಆಗಿಲ್ಲ. ಬಡತನ ರೇಖೆಗಿಂತ ಕೆಳಗಿರುವ ಲಕ್ಷಾಂತರ ಬಡಜನಗಳಿಗೆ ಪಡಿತರ ಚೀಟಿ ದೊರೆತಿಲ್ಲ ಬದಲಾಗಿ ಅವುಗಳನ್ನು ಕಡಿತಗೊಳಿಸಲಾಗಿದೆ. ಅದೇ ರೀತಿ ಉಳಿದ ಗ್ಯಾರಂಟಿಗಳನ್ನು ಕೂಡ ಅರ್ಹ ಫಲಾನುಭವಿಗಳಿಗೆ ಮುಟ್ಟಿಸಲು ಸಾಧ್ಯವಾಗಿಲ್ಲ ಎನ್ನುವ ವರದಿಗಳು ಬರುತ್ತಲೇ ಇವೆ. ಸರ್ಕಾರ ಇದಕ್ಕೆ ಗಮನ ಕೊಡುವುದು ಸಾಧ್ಯವಾಗಿಲ್ಲ. ಬದಲಾಗಿ ಅದು ಪಕ್ಷದ ಮತ್ತು ಸರ್ಕಾರದ ಆಂತರಿಕ ಸಮಸ್ಯೆಗಳನ್ನು ನಿಭಾಯಿಸಲು ಹೆಣಗಾಡುತ್ತಿದೆ.

### ಬದಲಾಗದ ಸರ್ಕಾರದ ನೀತಿಗಳು– ಧೋರಣೆಗಳು

ಅಧಿಕಾರಕ್ಕೆ ಬಂದ ಎರಡು ತಿಂಗಳ ಒಳಗೆ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಬೆಂಗಳೂರಿನಲ್ಲಿ 25 ಸಾವಿರ ಕೋಟಿ ವೆಚ್ಚದ ದುಬಾರಿ ಟನಲ್ ರಸ್ತೆಯ ಯೋಜನೆಯನ್ನು ಘೋಷಿಸಿದರು. ವಾಸ್ತವದಲ್ಲಿ ದಿನನಿತ್ಯ ಸಂಚರಿಸುವ ಲಕ್ಷಾಂತರ ಸಾಮಾನ್ಯ ಜನಗಳಿಗೆ ಅದು ಉಪಯೋಗವಾಗುವುದಿಲ್ಲ. ಬದಲಾಗಿ ಕಾರುಗಳನ್ನು ಹೊಂದಿರುವ ಒಂದು ವರ್ಗಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈಗಿರುವ ಮೆಟ್ರೋ ಮತ್ತು ಉಪನಗರ ಸಾರಿಗೆಯನ್ನು ವಿಸ್ತರಿಸಬೇಕೆಂದು ತಜ್ಞರು ಮತ್ತು ಸಾರ್ವಜನಿಕರಿಂದ ಸಲಹೆ ಬಂದವು. ಅದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ರವರು ತಾನು ಆ ಯೋಜನೆಯಿಂದ ಹಿಂದೆ ಸರಿಯುವುದಿಲ್ಲ

5ನೇ ಪುಟಕ್ಕೆ...

## ಬಗೆಹರಿಯದ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಪಕ್ಷಗಳ ಒಳಜಗಳ

..4ನೇ ಪುಟದಿಂದ ಎಂದು, ಈ ಹಿಂದೆ ಜನಗಳ ಪ್ರತಿರೋಧದಿಂದ ಸಿದ್ದರಾಮಯ್ಯನವರು ಸ್ಟೀಲ್ ಸೇತುವೆ ಯೋಜನೆ ಕೈ ಬಿಟ್ಟಂತೆ ತಾನು ಹೆದುರುವುದಿಲ್ಲವೆಂದು ಹೇಳಿದರು! ಅಂದರೆ ಯೋಜನೆ ಜನ ವಿರೋಧಿ ಆದರೂ ಅನುಷ್ಠಾನಗೊಳ್ಳುತ್ತದೆಯೆನ್ನುವ ಸರ್ಕಾರದ ನಿಲುವು ಪ್ರದರ್ಶಿಸಿದರು.

ಬಿಜೆಪಿಯ ಭ್ರಷ್ಟಾಚಾರ ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ಗೆಲ್ಲಲು ಮುಖ್ಯ ವಿಷಯವಾಗಿತ್ತು. ಆದರೆ ಕಾಂಗ್ರೆಸ್ ಅಧಿಕಾರದಲ್ಲಿ ಆಗುತ್ತಿರುವುದೇನು? ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷರಾದ ಕೆಂಪಣ್ಣನವರು ಕಾಂಗ್ರೆಸ್ ಸರಕಾರದಲ್ಲಿಯೂ ಭ್ರಷ್ಟಾಚಾರ ಮುಂದುವರಿದಿದೆ ಎಂದು ಹೇಳುತ್ತಲೇ ಇದ್ದಾರೆ, ಇತ್ತೀಚೆಗೆ ಬೆಳಗಾವಿಯಲ್ಲಿ ಜಿಲ್ಲೆಯ ಸಿವಿಲ್ ಗುತ್ತಿಗೆದಾರ ಅಶೋಕ್ ಚೌಗಲಾ ಎನ್ನುವವರು ಹೆಂಡತಿ–ತಾಯಿಯೊಂದಿಗೆ ವಿಷದ ಬಾಟಲ್ ಹಿಡಿದು ತಮಗೆ ಬಿಡುಗಡೆಯಾಗಬೇಕಾಗಿರುವ 20 ಲಕ್ಷ ಹಣ ಅಧಿಕಾರಿಗಳ ಕಿರುಕುಳಗಳಿಂದ ದೊರೆತಿಲ್ಲ ಎಂದು ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಆತ್ಮಹತ್ಯೆಗೆ ಪ್ರಯತ್ನಿಸಿದ್ದು ರಾಜ್ಯದಲ್ಲಿ ಸುದ್ದಿ ಆಯಿತು. ಕೋಟಿ ಕೋಟಿ ಅಕ್ರಮ ಹಣ ಗಳಿಸಿದ ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಬಿದ್ದು ಸಿಕ್ಕಿಹಾಕಿಕೊಳ್ಳುತ್ತಿರುವ ಸುದ್ದಿಗಳು ಬರುತ್ತಲೇ ಇವೆ. ಕಂದಾಯ ಇಲಾಖೆ ಮತ್ತು ನೋಂದಣಿ ಇಲಾಖೆಗಳು ಭ್ರಷ್ಟಾಚಾರದ ಕೂಪಗಳಾಗಿವೆ. ಈ ಹಿಂದೆ ಭ್ರಷ್ಟಾಚಾರದಲ್ಲಿ ಶಿಕ್ಷೆಗೆ ಒಳಗಾಗಿದ್ದ ಅಧಿಕಾರಿಗಳನ್ನು ಅದೇ ಸ್ಥಾನಗಳಲ್ಲಿ ಮತ್ತು ಕೆಲವರನ್ನು ಮೇಲ್ದರ್ಜೆಗೆ ಬಡ್ತಿ ಕೊಟ್ಟು ಕೂರಿಸಿರುವ ಘಟನೆಗಳನ್ನು ಸ್ವತಃ ಲೋಕಾಯುಕ್ತರಾದ ಬಿ.ಎಸ್. ಪಾಟೀಲರವರು ಬಹಿರಂಗಪಡಿಸಿ ಅದು ನಡೆಯದಂತೆ ನೋಡಿಕೊಳ್ಳಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ! ಭ್ರಷ್ಟಾಚಾರದ ವಿಷಯವಾಗಿ ಬಿಜೆಪಿಯ ಅವಧಿಯಲ್ಲಿ ರಾಜ್ಯದಲ್ಲಿ ದೊಡ್ಡ ಸುದ್ದಿ ಮಾಡಿದ್ದ ಮಾಡಾಳ ವಿರೂಪಾಕ್ಷಪ್ಪ ಕಾಂಗ್ರೆಸ್ಸಿನ ಅವಧಿಯಲ್ಲಿ ದೋಷಮುಕ್ತವಾಗಿದ್ದಾರೆ!!

ಬಿಜೆಪಿಯ ಕೋಮುವಾದದ ವಿರುದ್ಧ ದೊಡ್ಡ ಪ್ರಚಾರವನ್ನು ಮಾಡಿ ತಾನು ಅತ್ಯಂತ ಸೆಕ್ಯುಲರ್ ಎಂದು ಬಿಂಬಿಸಿಕೊಂಡಿದ್ದ ಕಾಂಗ್ರೆಸ್ ಅಧಿಕಾರಕ್ಕೆ ಬಂದಮೇಲೆ ತನ್ನ ವರಸೆ ಬದಲಾಯಿಸಿದೆ. ಪ್ರತಿನಿತ್ಯ ಕೋಮು ದ್ವೇಷ ಸಾರುವ ವ್ಯಕ್ತಿಗಳು ಅಥವಾ ಸಂಘಟನೆಗಳ ವಿರುದ್ಧ ಇದುವರೆಗೂ ಯಾವ ಕ್ರಮವನ್ನೂ ಜರುಗಿಸಿಲ್ಲ. ಬದಲಾಗಿ ಪ್ರಜಾತಾಂತ್ರಿಕವಾಗಿ ಹೋರಾಟಗಳನ್ನು ನಡೆಸುವವರ ಮೇಲೆ ನಿರ್ಬಂಧಗಳನ್ನು ಜಾಸ್ತಿ ಮಾಡಲಾಗಿದೆ. ಪ್ಯಾಲೆಸ್ಟೈನಿನ ಮೇಲೆ ಇಸ್ರೇಲ್ ದಾಳಿಯನ್ನು ಖಂಡಿಸಿ ಪ್ರಗತಿಪರ ಸಂಘಟನೆಗಳು ಹೋರಾಟ ಮಾಡಿದರೆ ಆ ಹೋರಾಟಗಾರರನ್ನು ಬಂಧಿಸಲಾಯಿತು. ಬಿಜೆಪಿ ಅಧಿಕಾರದಲ್ಲಿದ್ದಾಗ ಜನರು ಬೆಂಗಳೂರಿನಲ್ಲಿ ಚಳುವಳಿ ಮಾಡುವ ಸ್ಥಳವನ್ನು ಫ್ರೀಡಂ ಪಾರ್ಕ್‌ಗೆ ಸೀಮಿತಗೊಳಿಸಿತ್ತು. ಅದಕ್ಕೆ ಜನರಪ್ರತಿರೋಧ ಬಂದರೂ ಬಿಜೆಪಿ ತನ್ನ ನಿಲುವನ್ನು ಬದಲಾಯಿಸಲಿಲ್ಲ. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಪರಿಸ್ಥಿತಿ ಬದಲಾಗಬಹುದೆಂದು ಎಣಿಸಿದ್ದ ಜನತೆಗೆ, ಅದರಲ್ಲೂ ಪ್ರಗತಿಪರರಿಗೆ ನಿರಾಶೆಯಾಗಿದೆ. ಇರುವ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ. ಜನರಿಗೆ ಹೋರಾಟದ ಹಕ್ಕು, ಪತ್ರಿಕಾ ಸ್ವಾತಂತ್ರ್ಯ ಕೊಡುವುದಾಗಿ ಹೇಳಲಾಗುತ್ತಿದೆ, ಆದರೆ ವಾಸ್ತವ ಬೇರೆಯದೇ ಕಥೆಯನ್ನು ಹೇಳುತ್ತಿದೆ.

ರಾಜ್ಯದ 236 ತಾಲ್ಲೂಕುಗಳಲ್ಲಿ 223 ಬರಪೀಡಿತವಾಗಿದ್ದು, 196 ತಾಲ್ಲೂಕುಗಳಲ್ಲಿ ಬರದ ತೀವ್ರತೆ ಹೆಚ್ಚಾಗಿದೆ. ಆರು ತಿಂಗಳಿನಲ್ಲಿ ಬೆಳೆ ನಾಶ ಮತ್ತು ಸಾಲಬಾಧೆಯಿಂದ 2023ರ ಏಪ್ರಿಲ್‌ನಿಂದ ನವೆಂಬರ್ ವರೆಗೆ ಒಟ್ಟು 456 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿಯಾಗಿದೆ, ಇವರಿಗೆ ಕೊಡಬೇಕಾದ ಪರಿಹಾರ ಕೂಡ ಕೇವಲ ಘೋಷಣೆಯಾಗಿಯೇ ಉಳಿದಿದೆ. ಇವುಗಳಿಂದ ರೈತರು ತತ್ತರಿಸಿದ್ದರೂ, ಕೇಂದ್ರ ಸರ್ಕಾರವನ್ನು ಮೂದಲಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಾ ಬಂದಿದೆಯೇ ಹೊರತು, ಈ ಆಪತ್ತಿನ ಸಂದರ್ಭದಲ್ಲಿ ತನ್ನ ಆದಾಯದ ಮೂಲಕ ಕಲ್ಪಿಸಬೇಕಾಗಿದ್ದ ಯಾವ ನೆರವನ್ನಾಗಲಿ, ಸಣ್ಣ ಬರಗಾಲ ಕಾಮಗಾರಿಗಳನ್ನಾಗಲೀ ನಡೆಸಿದ ಉದಾಹರಣೆಗಳಿಲ್ಲ!!! ಈ ಎಲ್ಲಾ ವಿದ್ಯಮಾನಗಳು, ಸರ್ಕಾರದ ನಡೆಗಳು ಕಾಂಗ್ರೆಸ್ ಜನರ ಪಾಲಿಗೆ ಯಾವ ರೀತಿಯಿಂದಲೂ ಭಿನ್ನವಾಗಿಲ್ಲ ಎಂದು ಸಾಬೀತು ಪಡಿಸುತ್ತವೆ.

ಈಗ ಮತ್ತೆ ಲೋಕಸಭಾ ಚುನಾವಣೆಗಳು ಅಪ್ಪಳಿಸುತ್ತವೆ, ಮತ್ತೆ ನಮ್ಮ ನಡುವೆ ಜಾತಿ–ಧರ್ಮಗಳನ್ನು ಗುರಿಯಾಗಿಸಿ ಭಾವನಾತ್ಮಕ ವಿಷಯಗಳನ್ನು ಕೆದಕುವ ವ್ಯವಸ್ಥಿತ ಚಟುವಟಿಕೆಗಳು ಮುನ್ನೆಲೆಗೆ ಬರುತ್ತವೆ. ಮಾಧ್ಯಮಗಳು ಅವುಗಳನ್ನು ವೈಭವೀಕರಿಸುತ್ತವೆ, ಆದರೆ ದುಡಿಯುವ ಜನಗಳ ಬದುಕಿಗೆ ಸಂಬಂಧಿಸಿದ ವಿಷಯಗಳು ಸಮಾಧಿಯಾಗುತ್ತಿವೆ. ಕರ್ನಾಟಕದಲ್ಲಿ ಚುನಾವಣೆ ನಡೆಯುತ್ತಿದ್ದಾಗ "ಮೊದಲು ಬಿಜೆಪಿಯನ್ನು ಸೋಲಿಸಿ ಉಳಿದದ್ದು ಆಮೇಲೆ ನೋಡೋಣ, ಎನ್ನುವುದು ಕೆಲವರ ವಾದವಾಗಿತ್ತು, ಈಗ ಏನು ಮಾಡೋಣ?

### ಸಮರಶೀಲ ಹೋರಾಟ ಅನಿವಾರ್ಯ

ನಮ್ಮ ಪಕ್ಷ ಎಸ್‌ಯುಸಿಐ(ಕಮ್ಯುನಿಸ್ಟ್) ಪದೇ ಪದೇ ಜನರ ಹೋರಾಟಕ್ಕೆ ಕರೆ ಕೊಡುತ್ತಿದೆ. ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಜನರ ಹೋರಾಟಗಳು ತೀವ್ರಗೊಳ್ಳಬೇಕು. ಎಲ್ಲಾ ವಿಭಾಗದ ಜನತೆ ಜನಸಮಿತಿಗಳನ್ನು ರಚಿಸಿಕೊಂಡು ಪ್ರಜಾತಾಂತ್ರಿಕ ಹೋರಾಟಗಳನ್ನು ಮುನ್ನಡೆಸಬೇಕಾಗುತ್ತದೆ. ಈ ಹೋರಾಟಗಳು ಸಂಧಾನತೀತವಾಗಿ ಸಮರಶೀಲತೆಯನ್ನು ಪಡೆದುಕೊಳ್ಳಬೇಕು. ■

## ದೇಶವ್ಯಾಪಿ ಸಹಿ ಸಂಗ್ರಹ ಆಂದೋಲನ

...1ನೇ ಪುಟದಿಂದ

6. ಅರಣ್ಯ ಸಂರಕ್ಷಣಾ ಕಾಯಿದೆ–2022 ರದ್ದು ಮಾಡಬೇಕು. ಮತ್ತು ಅರಣ್ಯಗಳನ್ನು ಉಳಿಸಲು, ಬುಡಕಟ್ಟು ಜನರು ಮತ್ತು ಅರಣ್ಯವಾಸಿಗಳ ಹಕ್ಕುಗಳ ರಕ್ಷಣೆಗಾಗಿ ಅರಣ್ಯ ಹಕ್ಕು ಕಾಯಿದೆ 2006 ಅನ್ನು ಜಾರಿಗೊಳಿಸಬೇಕು. ಮಣ್ಣಿನ ಸವೆತವನ್ನು ತಡೆಗಟ್ಟಲು, ಪರಿಸರವನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಜಾಗತಿಕ ತಾಪಮಾನದ ಕುರಿತು ನಿಗಾ ಇಡಬೇಕು.
7. ಎಲ್ಲಾ ಕರಾಳ ಕಾಯ್ದೆಗಳನ್ನು ರದ್ದು ಮಾಡುವ ಮೂಲಕ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ರಕ್ಷಿಸಬೇಕು.
8. ಮಹಿಳೆಯರ, ದಲಿತರ ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಬೇಕು.
9. ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ತಕ್ಷಣವೇ ರದ್ದು ಮಾಡಬೇಕು. ಕಾರ್ಮಿಕರ ಏಕಾಏಕಿ ವಜಾ, ಉತ್ಪಾದನೆ ಸ್ಥಗಿತ, ಲಾಕೌಟ್ ಮಾಡುವ ಪ್ರವೃತ್ತಿಯನ್ನು ತಡೆಗಟ್ಟಬೇಕು. ಸರ್ಕಾರಿ ಉದ್ಯಮಗಳ ಹಾಗೂ ಸೇವಾ ವಲಯಗಳ ಖಾಸಗೀಕರಣವನ್ನು ನಿಲ್ಲಿಸಬೇಕು. ಹಲವು ವರ್ಷಗಳಿಂದ ಖಾಯಂ ಸ್ವರೂಪದ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಬೇಕು. ಎಲ್ಲಾ ವಲಯಗಳ ಕಾರ್ಮಿಕರಿಗೆ ಜೀವನಯೋಗ್ಯ ವೇತನವನ್ನು ನೀಡುವ ಪದ್ಧತಿಯನ್ನು ಜಾರಿ ಮಾಡಲು ಕ್ರಮ ಕೈಗೊಳ್ಳಬೇಕು.
10. ಅಗತ್ಯ ಕಾನೂನು ಜಾರಿಗೊಳಿಸುವ ಮೂಲಕ ರೈತರು ಬೆಳೆಯುವ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು(MSP) ನೀಡಬೇಕು. ಹಾಗೆಯೇ ಎಲ್ಲಾ ಕೃಷಿ ಉತ್ಪನ್ನಗಳ ಮೇಲೆ MSP ಯನ್ನು ಕಾನೂನುಬದ್ಧಗೊಳಿಸಬೇಕು.
11. ಮತಧರ್ಮವನ್ನು ರಾಜ್ಯ ವ್ಯವಹಾರಗಳು ಮತ್ತು ರಾಜಕೀಯದಿಂದ ದೂರವಿಡಬೇಕು. ಮತಧರ್ಮವು ವ್ಯಕ್ತಿಯ ಖಾಸಗಿ ನಂಬಿಕೆ ಮತ್ತು ವೈಯಕ್ತಿಕ ಆಯ್ಕೆಯ ವಿಷಯವಾಗಿ ಉಳಿಯುವುದನ್ನು ಖಾತ್ರಿಪಡಿಸಬೇಕು. ■



ಸಹಿಮಾಡಿ ಬೆಂಬಲಿಸಿದ ಪ್ರೊ. ಅಲ್ಲಮಪ್ರಭು ಬೆಟ್ಟದೂರು – ಕೊಪ್ಪಳ




ಬೆಂಗಳೂರಿನಲ್ಲಿ ಎಸ್‌ಯುಸಿಐ(ಸಿ) ಕಾರ್ಯಕರ್ತರು ಸಾರ್ವಜನಿಕರಿಂದ ಸಹಿ ಸಂಗ್ರಹಿಸುತ್ತಿರುವುದು.




ಸಹಿ ಸಂಗ್ರಹ ಅಭಿಯಾನ– ಬಳ್ಳಾರಿ




ಮೈಸೂರು ಜಿಲ್ಲೆಯಲ್ಲಿ ಸಾರ್ವಜನಿಕರಿಂದ ಸಹಿ ಸಂಗ್ರಹಿಸುತ್ತಿರುವುದು.

# ಪ್ಯಾಲೆಸ್ತೈನ್ ಮೇಲೆ ಇಸ್ರೇಲ್ ದಾಳಿ: ಈ ವಿರುದ್ಧ ಅರಬ್ ಐಕ್ಯತೆ ಏಕಿಲ್ಲ?

ಹತ್ಯಾಕಾಂಡವು ದಾರುಣವಾಗಿ ಮುಂದುವರೆಯುತ್ತಿದೆ. ಕಳೆದ ಶತಮಾನದಲ್ಲಿ ಹಿಟ್ಲರ್ ಮತ್ತು ಅವನ ನಾಜಿ ಪಡೆಗಳು ಜನಾಂಗದ ಹೆಸರಲ್ಲಿ ಇಂತಹ ಕ್ರೌರ್ಯವನ್ನು ಎಸಗಿದ್ದವು, ಅಂತಹುದೇ ಕೃತ್ಯವನ್ನೀಗ ಇಸ್ರೇಲ್ ಮುಂದುವರಿಸುತ್ತಿದೆ. ಒಂದು ಜನಾಂಗವನ್ನೇ ಅಳಿಸಿ ಹಾಕಿ, ಅವರ ತಾಯ್ನೆಲವಾದ ಪ್ಯಾಲೆಸ್ತೈನ್ ಅನ್ನು ಸಂಪೂರ್ಣವಾಗಿ ಕೈವಶ ಮಾಡಿಕೊಳ್ಳುವ ಈ ಪಾತಕಿ ಕೃತ್ಯಕ್ಕೆ ಬೆಂಬಲವಾಗಿ, ಯುದ್ಧಪಿಪಾಸು ಅಮೆರಿಕ ಹಾಗೂ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳು ನಿಂತಿವೆ. ನವೆಂಬರ್ 6ರ ಪತ್ರಿಕಾ ವರದಿಯಂತೆ ಈಗಾಗಲೇ ಈ ದಾಳಿಗೆ 4,104 ಮಕ್ಕಳು, 2,641 ಮಹಿಳೆಯರು ಹಾಗೂ 611 ವೃದ್ಧರು ಸೇರಿದಂತೆ 10,022 ಪ್ಯಾಲೆಸ್ತೈನಿಗಳು ಬಲಿಯಾಗಿದ್ದಾರೆ. ಸತ್ತವರ ಪೈಕಿ ನಾಲ್ವರಲ್ಲಿ ಮೂವರು ದುರ್ಬಲ ಸಮುದಾಯದವರೇ ಆಗಿದ್ದಾರೆ. 10 ನಿಮಿಷಕ್ಕೆ ಒಂದು ಮಗು ಇಲ್ಲಿ ಅಸುನೀಗುತ್ತಿದೆ. ಸರಿ ಸುಮಾರು 25,408ರಷ್ಟು ಜನ ಗಾಯಗೊಂಡಿದ್ದಾರೆಂದು ಅಲ್ಲಿನ ಸಚಿವಾಲಯವು ವರದಿ ಮಾಡಿದೆ. ಸುಮಾರು 1,50,000ದಷ್ಟು ಜನ ಆಶ್ರಯ ಕಳೆದುಕೊಂಡಿದ್ದಾರೆ. ಎಡೆಬಿಡದ ವೈಮಾನಿಕ ದಾಳಿಗಳು, ರಾಸಾಯನಿಕ ಶಸ್ತ್ರಾಸ್ತ್ರಗಳ ಅಪಾಯಕಾರಿ ಪ್ರಯೋಗ ಸೇರಿದಂತೆ ನಿರಂತರ ಆಕ್ರಮಣಗಳಿಂದಾಗಿ ಗಾಜಾ ಪಟ್ಟಿಯು ಧ್ವಂಸಗೊಂಡು ಪುಡಿಪುಡಿಯಾಗಿದೆ. ಕಿವಿಗಡಚಿಕ್ಕುವ ಸ್ಫೋಟಗಳಿಂದ ಹೊರ ಸೂಸಿದ ಹೊಗೆಯ ಮೋಡಗಳು ಗಾಜಾದ ಆಗಸವನ್ನು ಕಪ್ಪಾಗಿಸಿವೆ.

### ಇಸ್ರೇಲ್‌ನ ಯುದ್ಧಾಪರಾಧಗಳು – ಇತಿಹಾಸದ ಮೇಲೊಮ್ಮೆ ಕಣ್ಣು ಹಾಯಿಸಿದಾಗ........

ಇಸ್ರೇಲ್‌ನ ರಚನೆಯ ನಂತರ, ಐದು ಅರಬ್ ದೇಶಗಳು ತಮ್ಮ ಮೇಲೆ ದಾಳಿ ನಡೆಸಿವೆ ಮತ್ತು ಆ ಕಾರಣಕ್ಕಾಗಿ ಪ್ಯಾಲೆಸ್ತೈನಿಯರನ್ನು ಹೊರದೂಡುತ್ತೇವೆ ಎಂಬುದು ಇಸ್ರೇಲಿ ಆಳ್ವಿಕರ ವಾದ. ವಾಸ್ತವವೆಂದರೆ, 29 ನವೆಂಬರ್ 1947ರಂದು ಬ್ರಿಟಿಷರ ಕೈಲಿದ್ದ ಪ್ಯಾಲೆಸ್ತೈನ್ ಅನ್ನು ಎರಡು ಭಾಗಗಳಾಗಿ ವಿಭಜನೆ ಮಾಡುವ ನಿರ್ಧಾರಕ್ಕೆ ವಿಶ್ವಸಂಸ್ಥೆಯು ಅನುಮೋದನೆ ನೀಡಿತ್ತು. ಅದರಲ್ಲಿ ಒಂದು ಯಹೂದಿ ರಾಜ್ಯ ಮತ್ತು ಇನ್ನೊಂದು ಅರಬ್ ರಾಜ್ಯ. ಇದಾದ ಕೆಲವು ದಿನಗಳಿಂದಲೇ ಅಲ್ಲಿನ ಯಹೂದಿಗಳು ಮತ್ತು ಅರಬ್ಬರ ನಡುವೆ ಘರ್ಷಣೆಗಳು ಜಾರಿಯಲ್ಲಿವೆ. 1948ರಲ್ಲಿ ಬ್ರಿಟಿಷ್ ಪಡೆಗಳು ಹಿಂದಿರುಗಿದ ನಂತರ ಇಸ್ರೇಲ್ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು. ವಿಶ್ವಸಂಸ್ಥೆಯು ಯಹೂದಿಗಳಿಗೆ ನಿಗದಿಪಡಿಸದೆ ಇದ್ದ– ಪ್ರಾಚೀನ ನಗರದ ಪುಟ್ಟ ಯಹೂದಿ ವಸತಿ ಪ್ರದೇಶದೊಂದಿಗೆ ಪೂರ್ವ ಜೆರುಸಲೇಮ್ ಸೇರಿದಂತೆ ಪ್ಯಾಲೆಸ್ತೈನಿನ ದಕ್ಷಿಣ ಮತ್ತು ಪೂರ್ವ ಭಾಗದ ಪ್ರದೇಶಗಳನ್ನು ಈಜಿಪ್ಟ್, ಸಿರಿಯಾ, ಜೋರ್ಡಾನ್ ಮತ್ತು ಲೆಬನಾನಿನ ಅರಬ್ ಪಡೆಗಳು ಆಕ್ರಮಿಸಿಕೊಂಡವು. ತದನಂತರ 1949ರ ಫೆಬ್ರುವರಿ ಮತ್ತು ಜುಲೈ ತಿಂಗಳ ನಡುವೆ ಇಸ್ರೇಲ್ ಹಾಗೂ ಪ್ರತಿ ಅರಬ್ ರಾಜ್ಯದ ಮಧ್ಯೆ ಕದನವಿರಾಮದ ಒಪ್ಪಂದಗಳಾದವು. ಆಗ ಇಸ್ರೇಲ್ ಮತ್ತು ಅದರ ನೆರೆಯ ರಾಷ್ಟ್ರಗಳ ನಡುವೆ ಒಂದು ತಾತ್ಕಾಲಿಕ ಗಡಿಯನ್ನು ಗುರುತಿಸಲಾಯಿತು. ಈ ಯುದ್ಧವನ್ನು ಇಸ್ರೇಲಿಯರು 'ಸ್ವಾತಂತ್ರ್ಯ ಸಮರ' ಎಂದು ಪರಿಗಣಿಸುತ್ತಾರೆ. ಆದರೆ ಇಸ್ರೇಲ್‌ನ ಸೃಷ್ಟಿಗೆ ಕಾರಣವಾದ 1948ರ ಕದನದಲ್ಲಿ ಹಲವು ಪ್ಯಾಲೆಸ್ತೈನಿಗಳು ದೇಶವನ್ನು ತೊರೆಯಬೇಕಾಯಿತು ಅಥವಾ ತಮ್ಮ ಮನೆಗಳಿಂದ ಹೊರಬೀಳಬೇಕಾಯಿತು. ಹೀಗಾಗಿ ಪ್ಯಾಲೆಸ್ತೈನಿಯರು ಈ ಕದನವನ್ನು, ನಕ್ಬಾ (ಮಹಾದುರಂತ) ಎಂದು ಕರೆಯುತ್ತಾರೆ. ಬ್ರಿಟಿಷರ ಆಳ್ವಿಕೆಗೊಳಪಟ್ಟಿದ್ದ ಪ್ಯಾಲೆಸ್ತೈನಿನ ಜನಸಂಖ್ಯೆಯ ಅರ್ಧದಷ್ಟು ಸುಮಾರು 7 ಲಕ್ಷ ಪ್ಯಾಲೆಸ್ತೈನಿಗಳು ತಮ್ಮ ಪ್ರದೇಶದಿಂದ ಹೊರದೂಡಲ್ಪಟ್ಟು ಪಕ್ಕದ ಅರಬ್ ರಾಜ್ಯಗಳಿಗೆ ಅಥವಾ ತಮ್ಮ ಪೂರ್ವಜರು ವಾಸವಿದ್ದ ಪ್ರದೇಶಗಳಿಗೆ ಸ್ಥಳಾಂತರಗೊಂಡರು. ಇಂದಿಗೂ ಹಲವು ಜನರು ನಿರಾಶ್ರಿತರ ಶಿಬಿರಗಳಲ್ಲಿ, ಅಮಾನವೀಯ ಪರಿಸ್ಥಿತಿಯ ನಡುವೆ ವಾಸವಾಗಿದ್ದಾರೆ.

ಅಲ್ಲಿಂದ ಮೊದಲುಗೊಂಡು 1956, 1967, 1973, 1982 ಮತ್ತು 2006ರಲ್ಲಿ ಇಸ್ರೇಲ್ ಮತ್ತು ಅರಬ್ ಪಡೆಗಳ ನಡುವೆ ಕಲಹಗಳಾಗುತ್ತಲೇ ಇವೆ. 5 ಜೂನ್ 1967ರಂದು ಅರಬ್‌ನ ಜಂಟಿ ಪಡೆಗಳ ವಿರುದ್ಧದ ಆರು ದಿನಗಳ ಕದನದಲ್ಲಿ ಗಾಜಾ ಪಟ್ಟಿಯನ್ನು ಒಳಗೊಂಡಂತೆ ಪಶ್ಚಿಮ ತೀರ, ಪೂರ್ವ ಜೆರುಸಲೇಮ್, ಸಿರಿಯಾದ ಗೋಲನ್‌ಹೈಟ್ಸ್ ಪ್ರದೇಶಗಳು ಮತ್ತು ಈಜಿಪ್ಟಿನ ಸೈನಾಯ್ ಪರ್ಯಾಯ ದ್ವೀಪ ಪ್ರದೇಶಗಳು ಸೇರಿ ಉಳಿದ ಪ್ಯಾಲೆಸ್ತೈನಿನ ಐತಿಹಾಸಿಕ ಪ್ರದೇಶಗಳನ್ನು ಇಸ್ರೇಲ್ ಆಕ್ರಮಿಸಿಕೊಂಡಿತು. ಕಳೆದ 56 ವರ್ಷಗಳಿಂದ ಇಡಿಯ ಪ್ಯಾಲೆಸ್ತೈನ್ ನ್ಯಾಯಬಾಹಿರವಾಗಿ ಇಸ್ರೇಲ್‌ನ ವಶದಲ್ಲಿದೆ. 26 ಮಾರ್ಚ್ 1979ರಂದು ಇಬ್ಬರ ಮಧ್ಯೆ ಕದನ ವಿರಾಮವು ಘೋಷಣೆಯಾಗಿ, 30 ವರ್ಷಗಳ ಕಾಲ ಅದು ಉಳಿದಿತ್ತು. 1978ರಲ್ಲಿ ಇಸ್ರೇಲ್ ಮತ್ತು ಈಜಿಪ್ಟ್ ನಡುವಿನ ಒಪ್ಪಂದದಂತೆ ಸೈನಾಯ್ ಪರ್ಯಾಯ ದ್ವೀಪ ಪ್ರದೇಶವನ್ನು ಇಸ್ರೇಲ್ ಮರಳಿ ಈಜಿಪ್ಟಿನ ವಶಕ್ಕೆ ಒಪ್ಪಿಸಿತು. ಅದಕ್ಕೆ ಪ್ರತಿಯಾಗಿ ಇಸ್ರೇಲ್‌ನ ಅಸ್ತಿತ್ವಕ್ಕೆ ಈಜಿಪ್ಟ್ ಮಾನ್ಯತೆಯನ್ನು ನೀಡಿತು. ಸೈನಾಯ್‌ನಿಂದ ಇಸ್ರೇಲ್ ಸಂಪೂರ್ಣವಾಗಿ ಕಾಲ್ತೆಗೆದು, ನಂತರ ಕೆಲವೇ ದಿನಗಳಲ್ಲಿ ಪ್ಯಾಲೆಸ್ತೈನ್ ಲಿಬರೇಶನ್ ಆರ್ಗನೈಸೇಷನ್ನಿನ (ಪಿ ಎಲ್ ಓ) ಪ್ರಭಾವವು ಗಾಢವಾಗಿದ್ದ ಬೈರೂತ್ ಮತ್ತು ಲೆಬನಾನ್ ಮೇಲೆ ಇಸ್ರೇಲ್ ಬಾಂಬ್ ದಾಳಿಯನ್ನು ನಡೆಸಿತು. ಮಾರನೆಯ ದಿನವೇ ಲೆಬನಾನ್ ಅನ್ನು ಇಸ್ರೇಲ್ ಆಕ್ರಮಿಸಿಕೊಂಡಿತು. ಇಸ್ರೇಲ್‌ನ ಭೂಸೇನಾ ಪಡೆಗಳು ಬೈರೂತ್‌ನ ಹೊರವಲಯದವರೆಗೂ ಹರಡಿಕೊಂಡವು. ಹೀಗಾಗಿ ಪ್ಯಾಲೆಸ್ತೈನ್ ಮೇಲೆ ಮತ್ತೆ ಮತ್ತೆ ದಾಳಿ ಮಾಡುವುದನ್ನು ಜಿಯೋನಿಸ್ಟ್ ಇಸ್ರೇಲ್ ಇಂದಿಗೂ ಕೂಡ ನಿಲ್ಲಿಸಿಲ್ಲ. ಹೀಗಾಗಿ ಪ್ಯಾಲೆಸ್ತೈನಿಯರು ಪ್ರತಿರೋಧಿಸುವ ಹಕ್ಕನ್ನು ಹೊಂದಿದ್ದಾರೆಯೇ ಎಂದರೆ, ಖಂಡಿತವಾಗಿಯೂ ಹೌದು!!

### ಅರಬ್‌ವಾದದ ಲಕ್ಷಣಗಳು

ಈ ಹಿನ್ನೆಲೆಯಲ್ಲಿ ಅರಬ್ ರಾಷ್ಟ್ರೀಯತೆ ಮತ್ತು ಅರಬ್ ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ಮತ್ತು ರಾಜಕೀಯ ಐಕ್ಯತೆಯ ಕುರಿತು ಗಮನ ಹರಿಸುವುದು ಪ್ರಮುಖವಾಗಿದೆ. ಹೆಚ್ಚಿದ ಸಾಕ್ಷರತೆಯ ಪ್ರಭಾವದಿಂದಾಗಿ ಮಧ್ಯಪೂರ್ವ ಪ್ರದೇಶದ ಅರಬ್ಬರ ನಡುವೆ ಒಂದು ಸಾಂಸ್ಕೃತಿಕ ಸಾಹಿತ್ಯಿಕ ನವೋದಯ ಚಳುವಳಿಯು (ನಾಹ್ದಾ) ಪ್ರಾರಂಭಗೊಂಡಿತು. ಇದರ ಪ್ರಭಾವದಿಂದಾಗಿ ರಾಜಕೀಯ ಹೋರಾಟಗಳು ಬೆಳೆದು ಬಹುತೇಕ ಅರಬ್ ರಾಷ್ಟ್ರಗಳು ಆಟೋಮನ್ ಸಾಮ್ರಾಜ್ಯ ಮತ್ತು ಬ್ರಿಟಿಷ್ ಸ್ವಾತಂತ್ರ್ಯವನ್ನು ಗಳಿಸಿಕೊಂಡವು. 1945ರಲ್ಲಿ ಅರಬ್ ಲೀಗಿನ ಸ್ಥಾಪನೆಯು ಈ ಪ್ರಾಂತ್ಯದ ಮಹತ್ವಪೂರ್ಣ ಘಟನೆಗಳಲ್ಲಿ ಒಂದಾಗಿದೆ. ಎರಡು ದೇಶಗಳ ನಡುವಿನ ರಾಜಕೀಯ ಐಕ್ಯತೆಗೆ ಪ್ರಯೋಗಾತ್ಮಕವಾಗಿ, ಯುನೈಟೆಡ್ ಅರಬ್ ರಿಪಬ್ಲಿಕ್ (ಯು ಎ ಆರ್) ರೂಪದಲ್ಲಿ ಈಜಿಪ್ಟ್ ಮತ್ತು ಸಿರಿಯಾದ ನಡುವಿನ ಒಕ್ಕೂಟವು ರಚಿಸಲ್ಪಟ್ಟಿತು. ಆದರೆ ಇದು ಬಹಳ ಕಾಲ ಉಳಿಯಲಿಲ್ಲ. ಅರಬ್ ಪ್ರಾಂತ್ಯದ ಪ್ರಬಲ ಪ್ರತಿಪಾದಕರಾಗಿದ್ದ ಈಜಿಪ್ಟಿನ ಜಮಾಲ್ ಅಬ್ದೇಲ್ ನಾಸರ್ ಅವರ ನೇತೃತ್ವದಲ್ಲಿ ಅರಬ್ ಪ್ರಾಂತ್ಯವು ರಾಜಕೀಯ ಮತ್ತು ಸಾಮಾಜಿಕ ರಂಗಗಳಲ್ಲಿ ಉತ್ತುಂಗವನ್ನು ಸಾಧಿಸಿತು. ಈ ಅರಬ್ ಭಾವನೆಯ ಆಧಾರದ ಮೇಲೆ ಒಂದು ರೀತಿಯ ಒಗ್ಗಟ್ಟು ರೂಪಗೊಂಡಿತು. ಅದರಲ್ಲೂ ವಿಶೇಷವಾಗಿ ಅರಬ್ ಪ್ರದೇಶವನ್ನು ಬಲಾತ್ಕಾರದಿಂದ ಆಕ್ರಮಿಸಿಕೊಂಡಿದ್ದ ಜಿಯೋನಿಸ್ಟ್ ಇಸ್ರೇಲ್ ವಿರುದ್ಧ ಈ ಒಗ್ಗಟ್ಟು ಹೆಚ್ಚಾಯಿತು.

ಜೊತೆಯಲ್ಲಿಯೇ ಎರಡನೇ ಮಹಾಯುದ್ಧದ ನಂತರದಲ್ಲಿ ಭಾರತದ ನೆಹರು, ಯುಗೋಸ್ಲಾವಿಯಾದ ಟಿಟೋ, ಇಂಡೋನೇಷಿಯಾದ ಸುಕಾರ್ನೋ, ಈಜಿಪ್ಟಿನ ನಾಸರ್, ಎನ್ ಕ್ರುಮಾರಂತಹ ನಾಯಕರು ಅಲಿಪ್ತ ಚಳುವಳಿ (NAM)ಯನ್ನು ಪ್ರಾರಂಭಿಸಿದರು. ಈ ಅಲಿಪ್ತ ದೇಶಗಳು, ಪೂರ್ವ–ಪಶ್ಚಿಮ ರಾಷ್ಟ್ರಗಳ ನಡುವೆ ನಡೆದಿದ್ದ ಸೈದ್ಧಾಂತಿಕ ಶೀತಲ ಸಮರದಿಂದ ದೂರ ಉಳಿಯುವ ಧೋರಣೆಯನ್ನು ಹೊಂದಿದ್ದವು. ಮಹತ್ವಾಕಾಂಕ್ಷೆಯುಳ್ಳ ಈ ದೇಶದ ಬಂಡವಾಳಶಾಹಿಗಳು ಹಿಂದುಳಿದ ಪರಿಸ್ಥಿತಿಯಿಂದ ಮುಂದುವರಿಯಬೇಕಾದರೆ ಕೆಲವು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಬಯಸಿದ್ದರು. ಮೊದಲನೆಯದಾಗಿ, ತಮ್ಮ ದೇಶಗಳಲ್ಲಿ ಕೈಗಾರಿಕೀಕರಣವನ್ನು ಹೆಚ್ಚಿಸುವುದರ ಮೂಲಕ ಗೃಹ ಮಾರುಕಟ್ಟೆಗೆ ಪುಷ್ಟಿ ನೀಡಬೇಕಿತ್ತು. ಶತಮಾನಗಳ ಸಾಮ್ರಾಜ್ಯಶಾಹಿ ಶೋಷಣೆಯಿಂದಾಗಿ ತಮ್ಮ ದೇಶದ ಜನರ ಕೊಳ್ಳುವ ಶಕ್ತಿಯು ಗಣನೀಯವಾಗಿ ಕುಸಿದಿರುವುದನ್ನು ಗಮನಿಸಿ, ಕೇವಲ ಗೃಹ ಮಾರುಕಟ್ಟೆ ಮೇಲೆ ಅವಲಂಬಿತರಾಗುವುದರಿಂದ ತಾವು ಬಯಸಿದ ಆರ್ಥಿಕ ಬಲವರ್ಧನೆಯು ಸಾಧ್ಯವಿಲ್ಲವೆಂಬುದನ್ನು ಅವರು ಅರಿತರು. ಈಗಾಗಲೇ ಸಾಮ್ರಾಜ್ಯಶಾಹಿಗಳ ಕಪಿಮುಷ್ಟಿಯಲ್ಲಿದ್ದ ಹೊರಗಿನ ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುವ ಅವಶ್ಯಕತೆಯು ಅವರನ್ನು ಮತ್ತೆ ಮತ್ತೆ ಕಾಡಿತ್ತು. ಆದರೆ ಕಡಿಮೆ ಸಮಯದಲ್ಲಿ ಇದನ್ನು ಸಾಧಿಸುವುದು ಅಸಾಧ್ಯವಾಗಿತ್ತು. ತಮ್ಮ ವ್ಯಾಪಾರಿ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಪರಸ್ಪರರ ಮಧ್ಯೆ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಳ್ಳಲು ಅವರು ಯತ್ನಿಸಿದರು. ಅಲಿಪ್ತ ನೀತಿಯು ಇಂತಹ ಪ್ರಯತ್ನಗಳಲ್ಲಿ ಒಂದು. ತಮ್ಮ ಆರ್ಥಿಕ ಪ್ರಗತಿಯ ಉದ್ದೇಶದಿಂದ ಈ ದೇಶಗಳು ಯುದ್ಧಗಳನ್ನು ವಿರೋಧಿಸಿದವು. ಈ ಹಿನ್ನೆಲೆಯಲ್ಲಿ ಯುದ್ಧಗಳನ್ನು ಹುಟ್ಟುಹಾಕುವಲ್ಲಿ ತೊಡಗಿದ್ದ ಸಾಮ್ರಾಜ್ಯಶಾಹಿ ರಾಷ್ಟ್ರಗಳನ್ನು ವಿರೋಧಿಸಿ ಸಮಾಜವಾದಿ ಬಣವು ಮುನ್ನಡೆಸುತ್ತಿದ್ದ ಅಂತರರಾಷ್ಟ್ರೀಯ ಶಾಂತಿ ಚಳುವಳಿಯ ಪರವಾಗಿ ನಿಂತವು. ಅಲಿಪ್ತ ರಾಷ್ಟ್ರಗಳು ಪ್ಯಾಲೆಸ್ತೈನ್ ಜನತೆಯ ನ್ಯಾಯೋಚಿತ ಹೋರಾಟದ ಪರವಾಗಿ ಧ್ವನಿ ಎತ್ತಿದವು. ಮುಂದುವರೆಯುತ್ತಿರುವ ದೇಶಗಳ ಮೇಲೆ ಶಕ್ತಿಶಾಲಿ ರಾಷ್ಟ್ರಗಳು ನಡೆಸುತ್ತಿದ್ದ ದಾಳಿಗಳ ವಿರುದ್ಧ ಪ್ರಬಲ ಪ್ರತಿರೋಧದ ಧ್ವನಿಯಾಗಿ ಅಲಿಪ್ತ ರಾಷ್ಟ್ರಗಳು ಗಟ್ಟಿಯಾಗಿ ನಿಂತವು. ಅರಬ್ ರಾಷ್ಟ್ರಗಳ ಮಧ್ಯೆ ಒಗ್ಗಟ್ಟನ್ನು ವೃದ್ಧಿಗೊಳಿಸಲು ಕೂಡ ಶ್ರಮಿಸಿದವು. ಸಮಾಜವಾದಿ ಬಣದ ಪತನದ ನಂತರ ಅಲಿಪ್ತ ಚಳುವಳಿ ಕೂಡ ನಿಷ್ಕ್ರಿಯಗೊಂಡಿತು.

ಅರಬ್ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಚಳುವಳಿಯು ಕೂಡ ಪ್ರಬಲವಾಗಿತ್ತು. ಹಲವು ಸಮೂಹ ಹೋರಾಟಗಳು ಅಲ್ಲಿ ಬೆಳೆಯುತ್ತಿದ್ದವು. ಸಮಾಜವಾದದ ಪತನದ ನಂತರ ಇದಲ್ಲವೂ ಹಿನ್ನೆಲೆಗೆ ಸರಿಯಿತು.

### ಇಸ್ರೇಲ್‌ನ ಹತ್ಯಾಕಾಂಡದ ವಿರುದ್ಧ ರೂಪುಗೊಳ್ಳದ ಅರಬ್ ರಾಷ್ಟ್ರಗಳ ಐಕ್ಯ ಪ್ರತಿರೋಧ

ಪ್ಯಾಲೆಸ್ತೈನ್ ಮೇಲಿನ ಇಸ್ರೇಲ್ ದಾಳಿಗೆ ಪ್ರತಿಯಾಗಿ ನೆರೆಯ ಅರಬ್ ದೇಶಗಳು ನಡೆಸಬೇಕಿದ್ದ ಐಕ್ಯ ಪ್ರತಿರೋಧವೂ ಸಾಧ್ಯವಾಗುತ್ತಿಲ್ಲ. ಪ್ಯಾಲೆಸ್ತೈನಿನ ನೆಲವನ್ನು ಕಸಿದು ಕೊಳ್ಳುತ್ತಿರುವುದರ ವಿರುದ್ಧ ಕೇವಲ ಜೋರ್ಡಾನ್ ಮತ್ತು ಈಜಿಪ್ಟ್ ದೇಶಗಳು ಇಸ್ರೇಲ್‌ಗೆ ಎಚ್ಚರಿಕೆ ನೀಡಿವೆ. ಇಸ್ರೇಲ್‌ನೊಂದಿಗೆ ಯಾವುದೇ ಒಪ್ಪಂದಗಳನ್ನು ಹೊಂದಿರದ ಲೆಬನಾನಿನ ನಿಲುವು ಕೂಡ ಪ್ಯಾಲೆಸ್ತೈನಿಯರ ಪರವಾಗಿದೆ. ಆದರೆ ಸೌದಿ ಅರೇಬಿಯಾ, ಯು. ಎ. ಇ, ಕತಾರ್, ಬಹರೈನ್ ರಾಷ್ಟ್ರಗಳು ಇಸ್ರೇಲ್ ವಿರುದ್ಧ ಬಹಿರಂಗವಾಗಿ ಗುರುತಿಸಿಕೊಂಡಿಲ್ಲ. ಸೌದಿ–ಇಸ್ರೇಲ್ ನಡುವಿನ ಸಂಬಂಧವು ಇತ್ತೀಚೆಗಷ್ಟೇ ಸುಧಾರಿಸಿದ್ದು, ಇಸ್ರೇಲ್ ವಿರೋಧಿ ನಿಲುವು ತಾಳಲು ಸೌದಿಯು ಹಿಂದೇಟು ಹಾಕಲು ಇದು ಕಾರಣವಾಗಿರಬಹುದು. ಯು. ಎ. ಇ ಮತ್ತು ಬಹ್ರೈನ್‌ಗಳು 2020ರಲ್ಲಿ ಇಸ್ರೇಲ್‌ನೊಂದಿಗಿನ ತಮ್ಮ ಸಂಬಂಧವನ್ನು ಸುಧಾರಿಸಿಕೊಂಡವು. ಸಾಮ್ರಾಜ್ಯಶಾಹಿಗಳ ಪಿತೂರಿಯಿಂದ ಶಿಯಾ–ಸುನ್ನಿ ನಡುವಿನ ಕಲಹಗಳು ಪುಷ್ಟಿಗೊಂಡು ಇಸ್ಲಾಂ ಮೂಲಭೂತವಾದವು ಮುನ್ನೆಲೆಗೆ ಬಂದಿತು. ಹಮಾಸ್‌ನ ಬಹುಸಂಖ್ಯಾತರು ಸುನ್ನಿಗಳಾದರೆ, ಇರಾನಿನಲ್ಲಿ ಶಿಯಾಗಳು ಪ್ರಧಾನವಾಗಿದ್ದಾರೆ. ಈ ಪಂಥೀಯ ವ್ಯತ್ಯಾಸವು ಇರಾನ್ ಮತ್ತು ಹಮಾಸ್‌ನ ಸಂಬಂಧದ ಮೇಲೆ ಕೆಲವೊಮ್ಮೆ ದುಷ್ಪರಿಣಾಮ ಬೀರಿದೆ. ಒಂದು ವೇಳೆ ಇಸ್ರೇಲ್‌ನ ಕುಕೃತ್ಯಗಳ ವಿರುದ್ಧ ಅರಬ್ ರಾಷ್ಟ್ರಗಳ ಸಂಘಟಿತ ಮತ್ತು ಪ್ರಬಲ ಪ್ರತಿರೋಧವು ಸಾಧ್ಯವಾಗಿದ್ದಿದ್ದರೆ ಜಿಯೋನಿಸ್ಟ್ ಆಳ್ವಿಕರು (ಇಸ್ರೇಲ್) ಮತ್ತು ಅವರ ಸಾಮ್ರಾಜ್ಯಶಾಹಿ ಸ್ನೇಹಿತರು ಈ ಹತ್ಯಾಕಾಂಡಕ್ಕೆ ಕೈ ಹಾಕುವುದಕ್ಕೂ ಮುನ್ನ ಹಲವು ಬಾರಿ ಯೋಚಿಸಬೇಕಾಗುತ್ತಿತ್ತು.

### ಹರಿತಗೊಂಡ ಅರಬ್ ರಾಷ್ಟ್ರಗಳ ನಡುವಿನ ದ್ವಂದ್ವಗಳು

ಅರಬ್ ಐಕ್ಯತೆಯು ಸಾಧ್ಯವಾಗದಿರುವುದಕ್ಕೆ ಅಲ್ಲಿನ ಪ್ರಸಕ್ತ ರಾಜಕೀಯ–ಆರ್ಥಿಕ ಪರಿಸ್ಥಿತಿಯ ಸರಿಯಾದ ತಿಳುವಳಿಕೆಯನ್ನು ಹೊಂದಲು ಮಾರ್ಕ್ಸ್‌ವಾದ–ಲೆನಿನ್‌ವಾದ ಮತ್ತು ಶಿವದಾಸ್ ಘೋಷರ ಚಿಂತನೆಗಳ ಅಸ್ತ್ರವು ಅತ್ಯವಶ್ಯಕವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯ ಮರಣಾಸನ್ನ ಸಂದರ್ಭದಲ್ಲಿ ತಮ್ಮ ದೇಶಗಳಲ್ಲಿ ಬಂಡವಾಳವಾದವನ್ನು ಬೆಳೆಸುತ್ತಿರುವ ಅರಬ್ ರಾಷ್ಟ್ರಗಳು ಸಾಮ್ರಾಜ್ಯಶಾಹಿ ಬಣಕ್ಕೆ ಹತ್ತಿರವಾಗುತ್ತಿವೆ. ರಾಜರ ಆಳ್ವಿಕೆಯ ಮುಖವಾಡದೊಂದಿಗೆ, ತಮ್ಮ ಬಂಡವಾಳಶಾಹಿ ಹಿತಾಸಕ್ತಿಯನ್ನು ಬಲಪಡಿಸಿಕೊಳ್ಳಲು ಅಮೆರಿಕ ಮತ್ತು ಪಶ್ಚಿಮದ ಸಾಮ್ರಾಜ್ಯಶಾಹಿ ದೇಶಗಳೊಂದಿಗೆ ಆರ್ಥಿಕ ಒಪ್ಪಂದಗಳಿಗೆ ಮುಂದಾಗುತ್ತಿವೆ. ಇತರೆ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ದೇಶಗಳಂತೆ ತಮ್ಮ ದೇಶದ ಜನಹೋರಾಟಗಳನ್ನು

7ನೇ ಪುಟಕ್ಕೆ..

...6ನೇ ಪುಟದಿಂದ

ನಿರ್ದಯವಾಗಿ ದಮನ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಅರಬ್ ರಾಷ್ಟ್ರಗಳ ನಡುವಿನ ದ್ವಂದ್ವಗಳು ಹರಿತಗೊಳ್ಳುತ್ತಿವೆ. 2017ರಲ್ಲಿ ಸೌದಿಗೆ ಆಗಮಿಸಿದ್ದ ಅಮೆರಿಕಾದ ಅಂದಿನ ಅಧ್ಯಕ್ಷ ಟ್ರಂಪ್ 110 ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಸೌದಿಗೆ ಪೂರೈಸಲು ಒಪ್ಪಿಗೆ ಸೂಚಿಸಿದರು. ಕತಾರ್ ದೇಶವು ಭಯೋತ್ಪಾದನೆಯನ್ನು ಬೆಂಬಲಿಸುತ್ತಿದೆ ಎಂಬ ಆರೋಪದ ಮೇಲೆ ಸೌದಿ ಅರೇಬಿಯಾ, ಬಹರೈನ್, ಈಜಿಪ್ಟ್, ಯು. ಎ. ಇ ಮತ್ತು ಯೆಮೆನ್ ದೇಶಗಳು ಕತಾರ್‌ನೊಂದಿಗಿನ ಎಲ್ಲಾ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡವು. ಕುವೈತ್ ಮತ್ತು ಓಮನ್ ದೇಶಗಳನ್ನು ಹೊರತುಪಡಿಸಿ ಅಮೆರಿಕ ಸೇರಿದಂತೆ ಈ ಎಲ್ಲ ಜಿಸಿಸಿ (ಗಲ್ಫ್ ಕೋಆರ್ಡಿನೇಷನ್ ಕಮಿಟಿ) ರಾಷ್ಟ್ರಗಳು ಕತಾರ್ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿದವು. ಸೌದಿ ಬೆಂಬಲಿತ ಯೆಮೆನ್ ಮತ್ತು ಲಿಬಿಯಾ ಸರ್ಕಾರಗಳು ಕೂಡ ದಿಗ್ಬಂಧನಕ್ಕೆ ಸಹಿ ಹಾಕಿದವು. ಅಮೆರಿಕ ಮತ್ತು ಸೌದಿ ಅರೇಬಿಯಾದೊಂದಿಗೆ ಸ್ನೇಹವನ್ನು ಹೊಂದಿದ್ದರೂ, ಟರ್ಕಿಯು ಕತಾರ್ ಮೇಲೆ ದಿಗ್ಬಂಧನ ಹೇರಲು ಒಪ್ಪಲಿಲ್ಲ. ಬದಲಾಗಿ ಕತಾರ್‌ಗೆ ತುರ್ತಾಗಿ ಆಹಾರ ಮತ್ತು ನೀರನ್ನು ಒದಗಿಸುವ ಭರವಸೆಯನ್ನು ನೀಡಿತು. ಕತಾರ್‌ನಿಂದ ಬೇರೆ ದೇಶಗಳಿಗೆ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡುವ ಪೈಪ್‌ಲೈನ್‌ಗಳು ಸೌದಿ ಭೂಪ್ರದೇಶವನ್ನು ಹಾದು ಹೋಗುತ್ತವೆ. 1971ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡಾಗಿನಿಂದ 1990ರ ಮಧ್ಯ ಭಾಗದವರೆಗೂ ಕತಾರ್ ದೇಶವನ್ನು, ಅಮೆರಿಕ ಬೆಂಬಲಿತ ಸೌದಿ ಆಳ್ವಿಕೆಯ ಉಪಗ್ರಹವೆಂದು ಪರಿಗಣಿಸಲಾಗುತ್ತಿತ್ತು. ವಾಸ್ತವಾಂಶವೆಂದರೆ, ಕತಾರ್‌ನ ಅಲ್–ಉದೆಯಿದ್‌ನಲ್ಲಿ ಅಮೆರಿಕಾದ ದೊಡ್ಡ ನೌಕಾ ನೆಲೆಯಿದೆ. ಇರಾಕ್, ಸಿರಿಯಾ, ಆಫ್ಘಾನಿಸ್ತಾನ್ ಮತ್ತು ಮಧ್ಯಪ್ರಾಚ್ಯದ ಇತರ 17 ರಾಷ್ಟ್ರಗಳ ಮೇಲೆ ತನ್ನ ಪ್ರಾಬಲ್ಯ ಮತ್ತು ನಿಯಂತ್ರಣವನ್ನು ಸಾಧಿಸುವ ಉದ್ದೇಶದಿಂದ ಭಾರಿ ಪ್ರಮಾಣದ ಸೇನಾ ಪಡೆಗಳನ್ನು ಅಮೆರಿಕಾ ಕತಾರ್‌ನಲ್ಲಿ ನೆಲೆಯೂರಿಸಿದೆ. ಸಿರಿಯಾ ಮತ್ತು ಇರಾಕ್ ಮೇಲೆ ಮಿಲಿಟರಿ ಆಪರೇಷನ್ ನಡೆಸಲು ಕತಾರ್ ನೆಲೆಯು ಪ್ರಮುಖವಾಗಿದೆ ಎಂದು ಅಮೇರಿಕಾ ಪರಿಗಣಿಸಿದೆ. ಹೀಗಿದ್ದರೂ ಅಮೇರಿಕಾ ಏಕೆ ಕತಾರ್‌ನ್ನು ಗುರಿ ಮಾಡುತ್ತಿದೆ? ಮುಂದುವರೆದ ತಂತ್ರಜ್ಞಾನದ ಸಹಾಯವನ್ನು ಪಡೆದುಕೊಂಡ ಕತಾರ್‌ನ ಆಳ್ವಿಕರು ಸೌದಿ ಮೂಲಕ ಹಾದು ಹೋಗುತ್ತಿದ್ದ ಪೈಪ್‌ಲೈನ್‌ಗಳ ಬಳಕೆಯನ್ನು ನಿಲ್ಲಿಸಿ, ಹಡಗುಗಳಲ್ಲಿ ಅನಿಲವನ್ನು ತುಂಬಿಸಿ ಸ್ವತಂತ್ರವಾಗಿ ಬೇರೆಡೆಗೆ ಸಾಗಿಸುವ ವಾಣಿಜ್ಯ ಮಾರ್ಗವನ್ನು ಕಂಡುಕೊಂಡರು. ಹೀಗಾಗಿ ರಾಜ ಮನೆತನಗಳ ಆಡಳಿತದೊಂದಿಗೆ ಹೊಂದಾಣಿಕೆಯನ್ನು ಹೊಂದಿರುವ ಎರಡು ಬಂಡವಾಳಶಾಹಿ ಶಕ್ತಿಗಳ ನಡುವೆ ಆರ್ಥಿಕ ಪ್ರಾಬಲ್ಯವನ್ನು ಸಾಧಿಸುವ ಘರ್ಷಣೆಯು ನಡೆಯುತ್ತಿದೆ. ಹೀಗಾಗಿ ಕತಾರ್ ಆಳ್ವಿಕರು ಸೌದಿ–ವಿರೋಧಿ ಗುಂಪುಗಳಾದ ಈಜಿಪ್ಟ್, ಮುಸ್ಲಿಂ ಸೋದರತ್ವ, ಪ್ಯಾಲೆಸ್ಟೈನಿನ ಹಮಾಸ್ ಮತ್ತು ಅಮೇರಿಕಾ ವಿರೋಧಿ–ಸೌದಿ ವಿರೋಧಿ ಶಕ್ತಿಗಳಾದ ಇರಾನ್‌ನೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡರು. ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳಿಂದ ಅರಬ್ ರಾಷ್ಟ್ರಗಳ ನಡುವೆ ಪರಸ್ಪರರ ಮಧ್ಯೆ ನಡೆಯುತ್ತಿರುವ ಘರ್ಷಣೆಗಳಿಗೆ ಇವು ಕೆಲವು ಉದಾಹರಣೆಗಳು.

### ಸಮಾಜವಾದಿ ಬಣದ ಕೊರತೆ ಜನರಿಗೆ ದುಬಾರಿಯಾಗಿ ಪರಿಣಮಿಸಿದೆ.

ಇಂದು ಸಾಮ್ರಾಜ್ಯಶಾಹಿ ಅಮೆರಿಕ ವಿರೋಧಿ ಮಧ್ಯಪ್ರಾಚ್ಯದ ದೇಶಗಳಿಗೆ ಯಾವುದೇ ನಂಬಿಕಸ್ತ ಸ್ನೇಹಿತರಿಲ್ಲದಿರುವುದು ಅತ್ಯಂತ ಪ್ರಮುಖ ವಿಷಯವಾಗಿದೆ. ಸಾಮ್ರಾಜ್ಯಶಾಹಿಗಳ ಪಿತೂರಿಗಳನ್ನು ಎದುರಿಸುವಲ್ಲಿ, ಸಮಾಜವಾದಿ ಬಣದ ಅಸ್ತಿತ್ವವು, ಅರಬ್ ರಾಷ್ಟ್ರಗಳಿಗೆ ಅತ್ಯಂತ ವಿಶ್ವಾಸಾರ್ಹ ಸ್ನೇಹಿತನ ಪಾತ್ರ ನಿರ್ವಹಿಸಿತ್ತು. 1956ರಲ್ಲಿ ಈಜಿಪ್ಟಿನ ಅಂದಿನ ಅಧ್ಯಕ್ಷರಾಗಿದ್ದ ಅರಬ್ ರಾಷ್ಟ್ರವಾದಿ ಜಮಾಲ್ ಅಬ್ದೇಲ್ ನಾಸರ್ ಅವರು ಏಷ್ಯಾ ಮತ್ತು ಯುರೋಪ್ ಖಂಡಗಳು ಸಂಧಿಸುತ್ತಿದ್ದ ಜಲಮಾರ್ಗವಾಗಿದ್ದ ಸುಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದರು. ಇದು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳಿಗೆ ಪ್ರಮುಖ ವ್ಯಾಪಾರಿ ಮಾರ್ಗವಾಗಿತ್ತು. ಇಸ್ರೇಲ್‌ನೊಂದಿಗೆ ಕೈ ಸೇರಿಸಿ ಈ ಮಾರ್ಗವನ್ನು ಬಳಸಿಕೊಳ್ಳಲು ಎರಡೂ ದೇಶಗಳು ಹೊಂಚು ಹಾಕಿದವು. ಅದಾಗಲೇ ಈ ಮಾರ್ಗದ ಬಳಕೆಗೆ, ಇಸ್ರೇಲಿನ ಹಡಗುಗಳು ನಿಷೇಧಕ್ಕೊಳಪಟ್ಟಿದ್ದವು. ಇಸ್ರೇಲನ್ನು ನೆಪವಾಗಿಟ್ಟುಕೊಂಡು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಈಜಿಪ್ಟ್ ಮೇಲೆ ದಾಳಿ ನಡೆಸುವ ಷಡ್ಯಂತ್ರವನ್ನು ರಚಿಸಿದವು. ಮೊದಲು ಇಸ್ರೇಲ್ ಹಡಗೊಂದು ಕಾಲುವೆಯನ್ನು ಪ್ರವೇಶಿಸಿತು. ಈಜಿಪ್ಟ್ ಪಡೆಗಳು ಅದನ್ನು ತಡೆಯಲು ಬಂದಾಗ ಅವರ ಮೇಲೆ ಇಸ್ರೇಲ್ ದಾಳಿ ಮಾಡಿತು. ಇದಾದ ಎರಡು ದಿನಗಳಲ್ಲೇ ಬ್ರಿಟನ್ ಮತ್ತು ಫ್ರಾನ್ಸ್ ಪಡೆಗಳು ಬಂದು ಇಸ್ರೇಲನ್ನು ಸೇರಿಕೊಂಡವು. ಈ ರೀತಿ ಅಲ್ಲಿ ಯುದ್ಧದ ಸ್ಥಿತಿಯು ತಲೆದೋರಿತು. ಪರಿಷ್ಕರಣವಾದಿ ಕ್ರುಶ್ಚೇವ್ ನಾಯಕತ್ವವು ರಷ್ಯಾದಲ್ಲಿ ಅಧಿಕಾರವನ್ನು ನಡೆಸುತ್ತಿದ್ದರೂ ಸಹ, ಮಹಾನ್ ಸ್ಟಾಲಿನರ ಕ್ರಾಂತಿಕಾರಿ ನಿಲುವಿನಿಂದ ಇನ್ನೂ ಸಂಪೂರ್ಣವಾಗಿ ದಿಕ್ಚ್ಯುತಿ ಹೊಂದಿರದೆ ಇದ್ದುದರಿಂದ, ಅದು ಈಜಿಪ್ಟಿನ ಸಹಾಯಕ್ಕೆ ಧಾವಿಸಿತು. 72 ಗಂಟೆಗಳಲ್ಲಿ ತಮ್ಮ ಪಡೆಗಳನ್ನು ಹಿಂದೆ ತೆಗೆದುಕೊಳ್ಳದಿದ್ದಲ್ಲಿ ಲಂಡನ್, ಪ್ಯಾರಿಸ್ ಮತ್ತು ಜಿಯೋನಿಸ್ಟ್ ಇಸ್ರೇಲ್ ಮೇಲೆ ದಾಳಿ ನಡೆಸುವುದಾಗಿ ರಷ್ಯಾ ಎಚ್ಚರಿಕೆಯನ್ನು ನೀಡಿತು. ಪರಿಣಾಮವಾಗಿ, ಕೇವಲ 48 ಗಂಟೆಗಳಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಪಡೆಗಳು ಬಾಲಮುದುರಿಕೊಂಡು ಅಲ್ಲಿಂದ ಕಾಲ್ಕಿತ್ತವು.

ಆದರೆ ಇಂದು ಸಮಾಜವಾದಿ ಬಣ ಅಸ್ತಿತ್ವದಲ್ಲಿಲ್ಲ. ರಷ್ಯಾದ ಒಳಗಿನ ಬಂಡವಾಳಶಾಹಿ ಶಕ್ತಿಗಳು ಹೊರಗಿನ ಬಂಡವಾಳಶಾಹಿಗಳೊಡಗೂಡಿ ತತ್ವಭ್ರಷ್ಟ ಪರಿಷ್ಕರಣಾವಾದಿಗಳ ಸಹಕಾರದಿಂದ ಪ್ರತಿಕ್ರಾಂತಿಯನ್ನು ನೆರವೇರಿಸಿದರು. ಇಂದು ಸಮಾಜವಾದವು ಪತನಗೊಂಡಿದೆ. ಯುದ್ಧಗಳನ್ನು ಹುಟ್ಟುಹಾಕುವ, ಒಂದು ದೇಶದ ವಿರುದ್ಧ ಇನ್ನೊಂದು ದೇಶವನ್ನು ಎತ್ತಿಕಟ್ಟುವ, ಅಹವಾಲು ಆಲಿಸುವ ನೆಪದಲ್ಲಿ ದೇಶಗಳನ್ನು ಆಕ್ರಮಿಸುವ ಮತ್ತು ಈ ಕೃತ್ಯಗಳನ್ನು ಪ್ರತಿರೋಧಿಸುವ ದೇಶಗಳನ್ನು ಮಿಲಿಟರಿ ಪ್ರಾಬಲ್ಯದೊಂದಿಗೆ ಮಟ್ಟ ಹಾಕುತ್ತಾ ಅಥವಾ ಆರ್ಥಿಕ ದಿಗ್ಬಂಧನಗಳನ್ನು ಹೇರುತ್ತಾ ಸಾಮ್ರಾಜ್ಯ ಶಾಹಿಗಳು ವಿಜೃಂಬಿಸುತ್ತಿದ್ದಾರೆ. ಒಟ್ಟಾರೆ ಸಾಮ್ರಾಜ್ಯಶಾಹಿಗಳ ಅಟ್ಟಹಾಸಕ್ಕೆ ಅಂಕುಶವಿಲ್ಲದಂತಾಗಿದೆ.

ಸಮಾಜವಾದಿ ಬಣವು ಅಸ್ತಿತ್ವದಲ್ಲಿದ್ದಿದ್ದರೆ, ಪ್ಯಾಲೆಸ್ಟೈನ್ ಅನ್ನು ಇಸ್ರೇಲ್ ಆಕ್ರಮಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಉಕ್ರೇನ್– ರಷ್ಯಾ ನಡುವೆ ಯುದ್ಧವು ಸ್ಫೋಟಗೊಳ್ಳುತ್ತಿರಲಿಲ್ಲ. ಇರಾಕ್ ಅನ್ನು ಅಮೆರಿಕ ಆಕ್ರಮಿಸಿಕೊಂಡ ನಂತರ, ಅರಬ್ ರಾಷ್ಟ್ರಗಳ ನಡುವೆ ಬೆಳೆದಿರುವ ಅಮೆರಿಕಾ ವಿರೋಧಿ ಭಾವನೆಯನ್ನು ಬಳಸಿಕೊಂಡ ಸಾಮ್ರಾಜ್ಯಶಾಹಿ ಚೀನಾ, ಮಧ್ಯಪ್ರಾಚ್ಯದಲ್ಲಿ ತನ್ನ ಪ್ರಭಾವವನ್ನು ಹರಡಿದೆ. ಭಾರತದೊಂದಿಗೆ ಬಲವಾದ ಬಾಂಧವ್ಯವನ್ನು ಹೊಂದಿರುವ ಅಮೆರಿಕಾ, ಅರಬ್ ಜಗತ್ತಿನಲ್ಲಿ ತನ್ನ ನಿಯಂತ್ರಣವನ್ನು ಸ್ಥಾಪಿಸಲು ಚೀನಾದೊಂದಿಗೆ, ಸೆಣಸಾಟದಲ್ಲಿದೆ. ಸಮಕಾಲೀನ ಜಗತ್ತಿನಲ್ಲಿ, ಅರಬ್ ರಾಷ್ಟ್ರಗಳ ನಡುವಿನ ಒಡಕುಗಳ ಚಿತ್ರಣ ಇದಾಗಿದೆ.

### ನಾವು ಮಾಡಬೇಕಾದುದೇನು?

ಅರಬ್ ಜಗತ್ತಿನ ಸಾಮ್ರಾಜ್ಯಶಾಹಿ ವಿರೋಧಿ ಶಾಂತಿ–ಪ್ರಿಯ ಧೈರ್ಯಶಾಲಿ ಜನರನ್ನು ನಾವು ಅಭಿನಂದಿಸುತ್ತೇವೆ, ಜಗತ್ತಿನಾದ್ಯಂತ ಎಲ್ಲೆಡೆ ಜನತೆ ಪ್ಯಾಲೆಸ್ಟೈನಿಯರ ಮಾರಣಹೋಮ ಮಾಡುತ್ತಿರುವ ಈ ಯುದ್ಧವನ್ನು ನಿಲ್ಲಿಸುವಂತೆ ಇಸ್ರೇಲ್‌ನ್ನು ಆಗ್ರಹಿಸುತ್ತಿದ್ದಾರೆ. ಯೂರೋಪ್ ಮತ್ತು ಅಮೇರಿಕಾದಲ್ಲಿ ಜನತೆ ಬೃಹತ್ ರ‍್ಯಾಲಿಗಳನ್ನು ಸಂಘಟಿಸಿ ಪ್ಯಾಲೆಸ್ಟೈನಿಯನ್ ಜನತೆಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತ ಪಡಿಸುತ್ತಿದ್ದಾರೆ. ಇಸ್ರೇಲ್‌ಗೆ ಮಾನ್ಯತೆ ನೀಡಿರುವ ಮೊರಾಕೊದ ಬೀದಿಗಳಲ್ಲಿ, ಅಮ್ಮನ್‌ನ ರಸ್ತೆಗಳಲ್ಲಿ ಬೃಹತ್ ಸಭೆಗಳನ್ನು ಸಂಘಟಿಸಲಾಗಿದೆ. ಇದರಲ್ಲಿ ಲಕ್ಷಾಂತರ ಮಂದಿ ಪಾಲ್ಗೊಂಡಿದ್ದರು. ಈಜಿಪ್ಟ್‌ನ ರಾಜಧಾನಿ ಕೈರೋದಲ್ಲಿ, ಲಂಡನ್, ಪ್ಯಾರಿಸ್, ವಾಷಿಂಗ್ಟನ್, ಬರ್ಲಿನ್, ಅಂಕಾರಾ, ಇಸ್ತಾಂಬುಲ್ ಮತ್ತು ಇತರೆ ದೇಶಗಳ ಸಾವಿರಾರು ಬೀದಿಗಳಲ್ಲಿ ಗಾಜಾದ ಮೇಲೆ ಇಸ್ರೇಲ್ ನಡೆಸುತ್ತಿರುವ ಬಾಂಬ್ ದಾಳಿಯನ್ನು ನಿಲ್ಲಿಸಲು ಆಗ್ರಹಿಸಿ, ನಾಗರಿಕರ ಸಾವು ನೋವುಗಳಿಗೆ ಕೊನೆ ಹೇಳಿ ಎಂದು ಪ್ರತಿಭಟಿಸುತ್ತಿದ್ದಾರೆ. ಖಂಡಿತವಾಗಿ, ಈ ಜನರ ಪ್ರತಿಭಟನೆಗಳು ಅಪಾರ ಪ್ರಾಮುಖ್ಯತೆಯನ್ನು ಹೊಂದಿವೆ!

ಜಾಗತಿಕವಾಗಿ ಜನರು, ವಿಶೇಷವಾಗಿ ಗಲ್ಫ್ ದೇಶಗಳ ಜನರು ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ಕುತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕು ಮತ್ತು ತಮ್ಮ ದೇಶಗಳ ಪ್ರತಿಗಾಮಿ ರಾಜಪ್ರಭುತ್ವದ ಆಡಳಿತಗಾರರು ಅಮೆರಿಕಾದ ಮಾರ್ಗವನ್ನು ಅನುಸರಿಸುವುದರಿಂದ ಮತ್ತು ಅದರ ತೋಳು ತಿರುಚುವ ತಂತ್ರಗಳಿಗೆ ಶರಣಾಗುವುದರಿಂದ ಶಾಂತಿ ಎಂದಿಗೂ ದೊರಕುವುದಿಲ್ಲ ಎಂಬುದನ್ನು ಗ್ರಹಿಸಬೇಕು.


ಜನರ ಹಿತಾಸಕ್ತಿಗೆ ಸಾಮ್ರಾಜ್ಯಶಾಹಿಗಳಂತೆಯೇ ಸಮಾನವಾಗಿ ಅಪಾಯಕಾರಿಯಾದ ಮೂಲಭೂತವಾದಿ–ಭಯೋತ್ಪಾದಕ ಗುಂಪುಗಳು, ಎಡ ಮತ್ತು ಪ್ರಜಾಸತ್ತಾತ್ಮಕ ಚಳವಳಿಯ ಅನುಪಸ್ಥಿತಿಯಲ್ಲಿ ಈ ಪ್ರದೇಶವನ್ನು ತಮ್ಮ ಬೇಟೆಯಾಡುವ ಸ್ಥಳ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಈ ಪ್ರದೇಶವು ಯುದ್ಧ–ಪೀಡಿತ ವಲಯವಾಗಿ ಮುಂದುವರಿಯುತ್ತದೆ ಮತ್ತು ಲಕ್ಷಾಂತರ ಅಮಾಯಕ ನಾಗರಿಕರು ಇನ್ನೂ ಕೊಲ್ಲಲ್ಪಡುತ್ತಾರೆ,

ಆದ್ದರಿಂದ ಸಾಮ್ರಾಜ್ಯಶಾಹಿ ಬೆಂಬಲಿತ ಇಸ್ರೇಲ್‌ನ ಕ್ರೌರ್ಯವನ್ನು ಹಿಮ್ಮೆಟ್ಟಿಸಲು ಜನಸಾಮಾನ್ಯರಲ್ಲಿ ಬೆಂಬಲ ಭರವಸೆ ಮೂಡಿಸುವುದು ಇಂದಿನ ಅಗತ್ಯವಾಗಿದೆ ಆ ದಿಶೆಯಲ್ಲಿ ಜನತೆಯ ಹಿತಾಸಕ್ತಿಯನ್ನು ಕಾಪಾಡಲು, ಪಂಥೀಯ ಮನಸ್ಥಿತಿ ಅಥವಾ ಧಾರ್ಮಿಕ ಪ್ರಭಾವವನ್ನು ಮೀರಿ ಸರಿಯಾದ ಕ್ರಾಂತಿಕಾರಿ ಮಾರ್ಗ ಮತ್ತು ಸರಿಯಾದ ಕ್ರಾಂತಿಕಾರಿ ನಾಯಕತ್ವದಡಿಯಲ್ಲಿ ಪ್ರಬಲವಾದ ಸಂಯುಕ್ತ ಸಾಮ್ರಾಜ್ಯಶಾಹಿ ವಿರೋಧಿ, ವಿಶೇಷವಾಗಿ ಅಮೆರಿಕಾ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯನ್ನು ಇಡೀ ಗಲ್ಫ್‌ನಲ್ಲಿ ಬೆಳೆಸುವುದು ಮಾತ್ರವೇ ಈ ಸಂಕಷ್ಟದ ಸಂದರ್ಭದಲ್ಲಿ ಏಕೈಕ ದಾರಿಯಾಗಿದೆ.

---

## ಸರ್ವೋಚ್ಚ ನ್ಯಾಯಲಯ ಎತ್ತಿ ಹಿಡಿದಿರುವ ವಿಧಿ 370 ರದ್ದು:

### ಕಾಮ್ರೇಡ್ ಪ್ರವಾಶ್ ಘೋಷ್ ಪ್ರತಿಕ್ರಿಯೆ



ವಿಧಿ 370 ಅನ್ನು ಕೇಂದ್ರ ಸರ್ಕಾರ ರದ್ದುಪಡಿಸಿರುವುದನ್ನು ಎತ್ತಿ ಹಿಡಿದಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸುತ್ತಾ, ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಈ ಕೆಳಕಂಡ ಹೇಳಿಕೆ ನೀಡಿದ್ದಾರೆ.

ವಿಧಿ 370 ಅನ್ನು ಕೇಂದ್ರ ಸರ್ಕಾರ ರದ್ದುಪಡಿಸಿರುವುದನ್ನು ಎತ್ತಿ ಹಿಡಿದಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾಗುವಾಗ, ಕೇಂದ್ರ ಸರ್ಕಾರ ಕಾಶ್ಮೀರದ ಜನತೆಗೆ ನೀಡಿರುವ ವಾಗ್ದಾನದ ಉಲ್ಲಂಘನೆಯಾಗುತ್ತದೆ. ಇದರಿಂದ ಅವರಿಗೆ ಅನ್ಯಾಯವಾಗುತ್ತದೆ.

---

## 146 ಸಂಸದರ ಅಮಾನತ್ತು– ಎಸ್‌ಯುಸಿಐ(ಸಿ)ಖಂಡನೆ

ಬಿಜೆಪಿ ಕೇಂದ್ರ ಸಕಾರ, 146 ಸಂಸದರನ್ನು ಅಮಾನತ್ತು ಮಾಡಿರುವ ಫ್ಯಾಸೀವಾದಿ ಕ್ರಮವನ್ನು ಖಂಡಿಸಿ, ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಡಿಸೆಂಬರ್ 13ರಂದು ಸಂಭವಿಸಿದ ಲೋಕಸಭೆಯ ಭದ್ರತಾ ಲೋಪಕ್ಕೆ ಸಂಬಂಧಿಸಿದಂತೆ ಗೃಹ ಸಚಿವರು ಸಂಸತ್ತಿನಲ್ಲಿ ಹೇಳಿಕೆ ನೀಡುವಂತೆ ವಿರೋಧ ಪಕ್ಷಗಳ ಸಂಸದರು ಆಗ್ರಹಿಸಿರುವುದು ಕಾನೂನುಬದ್ಧವೂ, ನ್ಯಾಯಸಮ್ಮತವೂ ಆಗಿದೆ. ಆದರೆ, ಈ ಬೇಡಿಕೆಗೆ ಮಣಿಯುವ ಬದಲು ಬಿಜೆಪಿ ಸರ್ಕಾರವು, ಎರಡೂ ಸದನಗಳ 146 ಸಂಸದರನ್ನು ಅಮಾನತು ಗೊಳಿಸುವ ಮೂಲಕ ಉತ್ತರ ನೀಡಿರುವುದು ನಮ್ಮ ದೇಶದ ಇತಿಹಾಸದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲೇ ಕಂಡರಿಯದ ಘಟನೆಯಾಗಿದೆ. ಇದು ಸಂಸದೀಯ ಪ್ರಜಾಪ್ರಭುತ್ವದ ಅಳಿದುಳಿದ ರೂಢಿಗಳನ್ನೂ ಧ್ವಂಸಗೊಳಿಸಿ, ದೇಶದಲ್ಲಿ ಫ್ಯಾಸೀವಾದಿ ಸರ್ವಾಧಿಕಾರವನ್ನು ಬಿಗಿಗೊಳಿಸುವ ಬಿಜೆಪಿ ಸರ್ಕಾರದ ಹುನ್ನಾರವನ್ನು ಸೂಚಿಸುತ್ತದೆ.

ಈ ಅತ್ಯಂತ ಅಪ್ರಜಾತಾಂತ್ರಿಕ ಕ್ರಮವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಸಂಸದರ ಈ ಅಮಾನತ್ತನ್ನು ಹಿಂಪಡೆಯಲು ಒತ್ತಾಯಿಸುತ್ತೇವೆ. ಜೊತೆಗೆ, ರೂ. 836 ಕೋಟಿ ವೆಚ್ಚದಲ್ಲಿ ಕಟ್ಟಿರುವ, ಪ್ರಧಾನಿಗಳೇ ಭಾರೀ ಪ್ರಚಾರದೊಂದಿಗೆ ಉದ್ಘಾಟಿಸಿದ ಹೊಸ ಸಂಸತ್ ಭವನದ ಭದ್ರತಾ ವ್ಯವಸ್ಥೆಯಲ್ಲಿ ಆದ ಲೋಪದ ಕುರಿತು ಗೃಹ ಸಚಿವರು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸುತ್ತೇವೆ. ಬಿಜೆಪಿ ಸರ್ಕಾರ ನಡೆಸುವ ಜನತಾಂತ್ರಿಕ ನಿಯಮಗಳ ಇಂತಹ ವ್ಯವಸ್ಥಿತ ನಾಶ ಮತ್ತು ದುರಾಡಳಿತದ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿ ಜನತೆ ಒಂದಾಗಿ ತಮ್ಮ ಪ್ರತಿಭಟನೆಯ ದನಿಯನ್ನು ದಾಖಲಿಸಬೇಕೆಂದು ನಾವು ಮನವಿ ಮಾಡುತ್ತೇವೆ.

# ಸಾರ್ವಜನಿಕ ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿ ಸರ್ಕಾರದ್ದೇ!

## ಕರ್ನಾಟಕ ರಾಜ್ಯ ಶಿಕ್ಷಣ ನೀತಿ ಆಯೋಗದ ಸಭೆಗಳಲ್ಲಿ ಎಐಡಿಎಸ್‌ಓ ಆಗ್ರಹ!!

ಕರ್ನಾಟಕದಲ್ಲಿ ಜನಪರ ಶಿಕ್ಷಣ ನೀತಿಯನ್ನು ರೂಪಿಸುವ ಕುರಿತು, ಬೆಳಗಾವಿ, ಕಲಬುರ್ಗಿ, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯ ಶಿಕ್ಷಣ ನೀತಿ ಆಯೋಗವು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ರಾಜ್ಯದ ವಿದ್ಯಾರ್ಥಿ ಸಮೂಹವನ್ನು ಪ್ರತಿನಿಧಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ಈ ಸಭೆಯಲ್ಲಿ ಭಾಗವಹಿಸಿತ್ತು. ರಾಜ್ಯದಲ್ಲಿ ಬೃಹತ್ ವಿದ್ಯಾರ್ಥಿಗಳ ಹೋರಾಟಕ್ಕೆ ಕಾರಣವಾಗಿದ್ದ, ಹಿಂದಿನ ಸರ್ಕಾರವು ಜಾರಿಗೊಳಿಸಿದ್ದ ಎನ್‌ಇಪಿ–2020 ರ ಕರಾಳ ಅಂಶಗಳನ್ನು ಸಮಿತಿಯ ಮುಂದೆ ಮಂಡಿಸಲಾಯಿತು.

ನಮ್ಮ ದೇಶದ ನವೋದಯ ಚಳುವಳಿಯ ಹರಿಕಾರರು ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿಗಳ ಆಶಯದಂತೆ ಎಲ್ಲ ವಿದ್ಯಾರ್ಥಿಗಳಿಗೂ ಶಿಕ್ಷಣವನ್ನು ಒದಗಿಸುವ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವು ವಹಿಸಿಕೊಳ್ಳಬೇಕು. ಲಾಲಾ ಲಜಪತ್ ರಾಯ್ ಅವರು ಹೇಳಿರುವಂತೆ, "ಶಿಕ್ಷಣಕ್ಕೆ ಹಣಕಾಸು ಒದಗಿಸುವುದು ಸರ್ಕಾರಿ ಖಜಾನೆಯ ಮೊದಲ ಆದ್ಯತೆಯಾಗಬೇಕು" ಎಂದು ಮಂಡಿಸಲಾಯಿತು. ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣದ ನೀಲಿನಕ್ಷೆಯಾಗಿರುವ ಎನ್‌ಈಪಿ–2020 ಅನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು. ಈಗಾಗಲೇ ಅನುಷ್ಠಾನಗೊಳಿಸಿರುವ, ಆರ್ಥಿಕ ಸ್ವಾಯತ್ತ ಸಂಸ್ಥೆಗಳನ್ನು ಕೊನೆಗಾಣಿಸಬೇಕು. ವಿಲೀನೀಕರಣದ ಹೆಸರಲ್ಲಿ ಸರ್ಕಾರಿ ಶಾಲಾ–ಕಾಲೇಜುಗಳ ಮುಚ್ಚುವಿಕೆಯನ್ನು ಕೈಬಿಡಬೇಕು. ಕೌಶಲ್ಯ ಅಭಿವೃದ್ಧಿಯ ಹೆಸರಿನಲ್ಲಿ ಒದಗಿಸಲಾಗುವ ವೃತ್ತಿ ಶಿಕ್ಷಣವು ಶಿಕ್ಷಣದ ಅಡಿಪಾಯವನ್ನೇ ಅಲುಗಾಡಿಸುತ್ತದೆ. ಎಲ್ಲ ವಿದ್ಯಾರ್ಥಿಗಳು ಎಲ್ಲ ವಿಷಯಗಳನ್ನು ಕಲಿಯಬೇಕೆಂಬ ಬಣ್ಣದ ಮಾತಿನೊಂದಿಗೆ, ಕಲಾ ವಿಭಾಗದ ವಿದ್ಯಾರ್ಥಿಯು ಕಡ್ಡಾಯವಾಗಿ ವಿಜ್ಞಾನದ ವಿಷಯವನ್ನು, ವಿಜ್ಞಾನದ ವಿದ್ಯಾರ್ಥಿಯು ಕಡ್ಡಾಯವಾಗಿ ವಾಣಿಜ್ಯ ವಿಭಾಗದ ವಿಷಯವನ್ನು ಕಲಿಯಲು ಒತ್ತಾಯ ಪಡಿಸುವ ಬಹುಶಿಸ್ತೀಯ ಪದ್ಧತಿಯು ಉನ್ನತ ಶಿಕ್ಷಣದ ಉದ್ದೇಶಕ್ಕೆ ವಿರುದ್ಧವಾಗಿ ಬಹು ಆಯ್ಕೆಯ ಗೊಂದಲದಲ್ಲಿ ವಿದ್ಯಾರ್ಥಿಗಳನ್ನು ಸಿಲುಕಿಸುತ್ತದೆ. ಹಂತಹಂತವಾಗಿ ಒಂದು ವಿಷಯದ ಕುರಿತು ಆಳವಾದ ಸಮಗ್ರ ಜ್ಞಾನವನ್ನು ಸಂಪಾದಿಸುವ ಪ್ರಕ್ರಿಯೆಗೆ ಇದು ತಡೆಯೊಡ್ಡುವುದಲ್ಲದೆ, ಯಾವ ವಿಷಯದ ಕುರಿತೂ ಆಳವಾಗಿ ಯೋಚಿಸಲು ಸಾಧ್ಯವಾಗದ 'ಮೇಲ್ಪದರದ ಚಿಂತನಾ ಪ್ರಕ್ರಿಯೆ'ಗೆ ವಿದ್ಯಾರ್ಥಿಗಳನ್ನು ಬಲಿಪಶು ಮಾಡುತ್ತದೆ. ಬಹು ಆಗಮನ–ನಿರ್ಗಮನ ಪದ್ಧತಿಯು, ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಹೊಂದಲು ಪೂರಕ ವಾತಾವರಣವನ್ನು ನಿರ್ಮಿಸುವ ಬದಲು, ಕಾಲೇಜನ್ನು ತೊರೆಯಲು ಉತ್ತೇಜನ ನೀಡುತ್ತ ಡ್ರಾಪ್ ಔಟ್‌ಗಳನ್ನು ಶಾಸನಬದ್ಧಗೊಳಿಸತ್ತದೆ. ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರಲ್ಲಿ ಆತಂಕವನ್ನು ಸೃಷ್ಟಿ ಮಾಡಿರುವ ನಾಲ್ಕು ವರ್ಷಗಳ ಪದವಿ ವ್ಯವಸ್ಥೆ ತಾರತಮ್ಯದಿಂದ ಕೂಡಿದೆ. ಖಾಸಗಿ ಹಾಗೂ ವಿದೇಶಿ ವಿಶ್ವವಿದ್ಯಾಲಯಗಳು ಶಿಕ್ಷಣವನ್ನು ಜಾಗತಿಕ ಮಟ್ಟದ ವ್ಯಾಪಾರಿ ಸರಕನ್ನಾಗಿಸುತ್ತವೆ. ಇವೆಲ್ಲಾ ವಿಷಯಗಳ ಕುರಿತು ವಿದ್ಯಾರ್ಥಿ ಸಮೂಹದ ಅಭಿಪ್ರಾಯಗಳನ್ನು ಮಂಡಿಸಲಾಯಿತು.


ಧಾರವಾಡ


ಕಲಬುರ್ಗಿ



ಬೆಂಗಳೂರು


ಮೈಸೂರು

ಮೂಲಭೂತವಾಗಿ, ಸರ್ಕಾರವು ಸಾರ್ವಜನಿಕ ಶಿಕ್ಷಣಗಳು ಸಂಸ್ಥೆಗಳನ್ನು ಬಲಪಡಿಸಬೇಕು. ಈ ನಿಟ್ಟಿನಲ್ಲಿ ಜನರ ತೆರಿಗೆ ದುಡ್ಡನ್ನು, ಶಿಕ್ಷಣಕ್ಕಾಗಿ ಆದ್ಯತೆಯ ಮೇರೆಗೆ ವಿನಿಯೋಗಿಸಬೇಕು. ಪಠ್ಯಕ್ರಮದ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ವೈಜ್ಞಾನಿಕ, ಧರ್ಮನಿರಪೇಕ್ಷ ಅಂಶಗಳನ್ನು ಬಲಪಡಿಸಬೇಕು. ಪ್ರತಿ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಅಧ್ಯಾಪಕರು ಸೇರಿದಂತೆ ಕಟ್ಟಡ ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂಬ ಹಲವಾರು ಬೇಡಿಕೆಗಳನ್ನು ಸಭೆಗಳಲ್ಲಿ ಚರ್ಚಿಸಿ, ಈ ಕುರಿತಾದ ವಿಸ್ತೃತ ಮನವಿ ಪತ್ರವನ್ನು ಸಮಿತಿಗೆ ಸಲ್ಲಿಸಲಾಯಿತು.

ಎಐಡಿಎಸ್‌ಓ ರಾಜ್ಯ ಅಧ್ಯಕ್ಷರಾದ ಕಾ. ಅಶ್ವಿನಿ ಕೆ ಎಸ್, ರಾಜ್ಯ ಕಾರ್ಯದರ್ಶಿಗಳಾದ ಕಾ. ಅಜಯ್ ಕಾಮತ್, ರಾಜ್ಯ ಖಜಾಂಚಿಗಳಾದ ಕಾ. ಸುಭಾಷ್, ರಾಜ್ಯ ಉಪಾಧ್ಯಕ್ಷರುಗಳಾದ ಕಾಮ್ರೇಡರು ಹಣಮಂತು, ಚಂದ್ರಕಲಾ, ಸ್ನೇಹಾ ಕಟ್ಟಿಮನಿ, ಅಪೂರ್ವ ಹಾಗೂ ಕಚೇರಿ ಕಾರ್ಯದರ್ಶಿ ಕಾ. ಮಹಾಂತೇಶ ಸೇರಿದಂತೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಈ ಸಭೆಗಳಲ್ಲಿ ಭಾಗವಹಿಸಿದ್ದರು. ■

# ದೆಹಲಿ ರಾಷ್ಟ್ರೀಯ ಮ್ಯೂಸಿಯಂನ್ನು ನೆಲಸಮ ಮಾಡಲು ಬಿಜೆಪಿ ಸರ್ಕಾರಕ್ಕೇಕೆ ಆತುರ?


ನವದೆಹಲಿಯಲ್ಲಿರುವ ರಾಷ್ಟ್ರೀಯ ಮ್ಯೂಸಿಯಂನ್ನು ನೆಲಸಮ ಮಾಡಿ, 2024ರ ಮಾರ್ಚ್ ತಿಂಗಳೊಳಗೆ ಅಲ್ಲಿರುವ 2.1ಲಕ್ಷದಷ್ಟು ವಸ್ತುಗಳನ್ನು ಸ್ಥಳಾಂತರ ಮಾಡುವುದಾಗಿ ಕಳೆದ ಮೇ ತಿಂಗಳಲ್ಲಿ ಕೇಂದ್ರ ಬಿಜೆಪಿ ಸರ್ಕಾರವು ಘೋಷಿಸಿತ್ತು. ಇದು ಮೋದಿಯವರ ಕನಸಿನ ರೂ.20,000 ಕೋಟಿ ವೆಚ್ಚದ ಸೆಂಟ್ರಲ್ ವಿಸ್ತಾ ಯೋಜನೆಯ ಪ್ರದೇಶದಲ್ಲೇ ಬರುತ್ತದೆ. ಮುಂದೆ 2025ರೊಳಗೆ 'ಯುಗೇ ಯುಗೀನ್ ಭಾರತ್' ಹೆಸರಿನಲ್ಲಿ ಇನ್ನೊಂದು ಮ್ಯೂಸಿಯಂ ಅನ್ನು ಕಟ್ಟಲಾಗುವುದಂತೆ. ಏಕಾಏಕಿಯಾಗಿ ಮಾಡಿರುವ ಈ ಘೋಷಣೆ ಹೆಸರಾಂತ ಇತಿಹಾಸಕಾರರಲ್ಲಿ, ಪುರಾತತ್ವ ತಜ್ಞರು ಮತ್ತು ಶಿಕ್ಷಣ ತಜ್ಞರಲ್ಲಿ ಗಂಭೀರ ಪ್ರಶ್ನೆ ಮತ್ತು ಆತಂಕಗಳನ್ನು ಸೃಷ್ಟಿಸಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್‌ಇಪಿ 20)ನ್ನು ಹೇಗೆ ಕೇಂದ್ರ ಬಿಜೆಪಿ ಸರ್ಕಾರವು ಜುಲೈ 2020ರಲ್ಲಿ ಕಠಿಣ ಕೋವಿಡ್ ದಿಗ್ಬಂಧನವಿದ್ದಾಗ ಜಾರಿಗೆ ತಂದಿತು ಎಂಬುದು ನಮಗೆಲ್ಲ ತಿಳಿದಿರುವ ವಿಷಯ. ಎನ್‌ಇಪಿಯ ನೀಲನಕ್ಷೆ ತಯಾರಾಗುತ್ತಿದ್ದಾಗ ಬಿಜೆಪಿ ನಾಯಕರು ಹೇಳುತ್ತಿದ್ದರು: 'ಭಾರತದ ಇತಿಹಾಸದ ನೈಜ ಬಣ್ಣ ಕೇಸರಿ. ನಮ್ಮ ಸಂಸ್ಕೃತಿಯಲ್ಲಿ ಏನೇ ಬದಲಾವಣೆ ತರಬೇಕೆಂದರೆ ನಾವು ಮೊದಲು ಇತಿಹಾಸವನ್ನು ಮರುರಚನೆ ಮಾಡಬೇಕು.' ನಂತರದ ದಿನಗಳಲ್ಲಿ ಕೇಂದ್ರ ಸರ್ಕಾರವು ಎಲ್ಲ ಸ್ಥಾಪಿತ ರೂಢಿ, ಆಚರಣೆಗಳನ್ನು ಗಾಳಿಗೆ ತೂರಿ ನಂಬಲಸಾಧ್ಯ ವೇಗದಲ್ಲಿ ಎನ್‌ಇಪಿಯನ್ನು ಜಾರಿಗೊಳಿಸುತ್ತಿದೆ. ರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನು ನೆಲಸಮಗೊಳಿಸುವುದು ಈ ಪಿತೂರಿಯ ಭಾಗವೇ ಎಂಬ ಆತಂಕ ದೇಶದ ಇತಿಹಾಸಕಾರರನ್ನು, ಶಿಕ್ಷಣ ತಜ್ಞರನ್ನು ಕಾಡುತ್ತಿದೆ.

### ರಾಷ್ಟ್ರೀಯ ಮ್ಯೂಸಿಯಮ್ಮಿನ ಇತಿಹಾಸ

ಈ ಮ್ಯೂಸಿಯಮ್ಮಿನ ಇತಿಹಾಸದತ್ತ ಕೊಂಚ ಕಣ್ಣು ಹಾಯಿಸೋಣ. 1946ರ ಮೇ ತಿಂಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿ ಮಾರಿಸ್ ಗೋಯರ್ ಅವರ ಸಮಿತಿಯು ರಾಷ್ಟ್ರೀಯ ವಸುಸಂಗ್ರಹಾಲಯದ ನೀಲನಕ್ಷೆಯನ್ನು ತಯಾರಿಸಿತು. 1947–48ರ ಚಳಿಗಾಲದಲ್ಲಿ ಲಂಡನ್ನಿನ ರಾಯಲ್ ಅಕಾಡೆಮಿಯು ಬ್ರಿಟನ್ ಮತ್ತು ಭಾರತೀಯ ಸರ್ಕಾರಗಳ ಸಹಕಾರದೊಂದಿಗೆ ಭಾರತದ ಹಲವು ವಸ್ತುಸಂಗ್ರಹಾಲಯಗಳಿಂದ ಆಯ್ದ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿತು. ಈ ಯಶಸ್ವಿ ಅನುಭವದ ನಂತರ, ಈ ಕೃತಿಗಳನ್ನು ಆಯಾ ವಸ್ತು ಸಂಗ್ರಹಾಲಯಗಳಿಗೆ ಹಿಂತಿರುಗಿಸುವ ಮೊದಲು ನವದೆಹಲಿಯಲ್ಲೂ ಇಂತಹ ಪ್ರದರ್ಶನವನ್ನು ಏರ್ಪಡಿಸಬೇಕು ಎಂದು ತೀರ್ಮಾನಿಸಲಾಯಿತು. ಅದರಂತೆ 1949ರಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆದ ವಸ್ತು ಪ್ರದರ್ಶನವು ಕೂಡ ಯಶಸ್ವಿಯಾಗಿ ನೆರವೇರಿತು.

ನಮ್ಮ ಪುರಾತನ ಪರಂಪರೆ ಮತ್ತು ಇತಿಹಾಸದ ಕುರಿತು ಪ್ರಾಜ್ಞರಲ್ಲಿ ಮೂಡಿದ



ಇಂತಹ ಆಸಕ್ತಿಯು, ನವದೆಹಲಿಯಲ್ಲಿ ಒಂದು ರಾಷ್ಟ್ರೀಯ ಮ್ಯೂಸಿಯಂ ಸ್ಥಾಪಿಸಲು ಪ್ರೇರಣೆ ನೀಡಿತು. ಅದರಂತೆ 1949ರ ಆಗಸ್ಟ್ 15ರಂದು ಅಂದಿನ ಗವರ್ನರ್ ಜನರಲ್ ಆಗಿದ್ದ ಶ್ರೀ ರಾಜಗೋಪಾಲಾಚಾರಿಯವರು ರಾಷ್ಟ್ರಪತಿ ಭವನದಲ್ಲೇ ರಾಷ್ಟ್ರೀಯ ಮ್ಯೂಸಿಯಮ್ಮನ್ನು ಉದ್ಘಾಟಿಸಿದ್ದರು. ಈಗಿನ ಈ ಕಟ್ಟಡದ ಶಂಕುಸ್ಥಾಪನೆಯನ್ನು ಅಂದಿನ ಪ್ರಧಾನಿ ಜವಾಹರಲಾಲ್ ನೆಹರು 1955ರ ಮೇ 12ರಂದು ಮಾಡಿದರು. ಮ್ಯೂಸಿಯಂನ ಮೊದಲ ಹಂತವನ್ನು 1960ರ ಡಿಸೆಂಬರ್ 18ರಂದು ಉಪರಾಷ್ಟ್ರಪತಿ ರಾಧಾಕೃಷ್ಣನ್ ಉದ್ಘಾಟಿಸಿದರೆ, ಇದರ ಎರಡನೇ ಹಂತವು 1989ರಲ್ಲಿ ಪೂರ್ಣಗೊಂಡಿದೆ.

ಬಹಳ ಶ್ರಮವಹಿಸಿ, ವಿವಿಧ ಮೂಲಗಳಿಂದ ಸಂಗ್ರಹಿಸಿದ ಮತ್ತು ಖರೀದಿಸಿದ ಇಲ್ಲಿರುವ ಪ್ರಾಕ್ತನ ಕೃತಿಗಳ ಸಂಖ್ಯೆ 2 ಲಕ್ಷವನ್ನು ಮೀರಿದೆ. ಭಾರತ ಉಪಖಂಡದ 5000 ವರ್ಷಗಳ ಪರಂಪರೆ, ಇತಿಹಾಸಕ್ಕೆ ಸಂಬಂಧಿಸಿದ ವಸ್ತುಗಳು ಇಲ್ಲಿವೆ. 1957ರ ವರೆಗೆ ಈ ವಸುಸಂಗ್ರಹಾಲಯವನ್ನು ಪುರಾತತ್ವ ಇಲಾಖೆಯ ಪ್ರಧಾನ ನಿರ್ದೇಶಕರು ನಿರ್ವಹಿಸುತ್ತಿದ್ದರು, ನಂತರ ಇದು ಕೇಂದ್ರ ಸಂಸ್ಕೃತಿ ಸಚಿವಾಲಯದ ನಿಯಂತ್ರಣದಲ್ಲಿದೆ.

### ಭಾರತೀಯ ಜ್ಞಾನ ವ್ಯವಸ್ಥೆ ಮತ್ತು ನಂತರ,

ಎನ್‌ಇಪಿ 2020ರ ವಿವಿಧ ಅಂಶಗಳನ್ನು ಜಾರಿಗೊಳಿಸುತ್ತಾ, ಒಕ್ಕೂಟ ಸರ್ಕಾರವು ಭಾರತೀಯ ಜ್ಞಾನ ವ್ಯವಸ್ಥೆ (Indian Knowledge System -IKS) ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದೆ. ಐಕೆಎಸ್ ಪ್ರಕಾರ ಆರ್ಯನ್ನರು ಭಾರತದ ಮೂಲನಿವಾಸಿಗಳು. ಐಕೆಎಸ್ 'ಪರಿಣಿತರು' ಈಗಾಗಲೇ ಸಿಂಧೂ ಕಣಿವೆ ನಾಗರಿಕತೆಗೆ ಸಿಂಧೂ ಸರಸ್ವತಿ ಕಣಿವೆ ನಾಗರಿಕತೆ ಎಂದು ಮರುನಾಮಕರಣ ಮಾಡಿದ್ದಾರೆ. ಸರಸ್ವತಿ ಎಂಬುದು ವೇದಗಳಲ್ಲಿ ಪ್ರಸ್ತಾಪಿಸಲ್ಪಟ್ಟ

11ನೇ ಪುಟಕ್ಕೆ...

## ಸಿಲ್ಕ್ಯಾರಾ ಸುರಂಗ ದುರಂತ

# ವೈಜ್ಞಾನಿಕ ಮತ್ತು ಪರಿಸರ ಮಾನದಂಡಗಳ ನಿರ್ಲಕ್ಷ್ಯವೇ ಕಾರಣ

ಧಾರ್ಮಿಕ ಪ್ರವಾಸೋದ್ಯಮದ ಉದ್ದೇಶದಿಂದ ಸರ್ಕಾರವು ಕೈಗೊಂಡಿರುವ 'ಚಾರ್ ಧಾಮ್ ಪರಿಯೋಜನಾ'ದ ಭಾಗವಾಗಿರುವ ಉತ್ತರಾಖಂಡದ ಉತ್ತರಕಾಶಿಯ ಸಿಲ್ಕ್ಯಾರಾ ಬೆಂಡ್– ಬಾರ್ಕೋಟ್ ಸುರಂಗದ ಪರ್ವತ ಕುಳಿಯಲ್ಲಿ ಸಿಕ್ಕಿಬಿದ್ದಿದ್ದ 41 ಮಂದಿ ಕಾರ್ಮಿಕರನ್ನು ಹೊರತೆಗೆಯುವ ಕಾರ್ಯಾಚರಣೆಯು ಯಶಸ್ವಿಯಾಗಿದ್ದು ಸಂಭ್ರಮವೇನೋ ಸರಿಯೇ! ಆದರೆ, ಬಹಳ ಅವ್ಯವಸ್ಥಿತವಾಗಿ ಯಾವುದೇ ನಿರ್ದಿಷ್ಟ ಯೋಜನೆಯು ಇಲ್ಲದೆ, ಹೇಗೋಏನೋ ಅಂತೂ ಸುಖಾಂತ ಕಂಡ ಕಾರ್ಯಾಚರಣೆ ಇದು ಎಂಬುದನ್ನಂತೂ ಒತ್ತಿ ಹೇಳಲೇಬೇಕು. ಈ ಕಾರ್ಯಾಚರಣೆಯಲ್ಲಿ ಎರಡು ಹೆವಿ ಆಗರ್ ಯಂತ್ರಗಳು, ಎರಡು ಡಜನ್ ಅರ್ತ್ ಮೂವರ್‌ಗಳು ಮತ್ತು ಇತರ ಹೆವಿ ಡ್ರಿಲ್ ಯಂತ್ರಗಳು, ಅನೇಕ ನವರತ್ನ ಕಂಪನಿಗಳು, ಭಾರತೀಯ ರೈಲ್ವೆ, ದೇಶದ ಪ್ರತಿಯೊಂದು ಏಜೆನ್ಸಿಯಿಂದ 600ಕ್ಕೂ ಹೆಚ್ಚು ರಕ್ಷಣಾ ಕಾರ್ಯಕರ್ತರು, ಅನೇಕ ಖಾಸಗಿ ಕಂಪನಿಗಳು, ಪ್ರಪಂಚದೆಲ್ಲೆಡೆಯಿಂದ ಬಂದ 50ಕ್ಕೂ ಹೆಚ್ಚು ವಿಶೇಷಜ್ಞರು, ಎರಡು ಪ್ಲಾಸ್ಮಾ ಕಟ್ಟರ್‌ಗಳು ಮತ್ತು ಒಂದು ಡಜನ್ ಗ್ಯಾಸ್ ಕಟ್ಟರ್‌ಗಳಿಗೆ 49 ಮೀ.ಗಳಷ್ಟು ಉದ್ದ ಬೆಟ್ಟವನ್ನು ಕೊರೆಯಲು 360 ಗಂಟೆಗಳಿಗೂ ಹೆಚ್ಚು ಸಮಯ ಬೇಕಾಯಿತು. 16 ದಿನಗಳ ಕಾರ್ಯಚರಣೆಯು ಭರವಸೆ ಮತ್ತು ಹತಾಶೆಗಳ ನಡುವೆ ತೂಗುಯ್ಯಾಲೆಯಾಡುತ್ತಿತ್ತು. ಅಂತಿಮವಾಗಿ, ಸಾಂಪ್ರದಾಯಿಕ ಇಲಿ–ರಂಧ್ರ ಕೊರೆಯುವ ಗಣಿಗಾರರ ಮುಂದೆ ಶರಣಾದಾಗ, ಅವರು ತಮ್ಮ ಬರಿ ಕೈಗಳು, ಸನಿಕೆ, ಗುದ್ದಲಿ, ಸುತ್ತಿಗೆ, ಬುಟ್ಟಿ, ಬ್ಲೋವರ್, ಮತ್ತು ಸಕ್ಕರ್ ಯಂತ್ರಗಳು ಮತ್ತು ಹ್ಯಾಂಡ್‌ಹೆಲ್ಡ್ ಡ್ರಿಲ್ ಯಂತ್ರಗಳಂತಹ ಮೂಲ ಸಾಧನಗಳೊಂದಿಗೆ ಕಲ್ಲುಗಳು ಮತ್ತು ಉಕ್ಕಿನ ತುಣುಕುಗಳನ್ನು ಒಳಗೊಂಡಂತೆ ಸುರಂಗದ ಅವಶೇಷಗಳನ್ನು ತೆಗೆದುಹಾಕಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಸಿಕ್ಕಿಬಿದ್ದಿದ್ದ ಕಾರ್ಮಿಕರನ್ನು ರಕ್ಷಿಸಿದರು. ಇಷ್ಟಾದರೂ ಸಹ, ಯಥಾಪ್ರಕಾರ, ಈ ಕಾರ್ಯಾಚರಣೆಯ ಯಶಸ್ಸಿನ ಶ್ರೇಯಸ್ಸನ್ನು ಪ್ರಚಾರ ಮಾಡಿಕೊಂಡು ತನಗೆ ಮತ್ತು ತನ್ನ ಪ್ರಧಾನ ಮಂತ್ರಿಗೆ ಅರ್ಪಿಸಿಕೊಳ್ಳಲು ಆಡಳಿತಾರೂಢ ಬಿಜೆಪಿ ಒಂದು ನಿಮಿಷವೂ ತಡಮಾಡಲಿಲ್ಲ.

### ಬೇಕಾಬಿಟ್ಟಿ ಅರಣ್ಯನಾಶ ಮತ್ತು ಗುಡ್ಡಗಳ ಅಗೆತವೇ ಅನಾಹುತಗಳ ಮೂಲ

2023ರ ಆರಂಭದಲ್ಲಿ ಜೋಶಿಮಠದಲ್ಲಿ ನಡೆದ ಭೂಕುಸಿತವು ಜನರ ಅಪಾರ ಆಸ್ತಿಪಾಸ್ತಿಯ ನಾಶಕ್ಕೆ ಕಾರಣವಾಯಿತು. ಕೇದಾರನಾಥ, ಲಡಾಖ್ ಮತ್ತು ಸಿಕ್ಕಿಂನಲ್ಲಿನ ಹಠಾತ್ ಪ್ರವಾಹಗಳು ಮತ್ತು ಹಿಮಾಲಯದಾದ್ಯಂತ ಉಂಟಾದ ಭೂಕುಸಿತಗಳೆಲ್ಲ ಅತಿರೇಕ ಮತ್ತು ವಿವೇಚನೆಯಿಲ್ಲದ ನಿರ್ಮಾಣ ಕಾರ್ಯಗಳ ಫಲಶೃತಿಯಾಗಿವೆ. 2021 ರಲ್ಲಿ ಉಂಟಾದ ಹಿಮಕುಸಿತ ಮತ್ತು ಪ್ರವಾಹಕ್ಕೆ 13.2 ಮೆಗಾವ್ಯಾಟ್ ಸಾಮರ್ಥ್ಯದ ಋಷಿಗಂಗಾ ಜಲವಿದ್ಯುತ್ ಯೋಜನೆಯು ಕೊಚ್ಚಿಹೋಗಿ ಸುಮಾರು 200 ಕಾರ್ಮಿಕರ ಸಾವಿಗೆ ಕಾರಣವಾಯಿತು. ಇತ್ತೀಚಿನ ಸಿಲ್ಕ್ಯಾರಾ ಸುರಂಗ ದುರಂತ ಸೇರಿದಂತೆ ಈ ಎಲ್ಲಾ ಅನಾಹುತಗಳ ಹಿಂದಿನ ನಿಜವಾದ ಕಾರಣವೆಂದರೆ ಮೇಲೆ ತಿಳಿಸಿದ ಗುಡ್ಡಗಾಡು ರಾಜ್ಯಗಳಲ್ಲಿ ನೂರಾರು ವಿದ್ಯುತ್ ಯೋಜನೆಗಳು, ಅಣೆಕಟ್ಟುಗಳು, ಕಟ್ಟಡಗಳು ಮತ್ತು ರಸ್ತೆಗಳ ಅಗಲೀಕರಣವನ್ನು ಒಳಗೊಂಡಿರುವ ಕ್ಷಿಪ್ರಗತಿಯ ವೇಗದ 'ಅಭಿವೃದ್ಧಿ'ಯಾಗಿದೆ. ವಿಶಿಷ್ಟವಾದ ಭೌಗೋಳಿಕ ಕಾರಣದಿಂದಾಗಿ, ಈ ಮೂರು ರಾಜ್ಯಗಳು ಯಾವಾಗಲೂ ಕ್ಷಿಪ್ರ ಪ್ರವಾಹಗಳು, ಮೇಘಸ್ಫೋಟ, ಹಿಮಕುಸಿತಗಳು, ಭೂಕುಸಿತಗಳು, ಮಣ್ಣಿನ ಹರಿವುಗಳು ಮತ್ತು ಭೂಕಂಪಗಳಂತಹ ವಿಪತ್ತಿನ ಘಟನೆಗಳ ಆಗರವಾಗಿವೆ. ಯಾವುದೇ ಪರಿಸರ ಕಾಳಜಿಯಿಲ್ಲದೆ ನದಿದಂಡೆ ಮತ್ತು ಗುಡ್ಡದ ಪ್ರಸ್ಥಭೂಮಿಗಳಲ್ಲಿ ಇಂತಹ ಅಜಾಗರೂಕತೆಯ ನಿರ್ಮಾಣಗಳನ್ನು ಮಾಡುವ ಮೂಲಕ ಅನಾಹುತಕ್ಕೆ ಎಡೆ ಮಾಡಿಕೊಡಲಾಗುತ್ತಿದೆ ಎಂದು ಅನೇಕ ವರ್ಷಗಳಿಂದ ಪರಿಸರವಾದಿಗಳು ಆಕ್ಷೇಪವೆತ್ತುತ್ತಲೇ ಇದ್ದಾರೆ. ಆದರೆ ಈ ಆಕ್ಷೇಪಗಳಿಗೆ ಸರಕಾರಗಳು ಕಿವುಡಾಗಿವೆ. ಪರಿಣಾಮವಾಗಿ ಸುರಂಗಗಳ ನಿರ್ಮಾಣ, ಬಂಡೆಗಳನ್ನು ಕೆಡವುವುದು ಮತ್ತು ದೊಡ್ಡ ಪ್ರಮಾಣದ ಅರಣ್ಯನಾಶವು ಈ ದುರ್ಬಲವಾದ ಭೂಕಂಪ–ಪೀಡಿತ ಪ್ರದೇಶಕ್ಕೆ ಹಾನಿಯನ್ನುಂಟುಮಾಡುತ್ತಿವೆ. ಆದರೆ ಕೇಂದ್ರ ಮತ್ತು ರಾಜ್ಯದಲ್ಲಿನ ಬೂರ್ಜ್ವಾ ಸರ್ಕಾರಗಳು, ದೊಡ್ಡ ಗುತ್ತಿಗೆದಾರರು ಮತ್ತು ಖಾಸಗಿ ಬಂಡವಾಳಗಾರರು ಅಂತಹ ಎಚ್ಚರಿಕೆಗಳನ್ನು ನಿರ್ಲಕ್ಷಿಸಿ, ನಿರ್ಮಾಣದ ವೈಜ್ಞಾನಿಕ ತತ್ವಗಳನ್ನು ಉಲ್ಲಂಘಿಸಿ ಲಕ್ಷಾಂತರ ಗುಡ್ಡಗಾಡು ನಾಗರಿಕರ ಆಸ್ತಿ ಮತ್ತು ಜೀವನದೊಂದಿಗೆ ಚೆಲ್ಲಾಟವಾಡುತ್ತಿವೆ.

### ಸಿಲ್ಕ್ಯಾರಾ ಯೋಜನೆಯ ಬಗ್ಗೆ ಕೆಲವು ಮಾತುಗಳು

ಈಗಾಗಲೇ ಹೇಳಿದಂತೆ, ಸಿಲ್ಕ್ಯಾರಾವು 'ಚಾರ್ ಧಾಮ್' (ಕೇದಾರನಾಥ್, ಬದರಿನಾಥ್, ಗಂಗೋತ್ರಿ ಮತ್ತು ಯಮುನೋತ್ರಿ) ಧಾರ್ಮಿಕ ಪ್ರವಾಸೋದ್ಯಮ ಯೋಜನೆಯ ಭಾಗವಾಗಿದ್ದು ಇದು ಉತ್ತರಾಖಂಡದ 900 ಕಿಲೋಮೀಟರ್ ರಸ್ತೆಯನ್ನು 12 ಮೀಟರ್‌ಗಳಷ್ಟು ವಿಸ್ತರಿಸುವ ಗುರಿಯನ್ನು ಹೊಂದಿದೆ. ಪರಿಸರ ಪ್ರಭಾವ ಮೌಲ್ಯಮಾಪನ ಅಧಿಸೂಚನೆ–2006ರ ನಿಬಂಧನೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹೀಗೆ ಮಾಡಲಾಗಿದೆ ಎಂದು ಹೇಳಲಾಗುತ್ತದೆ. ವಾಸ್ತವವಾಗಿ, ಈ ಯೋಜನೆಯು ಡಿಸೆಂಬರ್ 2016ರಲ್ಲಿ ಪ್ರಾರಂಭವಾದಾಗಿನಿಂದ, ವ್ಯಾಪಕವಾದ ಗುಡ್ಡ ಕೊರೆಯುವಿಕೆ ಮತ್ತು ನಿರ್ಮಾಣ ಚಟುವಟಿಕೆಗಳ ಸಂಭಾವ್ಯ ಪ್ರತಿಕೂಲ ಪರಿಣಾಮಗಳ ಬಗ್ಗೆ ಪರಿಸರವಾದಿಗಳು ಕಳವಳ ವ್ಯಕ್ತಪಡಿಸಿದ್ದರಿಂದ, ಯೋಜನೆಯು ವಿವಾದದಿಂದ ಸ್ಥಗಿತಗೊಂಡಿದೆ. ಪರಿಸರದ ದುರ್ಬಲ ಹಿಮಾಲಯ ಪ್ರದೇಶದಲ್ಲಿ ಕುಸಿತ, ಭೂಕುಸಿತಗಳು ಮತ್ತು ಗಮನಾರ್ಹ ಪರಿಸರ ಹಾನಿಯ ಬಗ್ಗೆ ಆತಂಕಗಳು ಇದ್ದವು. 2018ರಲ್ಲಿ, ಹಿಮಾಲಯ ಪರಿಸರದ ಮೇಲೆ ಅದರ ಅಪಾಯಕಾರಿ ಪರಿಣಾಮಗಳಿಂದಾಗಿ ಯೋಜನೆಯು ಪರಿಶೀಲನೆಯನ್ನು ಎದುರಿಸಿತು. ಪರಿಸರ ತಜ್ಞರು ಮತ್ತು ಪರಿಸರವಾದಿಗಳು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಪ್ರವಾಹ ಮತ್ತು ಭೂಕುಸಿತದಂತಹ ಸಂಭಾವ್ಯ ಪರಿಸರ ವಿಪತ್ತುಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಆದರೆ ಬಿಜೆಪಿ ಸರ್ಕಾರವು ಅಂತಹ ಎಲ್ಲಾ ಎಚ್ಚರಿಕೆಗಳಿಗೆ ಗಮನ ಕೊಡಲಿಲ್ಲ, ಏಕೆಂದರೆ ಅದು ಇತರ ವಿಷಯಗಳ ಜೊತೆಗೆ, 'ಚಾರ್ಧಾಮ್' ಯಾತ್ರೆಯನ್ನು ಜಾರಿಗೊಳಿಸುವ ಮಾಡುವ ಮೂಲಕ ಹಿಂದುತ್ವದ ಪ್ರಚಾರವನ್ನು ತೀವ್ರಗೊಳಿಸಲು ಯತ್ನಿಸುತ್ತಿದೆ.

ನಿರ್ಮಾಣ ಹಂತದಲ್ಲಿರುವ ಸಿಲ್ಕ್ಯಾರಾ ಸುರಂಗವು ಸಿಲ್ಕ್ಯಾರಾ ಮತ್ತು ದಂಡಲ್ಗಾಂವ್ ನಡುವೆ 4.5 ಕಿಲೋಮೀಟರ್ ವ್ಯಾಪಿಸಿದೆ. ಇದು ರಾಷ್ಟ್ರೀಯ ಹೆದ್ದಾರಿಯ ಬ್ರಹ್ಮಖಾಲ್–ಯಮುನೋತ್ರಿ ವಿಭಾಗದ ಪ್ರಮುಖ ಭಾಗವನ್ನು ಹೊಂದಿದೆ. ಮೇಲೆ ತಿಳಿಸಿದಂತೆ, ಅದು ಜನರ ಜೀವಕ್ಕೆ ಅಪಾಯವನ್ನುಂಟುಮಾಡುವ ವಿಪತ್ತುಗಳ ಸರಣಿಯನ್ನು ಉಂಟುಮಾಡಿದರೂ ಯೋಜನೆಯು ಪರಿಸರ ಪ್ರಭಾವ ಮೌಲ್ಯಮಾಪನ ಪ್ರಕ್ರಿಯೆಯನ್ನು ನಿರ್ಲಕ್ಷಿಸಿ ಪರಿಸರ ಮಾನದಂಡಗಳನ್ನು ಸರಿಯಾಗಿ ಅನುಸರಿಸಲಿಲ್ಲ. ಸಿಲ್ಕ್ಯಾರಾ ಸುರಂಗ ಕುಸಿತದ ಸಂದರ್ಭದಲ್ಲಿ, ಅಗೆಯುವ ಪ್ರಕ್ರಿಯೆಯಲ್ಲಿ, ದುರ್ಬಲವಾದ ಬಂಡೆಗಳ ರಚನೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ಈ ಯೋಜನೆಯ ಎಂಜಿನಿಯರಿಂಗ್ ಅವ್ಯವಸ್ಥೆಯ ಕೈಗನ್ನಡಿ.

### ಅಗತ್ಯ ರಕ್ಷಣೋಪಾಯ ಕ್ರಮಗಳಲ್ಲಿ ರಾಜಿ

ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್ (ಎಸ್‌ಒಪಿ) ಪ್ರಕಾರ, ವಿಪತ್ತಿನ ಸಂದರ್ಭದಲ್ಲಿ ಪಾರಾಗಲು ಅಗತ್ಯವಾದ ನಿರ್ಗಮನ ಮಾರ್ಗವನ್ನು ರಚಿಸಲಾಗಿರಲಿಲ್ಲ. 3 ಕಿಲೋಮೀಟರ್‌ಗಳಷ್ಟು ಉದ್ದವನ್ನು ಮೀರಿದ ಸುರಂಗಗಳಲ್ಲಿ ಅಪಾಯಕಾರಿ ಸಂದರ್ಭಗಳಲ್ಲಿ ವ್ಯಕ್ತಿಗಳನ್ನು ರಕ್ಷಿಸಲು ತಪ್ಪಿಸಿಕೊಳ್ಳುವ ಮಾರ್ಗವನ್ನು ಸಂಯೋಜಿಸುವ ಅಗತ್ಯವಿದೆ. 4.5 ಕಿಮೀ ಉದ್ದದ ಸಿಲ್ಕ್ಯಾರಾ ಸುರಂಗಕ್ಕೆ ತಪ್ಪಿಸಿಕೊಳ್ಳುವ ಮಾರ್ಗವನ್ನು ನಿಜವಾಗಿಯೂ ಯೋಜಿಸಲಾಗಿತ್ತು ಎಂದು ಆನ್–ಸೈಟ್ ಅವಲೋಕನಗಳು ಬಹಿರಂಗಪಡಿಸಿವೆ. ಆದರೆ ಅದು ಜಾರಿಯಾಗಲೇ ಇಲ್ಲ. ಎರಡನೆಯದಾಗಿ, ಕಂದಕದ ಅಸುರಕ್ಷಿತ ಭಾಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವುದೇ ಕಂದಕ ಪಂಜರಗಳನ್ನು ಅಥವಾ ಸುರಕ್ಷಿತ ಟ್ಯೂಬ್ಗಳನ್ನು ಒದಗಿಸಿರಲಿಲ್ಲ. ಸಂಭಾವ್ಯ ಕೇವ್–ಇನ್‌ಗಳಿಂದ ಕಾರ್ಮಿಕರನ್ನು ರಕ್ಷಿಸುವಲ್ಲಿ ಕಂದಕ ಪಂಜರಗಳು ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತವೆ; ಆದಾಗ್ಯೂ, ಕಂದಕ ಗೋಡೆಗಳಿಗೆ ತಮ್ಮದೇ ಆದ ಬೆಂಬಲವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿರಲಿಲ್ಲ. ಮೂರನೆಯದಾಗಿ, ಸುರಂಗ ಮಾರ್ಗಸೂಚಿಗಳು ಸಾಗಾಣಿಕೆ ವೈಫಲ್ಯದ ಸಂದರ್ಭದಲ್ಲಿ ಕ್ಷಿಪ್ರವಾಗಿ ಸ್ಥಳಾಂತರಿಸಲು ಬೇಕಾದ ಕ್ರಮಗಳ ಕೈದೀವಿಗೆಗಳಾಗುತ್ತವೆ. ಆದಾಗ್ಯೂ, ಮೇಲೆ ರೈಲು ಹಳಿಗಳ ಉಪಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮೆಟ್ಟಿಲುಗಳೊಂದಿಗೆ ಎಸ್ಕೇಪ್ ಮೈಕ್ರೋ ಟನಲ್‌ಗಳನ್ನು ನಿರ್ಮಿಸುವುದು ಮಾತ್ರ ರೈಲ್ವೆ ಇಲಾಖೆಗೆ ಕಡ್ಡಾಯವಾಗಿದೆ ಎಂದು ಸಂಬಂಧಿಸಿದ ಅಧಿಕಾರಿಗಳು ಹೇಳುತ್ತಾರೆ. ಅಂತಿಮವಾಗಿ, ಹಿಂದಿನ ಅಪಘಾತಗಳ ನಂತರ ಹಾಕಲಾದ ಹ್ಯೂಮ್ ಪೈಪ್‌ಗಳನ್ನು ಸಹ ಸುರಂಗದ ಕೆಲಸ ಪೂರ್ಣಗೊಳ್ಳುವ ಮೊದಲೇ ತೆಗೆದುಹಾಕಲಾಗಿದೆ. ಸುರಂಗದ ಕುಸಿತದ ಸಂದರ್ಭದಲ್ಲಿ ರಕ್ಷಿಸಲು ಉದ್ದೇಶಿಸಲಾದ ಈ ಪೈಪ್‌ಗಳನ್ನು ಕೆಲಸ ಪೂರ್ಣವಾಗುವ ಮೊದಲೇ ತೆಗೆದುಹಾಕಲಾಯಿತು, ನಿರ್ಮಾಣ ಸಂಸ್ಥೆಯ ಕಡೆಯಿಂದ ಆದ ನಿರ್ಲಕ್ಷವಿದು ಮೇಲ್ವಿಚಾರಣಾ ಸರ್ಕಾರಿ ಅಧಿಕಾರಿಗಳು ಒಪ್ಪಿಕೊಳ್ಳುತ್ತಾರೆ ಅಂತಹ ಕೊಳವೆಗಳು ಸುರಂಗಗಳ ನಿರ್ಮಾಣದ ಸಮಯದಲ್ಲಿ ಉತ್ಪತ್ತಿಯಾಗುವ ವಿಷಕಾರಿ ಅನಿಲಗಳನ್ನು ತೆಗೆದುಹಾಕುವ ಕೆಲಸ ಮಾಡುತ್ತವೆ.

ನಿರ್ಮಾಣ ಮತ್ತು ಉರುಳಿಸುವಿಕೆಯ ಅವಶೇಷಗಳ ಜೊತೆಗೆ ಈ ಯೋಜನೆಯ ಮೂಲಕ ಇಪ್ಪತ್ತು ಮಿಲಿಯನ್ ಟನ್ ಅಗೆದ ಮಣ್ಣನ್ನು ಸ್ಥಳಾಂತರಿಸಲಾಯಿತು. ಗಂಗಾ ಯಮುನಾ ಮತ್ತು ಅವುಗಳ ಉಪನದಿಗಳ ಪಾತ್ರದಲ್ಲಿ ಈ ಹೆಚ್ಚಿನ ಕೆಸರನ್ನು ಸುರಿಯುವುದರೊಂದಿಗೆ, ನದಿಗಳು ವಿವಿಧ ಸ್ಥಳಗಳಲ್ಲಿ ಮಾರ್ಗವನ್ನು ಬದಲಾಯಿಸಲು ಪ್ರಾರಂಭಿಸಿವೆ. ನದಿಗಳ ಹರಿವುಗಳಲ್ಲಿ ಸೃಷ್ಟಿಯಾದ ಈ ಅಸ್ವಾಭಾವಿಕ ತಡೆಗಳಿಂದ ಭವಿಷ್ಯದಲ್ಲಿ ಧಾರಾಕಾರ ಮಳೆ, 2013ರಲ್ಲಿ ಸಂಭವಿಸಿದ್ದಕ್ಕಿಂತ ದೊಡ್ಡ ಅನಾಹುತವನ್ನು ಸೃಷ್ಟಿಸಬಹುದು ಎಂದು ಶಂಕಿಸಲಾಗಿದೆ. ಹೀಗಾಗಿ 'ಚಾರ್ಧಾಮ್' ಯೋಜನೆಯು ನದಿಗಳು ಮತ್ತು ಪರಿಸರ ವ್ಯವಸ್ಥೆಗಳ ಕಾಡುಗಳು, ಜೀವನ ಮತ್ತು ಅವುಗಳ ಸುತ್ತಲಿನ ಪ್ರಭೇದಗಳ ಮೂಲಭೂತ ತಿಳುವಳಿಕೆಯನ್ನು ಹೊಂದಿಲ್ಲ ಎಂದು ಸ್ಪಷ್ಟವಾಗುತ್ತದೆ.

ಇದಲ್ಲದೆ, ಪ್ರಧಾನಿ ಮೋದಿಯವರ ಪ್ರೀತಿಪಾತ್ರ ಯೋಜನೆಗೆ ಸಮಾನಾಂತರವಾಗಿ ಇನ್ನೊಂದು ಯೋಜನೆಯನ್ನು ರೂಪಿಸಲಾಗಿದೆ. ಅದೇ 372ಕಿಮೀ ಉದ್ದದ 'ಚಾರ್ಧಾಮ್' ರೈಲ್ವೆ ಯೋಜನೆ. 75,000 ಕೋಟಿ ವೆಚ್ಚದ ಅಂದಾಜಿನ ಈ ಯೋಜನೆಯು ಸದರಿ ಪ್ರದೇಶದ ಪರಿಸರ ವ್ಯವಸ್ಥೆಯನ್ನು ಕಡೆಗಣಿಸಿ ಡಜನ್‌ಗಟ್ಟಲೆ ಸುರಂಗಗಳ ನಿರ್ಮಾಣವನ್ನು ಒಳಗೊಂಡಿದೆ. ಪರ್ವತಗಳನ್ನು ಲೂಟಿ ಮಾಡಿದ ಜಲವಿದ್ಯುತ್ ಸ್ಥಾವರಗಳೊಂದಿಗೆ ಸುರಂಗಗಳ ನಿರಂತರ ಅಗೆಯುವಿಕೆಯು ಜೋಶಿಮಠದ ಮುಳುಗುವಿಕೆಗೆ ಕಾರಣ ಎಂದು ಹಲವಾರು ತಜ್ಞರು ಹೇಳುತ್ತಾರೆ.

### ಕಳಂಕಿತ ಕಂಪನಿಗೆ ಕೆಲಸದ ಜವಾಬ್ದಾರಿ

ಅತ್ಯಂತ ಗಮನಾರ್ಹವಾದ ವಿಷಯವೆಂದರೆ ಕರಾಳ ಹಿನ್ನೆಲೆಯನ್ನು ಹೊಂದಿರುವ ಹೈದರಾಬಾದ್ ಮೂಲದ ನವಯುಗ ಇಂಜಿನಿಯರಿಂಗ್ ಕಂಪನಿಗೆ ಯೋಜನೆಯ ಗುತ್ತಿಗೆಯನ್ನು ನೀಡಲಾಗಿದೆ. ಈ ಕಂಪನಿಯನ್ನು ಕೇವಲ ಮೂರು ತಿಂಗಳ ಹಿಂದೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ನಾಗ್‌ಪುರ–ಮುಂಬೈ ಸಮೃದ್ಧಿ ಎಕ್ಸ್‌ಪ್ರೆಸ್‌ವೇಯಲ್ಲಿ ಗ್ಯಾಂಟ್ರಿ ಕ್ರೇನ್‌ನ ಮೂಲಕ ಎಕ್ಸ್‌ಪ್ರೆಸ್‌ವೇಯ ಭಾಗವಾಗಿದ್ದ ವಯಡಕ್ಟ್ ಅನ್ನು ನಿರ್ಮಿಸಲು ಬಳಸಿದಾಗ 20 ಕಾರ್ಮಿಕರು ಮತ್ತು ಎಂಜಿನಿಯರ್‌ಗಳು ಪ್ರಾಣ ಕಳೆದುಕೊಂಡ ಘಟನೆ ಸಂಭವಿಸಿದೆ. ಈ ಅಪಘಾತಕ್ಕಾಗಿ ಕಂಪನಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈಗ ಅದೇ ಕಂಪನಿಯು ವಹಿಸಿಕೊಂಡ ಯೋಜನೆಯ ಭಾಗವಾಗಿ ಸಿಲ್ಕ್ಯಾರಾ ಸುರಂಗ ಬಿಕ್ಕಟ್ಟು ಸಂಭವಿಸಿದೆ. 2018 ರಲ್ಲಿ, ನವದೆಹಲಿಯ ಆದಾಯ ತೆರಿಗೆ ಅಧಿಕಾರಿಗಳು ಈ ನವಯುಗ ಸಂಸ್ಥೆಯ ಅನೇಕ ಕಚೇರಿಗಳ ಮೇಲೆ ದಾಳಿ ಮಾಡಿ, ಸಂಸ್ಥೆಯು ಆದಾಯ ತೆರಿಗೆ ನಿಯಮಗಳನ್ನು ಉಲ್ಲಂಘಿಸಿದೆ ಮತ್ತು ಮನಿ ಲಾಂಡರಿಂಗ್ ಮಾಡಿದೆ ಎಂದು ಆರೋಪಿಸಿದರು. ಆದರೂ, 2020ರ ಮಧ್ಯದಲ್ಲಿ, ನವಯುಗಕ್ಕೆ ಸರ್ಕಾರದ ಮಹತ್ವಾಕಾಂಕ್ಷೆಯ ಋಷಿಕೇಶ–ಕರ್ಣಪ್ರಯಾಗ ರೈಲು ಸಂಪರ್ಕ ಯೋಜನೆಯನ್ನು ಗುತ್ತಿಗೆ ನೀಡಲಾಯಿತು.

ಕಳಂಕಿತ ಕಂಪನಿಗೇ 12ನೇ ಪುಟಕ್ಕೆ...

## ಬಿಲ್ಕಿಸ್ ಬಾನೊ ಗುಂಪು ಅತ್ಯಾಚಾರ ಪ್ರಕರಣ:
## ಸರ್ವೋಚ್ಚ ನ್ಯಾಯಾಲಯದ ತೀರ್ಪು – ಎಸ್‌ಯುಸಿಐ(ಸಿ) ಸ್ವಾಗತ

**ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್ ಈ ಕೆಳಕಂಡ ಹೇಳಿಕೆ ನೀಡಿದ್ದಾರೆ.**

2002ರ ಗುಜರಾತ್ ಗಲಭೆಯ ಸಂದರ್ಭದಲ್ಲಿ ಬಿಲ್ಕಿಸ್ ಬಾನೊ ಮೇಲಿನ ಗುಂಪು ಅತ್ಯಾಚಾರ ಮತ್ತು ಅವರ ಏಳು ಮಂದಿ ಕುಟುಂಬಸ್ಥರ ಹತ್ಯೆ ಪ್ರಕರಣದ 11 ಮಂದಿ ಅಪರಾಧಿಗಳನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ತೀರ್ಮಾನವನ್ನು ಸರ್ವೋಚ್ಚ ನ್ಯಾಯಾಲಯವು ರದ್ದುಗೊಳಿಸಿ, ಅಪರಾಧಿಗಳು ಎರಡು ವಾರದೊಳಗೆ ಶರಣಾಗುವಂತೆ ಆದೇಶಿಸಿರುವುದು ಆ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿದಂತಾಗಿದೆ. ಗುಜರಾತ್ ಸರ್ಕಾರವು ಯಾವ ರೀತಿ ಮಹಾರಾಷ್ಟ್ರ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಕೈಹಾಕಿ ಕ್ಷುಲ್ಲಕ ರಾಜಕೀಯ ಕಾರಣಕ್ಕಾಗಿ




ಮಹಿಳೆಯರ ಮೇಲಿನ ಅಪರೂಪದಲ್ಲಿ ಅಪರೂಪದ ದೌರ್ಜನ್ಯ ಪ್ರಕರಣದ ಅಪರಾಧಿಗಳನ್ನು ಕಾನೂನುಬಾಹಿರವಾಗಿ ಬಿಡುಗಡೆ ಮಾಡಿದೆ ಎಂಬುದನ್ನು ಈ ತೀರ್ಪು ಎತ್ತಿ ತೋರಿಸುತ್ತದೆ. ಗುಜರಾತ್ ಬಿಜೆಪಿ ಸರ್ಕಾರದ ಈ ಕ್ರಮವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

## ಎಸ್‌ಯುಸಿಐ(ಸಿ) ಪ್ರತಿಭಟನಾಕಾರರ ಮೇಲೆ
# ಟಿಎಂಸಿ ಸರ್ಕಾರದ ಗೂಂಡಾಗಿರಿ



ಡಿಸೆಂಬರ್, 4, ಕೊಲ್ಕತ್ತಾ: ಶಿಕ್ಷಕರು ಮತ್ತು ಡಿ ವರ್ಗದ ಉದ್ಯೋಗಿಗಳ ನೇಮಕಾತಿಯಲ್ಲಿ ಮತ್ತು ರೇಷನ್ ವಿತರಣೆಯಲ್ಲಿ ಟಿಎಂಸಿ ನೇತೃತ್ವದ ಸರ್ಕಾರದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ, ಬೆಲೆಯೇರಿಕೆ, ರಸಗೊಬ್ಬರದ ಕಾಳಸಂತೆ, ಗಡಿಯಿಂದಾಚೆಗೆ ಕಲ್ಲಿದ್ದಲು ಮತ್ತು ಗೋವುಗಳ ಕಳ್ಳ ಸಾಗಾಣಿಕೆ, ವಿದ್ಯುತ್ ಸರಬರಾಜಿಗೆ ಮನೆಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆ, ಮುಂತಾದವುಗಳ ವಿರುದ್ಧ ಹಾಗೂ ಸರ್ಕಾರಿ ಉದ್ಯೋಗಿಗಳಿಗೆ ಬಹಳ ಕಾಲದಿಂದ ತಡೆಹಿಡಿದ ತುಟ್ಟಿಭತ್ಯೆಗೆ ಆಗ್ರಹಿಸಿ ಎಸ್‌ಯುಸಿಐ(ಸಿ) ನೇತೃತ್ವದಲ್ಲಿ ಕೊಲ್ಕತ್ತಾದ ಜನರು ಪಶ್ಚಿಮ ಬಂಗಾಲದ ವಿಧಾನಸಭೆ ಮುಂದೆ ಪ್ರತಿಭಟನೆ ನಡೆಸಿದರು. ಮಹಿಳೆಯರು ಸೇರಿದಂತೆ ಪ್ರತಿಭಟನಾಕಾರರನ್ನು ಪೊಲೀಸರು ಎಳೆದಾಡಿದ್ದಾರೆ; ಅವರ ಮೇಲೆ ಯದ್ವಾತದ್ವಾ ಲಾಟಿಚಾರ್ಜ್ ಮಾಡಿದ್ದಾರೆ, ಮಹಿಳಾ ಕಾಮ್ರೇಡರ ಬಟ್ಟೆ ಹರಿದಿದ್ದಾರೆ. ಈ ಘಟನೆಯಲ್ಲಿ 34 ಮಂದಿ ಗಾಯಗೊಂಡಿದ್ದು, ಅವರಲ್ಲಿ 6 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. 32 ಮಹಿಳೆಯರು ಸೇರಿದಂತೆ 90 ಜನರನ್ನು ಬಂಧಿಸಲಾಗಿದೆ.

## ಸ್ತ್ರೀ ಭ್ರೂಣ ಹತ್ಯೆ ಖಂಡಿಸಿ ಪ್ರತಿಭಟನೆ




ಡಿಸೆಂಬರ್ 5, ಬಳ್ಳಾರಿ: ರಾಜ್ಯದ ಮಂಡ್ಯ, ಮೈಸೂರು ಮತ್ತು ಬೆಂಗಳೂರಿನ ಕೆಲವು ಭಾಗಗಳಲ್ಲಿ ಸ್ತ್ರೀ ಭ್ರೂಣ ಹತ್ಯೆಯಂತಹ ಸಮಾಜಘಾತುಕ ಕಾರ್ಯದಲ್ಲಿ ಭಾಗಿಯಾದ ಅಪರಾಧಿಗಳಿಗೆ ಕಠಿಣ ಶಿಕ್ಷೆ ಖಾತ್ರಿಪಡಿಸಬೇಕು ಹಾಗೂ ಈ ಜಾಲವನ್ನು ಬೇಧಿಸಿ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ನೀಡಲು ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್)ಯ ನೇತೃತ್ವದಲ್ಲಿ ಬಳ್ಳಾರಿಯ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಶ್ರೀ. ಸಿದ್ದರಾಮಯ್ಯನವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

## ಬಿಸಿಯೂಟ ಕಾರ್ಮಿಕರ ಪ್ರತಿಭಟನೆ

**ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿಯಲ್ಲಿ (ಎಐಯುಟಿಯುಸಿ)ಗೆ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘದ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಸುವಂತೆ ನಡೆದ ರಾಜ್ಯ ಮಟ್ಟದ ಪ್ರತಿಭಟನೆ.**




# ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಅನ್ನು ಏಕೆ ವಿರೋಧಿಸಬೇಕು?

ವಿದ್ಯುತ್ ಬಳಕೆಯನ್ನು ಮಾಪನ ಮಾಡಲು ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಅಳವಡಿಸುವುದರ ಬಗ್ಗೆ ಇಡೀ ದೇಶದಾದ್ಯಂತ ವಿರೋಧ ವ್ಯಕ್ತವಾಗುತ್ತಿದೆ. ಈ ಸ್ಮಾರ್ಟ್ ಮೀಟರ್ ಏಕೆ ಒಪ್ಪಲಾಗದು, ಏಕೆ ಇದನ್ನು ವಿರೋಧಿಸಲಾಗುತ್ತಿದೆ ಎಂಬುದಕ್ಕೆ ಹಲವಾರು ಕಾರಣಗಳಿವೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

**ಪ್ರಮುಖ ಕಾರಣಗಳು ಹೀಗಿವೆ:–**

1. "ಪ್ರಿಪೇಯ್ಡ್ ಸ್ಮಾರ್ಟ್‌ಮೀಟರ್"ನ ಹೆಸರೇ ಸೂಚಿಸುವಂತೆ, ವಿದ್ಯುತ್ ಬಳಕೆಗಾಗಿ ಗ್ರಾಹಕರು ಮುಂಗಡವಾಗಿ ಹಣವನ್ನು ಡೆಪಾಸಿಟ್ ಮಾಡಬೇಕಾಗುತ್ತದೆ. ಮುಂಗಡ ಹಣ ಡೆಪಾಸಿಟ್ ಮಾಡಲು ವಿಫಲವಾದಲ್ಲಿ, ಗ್ರಾಹಕರಿಗೆ ವಿದ್ಯುತ್ ಸರಬರಾಜು ಪಡೆಯಲು ಅವಕಾಶ ಇರುವುದಿಲ್ಲ. ಇದು ಕಳೆದ 75 ವರ್ಷಗಳಿಂದ ಅಸ್ತಿತ್ವದಲ್ಲಿರುವ ಒಪ್ಪಂದ. ಗ್ರಾಹಕರ ಮೂಲಭೂತ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಇದರಿಂದ 'ಮೊದಲು ಬಳಕೆ, ನಂತರ ಪಾವತಿ ಎಂಬ ವಿಧಾನದ ಬದಲಾಗಿ ಮೊದಲು ಪಾವತಿ, ನಂತರ ಬಳಕೆ' ಎಂಬ ವಿಧಾನವನ್ನು ಜಾರಿಗೊಳಿಸಲಾಗುತ್ತದೆ.

2. ವಿದ್ಯುತ್ ಬಳಕೆಯು ಡೆಪಾಸಿಟ್ ಮೊತ್ತವನ್ನು ಮೀರುತ್ತಿದ್ದಂತೆ ಯಾವುದೇ ಸಮಯದಲ್ಲಿ (ಮಧ್ಯರಾತ್ರಿಯಲ್ಲಿಯೂ ಸಹ) ವಿದ್ಯುತ್ ಸರಬರಾಜು ಸ್ವಯಂಚಾಲಿತವಾಗಿ ಕಡಿತವಾಗುತ್ತದೆ.

3. ಈ ವ್ಯವಸ್ಥೆಯಲ್ಲಿ, "ಕಾಂಟ್ರಾಕ್ಟ್ ಲೋಡ್" ಅನ್ನು ಮೀರಿ ವಿದ್ಯುತ್ ಪಡೆಯಲು ಯಾವುದೇ ಅವಕಾಶವಿಲ್ಲ. ಅತಿಕಡಿಮೆ "ಕಾಂಟ್ರಾಕ್ಟ್ ಲೋಡ್" ಹೊಂದಿರುವ ಗ್ರಾಹಕರು "ಕಾಂಟ್ರಾಕ್ಟ್ ಲೋಡ್" ಗಿಂತ ಹೆಚ್ಚುವರಿ ವಿದ್ಯುತ್ ಬಳಸಿದರೆ ಅವರು ಅಪಾಯಕ್ಕೆ ಸಿಲುಕುವುದು ನಿಶ್ಚಿತ. ಹೆಚ್ಚುವರಿ "ಕಾಂಟ್ರಾಕ್ಟ್ ಲೋಡ್" ಅನ್ನು ಹೊಂದಾಣಿಕೆ ಮಾಡುವವತನಕ, ವಿದ್ಯುತ್ ಸರಬರಾಜು ಆಗಾಗ್ಗೆ ಕಡಿತಗೊಳ್ಳುವ ಸಾಧ್ಯತೆ ಇರುತ್ತದೆ.

4. ಇದು ಸಬ್ಸಿಡಿ ರದ್ದಾಗಲು ದಾರಿಮಾಡಿಕೊಡುತ್ತದೆ. ಕೃಷಿ ಉದ್ದೇಶಕ್ಕಾಗಿ ರೈತರಿಗೆ ಪ್ರತ್ಯೇಕ ಲೈನ್ ಒದಗಿಸಿ, ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಬ್ಯಾಂಕ್‌ನಲ್ಲಿ ಸಬ್ಸಿಡಿ ನೀಡಲಾಗುತ್ತದೆ. ಅದಾಗಿ ಸ್ವಲ್ಪವೇ ಸಮಯದಲ್ಲಿ ರೈತರಿಗೆ ನೀಡುವ ಈ ಸಬ್ಸಿಡಿಯನ್ನು ನಿಲ್ಲಿಸುತ್ತಾರೆ ಎಂದು ಬೇರೆ ಹೇಳಬೇಕಾಗಿಲ್ಲ, ಏಕೆಂದರೆ ಎಲ್‌ಪಿಜಿಗೆ ನೀಡುತ್ತಿದ್ದ ಡಿಬಿಟಿಯ ಗತಿ ಏನಾಯಿತೆಂದು ನಾವು ಈಗಾಗಲೇ ನೋಡಿದ್ದೇವೆ. ಪ್ರಸ್ತುತ ನಮ್ಮ ದೇಶದ ಶೇ.75 ರಷ್ಟು ವ್ಯವಸಾಯವು ವಿದ್ಯುತ್ ಮೂಲಕ ನಡೆಯುತ್ತಿದೆ. ಇದರ ಪರಿಣಾಮವಾಗಿ, ಕೃಷಿ ಉತ್ಪನ್ನಗಳ ಬೆಲೆ ಮಿತಿಮೀರಿ ಹೆಚ್ಚಾಗಿ, ಸಾಮಾನ್ಯ ಗ್ರಾಹಕರು ಮತ್ತು ರೈತರಿಗೆ ಅಪಾರ ತೊಂದರೆ ಉಂಟಾಗುತ್ತದೆ.

5. ಪ್ರಿಪೇಯ್ಡ್ ಸ್ಮಾರ್ಟ್‌ಮೀಟರ್ ಅಳವಡಿಸಿದ ನಂತರ, TOD (ಟೈಮ್ ಆಫ್ ಡೇ) ಸುಂಕ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ. ಸಂಪೂರ್ಣ ಖಾಸಗೀಕರಣದತ್ತ ಸಾಗಲು ಡೈನಾಮಿಕ್ ದರ ನಿಗದಿ ಹೆಸರಿನಲ್ಲಿ ವಿದ್ಯುತ್ ದರವನ್ನು ಮಾರುಕಟ್ಟೆಯ ಬೇಡಿಕೆಯೊಂದಿಗೆ ತಳುಕು ಹಾಕಲಾಗುತ್ತದೆ, ಪೀಕ್ ಅವಧಿಯಲ್ಲಿ (ಸಂಜೆ 5 ರಿಂದ ರಾತ್ರಿ 11 ರವರೆಗೆ) ಅಂದರೆ ಗರಿಷ್ಠ ಬೇಡಿಕೆಯ ಅವಧಿಯಲ್ಲಿ ವಿದ್ಯುತ್ ದರವು ತುಂಬಾ ಹೆಚ್ಚಾಗಿರುತ್ತದೆ.

6. ಸ್ಮಾರ್ಟ್‌ಮೀಟರ್ ಅನ್ನು ಕೃತಕ ಬುದ್ಧಿಮತ್ತೆ (ಎಐ) ಆಧಾರದ ಮೇಲೆ ತಯಾರಿಸಲಾಗುತ್ತದೆ. ಪ್ರತಿಸ್ಮಾರ್ಟ್ ಮೀಟರ್‌ನ ಬೆಲೆ 8ರಿಂದ 12 ಸಾವಿರ (ಅಂದಾಜು) ಆಗಿದ್ದು ಅದಕ್ಕೆ 7–8 ವರ್ಷಗಳ ವಾರಂಟಿ (ಅಂದಾಜು) ಇರುತ್ತದೆ. ಇನ್ನು ಮೀಟರ್ ಬಾಡಿಗೆ ಹೆಚ್ಚಾಗುತ್ತದೆ. ಈಗ ಇರುವ ಡಿಜಿಟಲ್ ಮೀಟರ್ ಅನ್ನು ಕಿತ್ತೆಸೆಯಲಾಗುತ್ತದೆ. ಇದು ರಾಷ್ಟ್ರೀಯ ಸಂಪತ್ತಿನ ಅಪಾರ ನಷ್ಟಕ್ಕೆ ಕಾರಣವಾಗುತ್ತದೆ.

7. ವಿದ್ಯುತ್ ಉತ್ಪಾದಕ ಕಂಪನಿಗಳಿಂದ ವಿದ್ಯುತ್ ಖರೀದಿಸಿದ ನಂತರ, ಸರ್ಕಾರಿ ಸ್ವಾಮ್ಯದ ಸರಬರಾಜು ಕಂಪನಿಗಳು ಸಾರ್ವಜನಿಕರ ತೆರಿಗೆ ಹಣದಲ್ಲಿ ನಿರ್ಮಿಸಲಾದ ತನ್ನದೇ ನೆಟ್ವರ್ಕ್ ಮೂಲಕ ವಿದ್ಯುತ್ ವಿತರಿಸುತ್ತವೆ ಎಂಬುದು ನಮಗೆಲ್ಲಾ ತಿಳಿದೇ ಇದೆ. ಆದರೆ ಗಮನಾರ್ಹ ವಿಷಯವೆಂದರೆ, ಪ್ರಿಪೇಯ್ಡ್ ಸ್ಮಾರ್ಟ್‌ಮೀಟರ್ ಸ್ಥಾಪಿಸಿದ ನಂತರ, ಗ್ರಾಹಕರಿಂದ ಬಿಲ್ ಸಂಗ್ರಹಿಸುವುದು ಸ್ಮಾರ್ಟ್ ಮೀಟರಿಂಗ್ ಕಂಪನಿಗಳು. ಎಲ್ಲಾ ಪಾವತಿಗಳನ್ನು ಮಾಡಿದ ನಂತರ ಉಳಿದ ಮೊತ್ತವನ್ನು ಸರ್ಕಾರಿ ಮಾಲೀಕತ್ವದ ಸರಬರಾಜು ಕಂಪನಿಗಳಿಗೆ ಹಸ್ತಾಂತರಿಸಲಾಗುತ್ತದೆ. ನಿಸ್ಸಂದೇಹವಾಗಿ, ಇದು ಸರ್ಕಾರಿ ಸ್ವಾಮ್ಯದ ವಿತರಣಾ ಕಂಪನಿಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿ, ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ಕಾರಣವಾಗುತ್ತದೆ.

11ನೇ ಪುಟಕ್ಕೆ....

## ದೆಹಲಿ ರಾಷ್ಟ್ರೀಯ ಮ್ಯೂಸಿಯಂನ್ನು ನೆಲಸಮ

...8ನೇ ಪುಟದಿಂದ

ಕಾಲ್ಪನಿಕ ನದಿ. ಸರಸ್ವತಿ ನದಿಯ ಅಸ್ತಿತ್ವವನ್ನು ಸಾಬೀತು ಪಡಿಸಲು ಸಂಶೋಧನೆಗಾಗಿ ಬಿಜೆಪಿ ಸರ್ಕಾರವು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಹೇಗಾದರೂ ಸರಿಯೇ, ಹರಪ್ಪ ನಾಗರಿಕತೆಯು ವೈದಿಕ ನಾಗರಿಕತೆಯ ಭಾಗ ಎಂದು ತೋರಿಸಲು ಅದು ಬಯಸುತ್ತಿದೆ. ಇಲ್ಲವಾದಲ್ಲಿ, ಆರ್ಯನ್ನರು ಮತ್ತು ರಾಮ ಕೂಡ ಮುಸ್ಲಿಂ ದೊರೆಗಳಂತೆ ಹೊರಗಿನಿಂದ ಬಂದವರು ಎಂದಂತಾಗುತ್ತದೆ.

ಹರಪ್ಪ ಮೊಹೆಂಜೋದಾರೋ ಉತ್ಖನನದ ಸಂದರ್ಭದಲ್ಲಿ ದೊರೆತ ಫಲಕಗಳಲ್ಲಿರುವ ಲಿಪಿಯನ್ನು ಇದುವರೆಗೆ ಭೇದಿಸಲು ಸಾಧ್ಯವಾಗಿಲ್ಲದ ಕಾರಣ ಸಂಘಪರಿವಾರಕ್ಕೆ ನಿಷ್ಠರಾಗಿರುವ ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರು ಉದ್ದೇಶಪೂರ್ವಕ ತಪ್ಪು ವ್ಯಾಖ್ಯಾನ ಮಾಡುತ್ತಿದ್ದಾರೆ. ಈ ಫಲಕಗಳು ಬೆಲೆಕಟ್ಟಲಾಗದಷ್ಟು ಅಮೂಲ್ಯವಾಗಿವೆ. ಸ್ಥಳಾಂತರದ ಸಂದರ್ಭದಲ್ಲಿ ಇವುಗಳು ಕಳೆದು ಹೋದರೆ ಅಥವಾ ಕಳ್ಳತನವಾದರೆ ಚರಿತ್ರೆಯ ಒಂದು ಸುದೀರ್ಘ ಅಧ್ಯಾಯ ಅಳಿಸಿ ಹೋದಂತಾಗುತ್ತದೆ

ಕೇಂದ್ರ ಸರ್ಕಾರವು ಸ್ಥಳಾಂತರ ಕೆಲಸವನ್ನು ಮಾರ್ಚ್ 2024ರೊಳಗೆ ಮುಗಿಸಲು ಬಯಸಿದೆ. ಇಂತಹ ಮ್ಯೂಸಿಯಂ ಅನ್ನು ಸ್ಥಳಾಂತರಿಸುವ ಕೆಲಸ ಎಷ್ಟು ನಾಜೂಕಿನದ್ದು ಎಂದರೆ, ಅದು ಅತೀವ ಕಾಳಜಿಯನ್ನು ಬಯಸುತ್ತದೆ, ಕೆಲವು ವಸ್ತುಗಳನ್ನು ಸ್ಪರ್ಶಿಸಲೂ ಕೂಡದು. ಹಾಗಾಗಿ ಹಿಂದೆ 2000 ಕೃತಿಗಳನ್ನು 115 ಮೀ. ದೂರ ಸ್ಥಳಾಂತರಿಸಲು ಬ್ರಿಟಿಷ್ ಮ್ಯೂಸಿಯಂ ಆಡಳಿತ ಎರಡು ವರ್ಷ ತೆಗೆದುಕೊಂಡಿತ್ತು. ಈಗ ಅತೀವ ಮೌಲ್ಯದ ಈ ಲಕ್ಷಗಟ್ಟಲೆ ಪ್ರಾಚೀನ ಕೃತಿಗಳ ಗತಿಯೇನು ಎಂಬುದು ಇತಿಹಾಸಕಾರರ ಚಿಂತೆಯಾಗಿದೆ.

ಇನ್ನೊಂದೆಡೆ, ಬಿಜೆಪಿ ಸರ್ಕಾರವು ಈ ಮ್ಯೂಸಿಯಮ್ಮಿನ ಭವಿಷ್ಯದ ಬಗ್ಗೆ ಮೌನವಾಗಿದೆ. ಸ್ಥಳಾಂತರದ ಅವಧಿಯಲ್ಲಿ ಈ ಕೃತಿಗಳನ್ನು ಎಲ್ಲಿ ಇಡಲಾಗುವುದು, ಸಂಶೋಧಕರಿಗೆ ಅವು ಲಭ್ಯವಾಗಲಿದೆಯೇ ಇದ್ಯಾವುದೂ ಸ್ಪಷ್ಟವಾಗಿಲ್ಲ. ಆರ್ ಎಸ್ ಎಸ್ – ಬಿಜೆಪಿಯ 'ಯುಗೇ ಯುಗೀನ್ ಭಾರತ'ವು ಕೇವಲ ಕೇಸರಿ ಬ್ರಿಗೇಡಿಗೆ ಬೇಕಾದ ಚರಿತ್ರೆಯನ್ನು ತೋರಿಸಬಹುದು.

ಎನ್ಇಪಿ 2020ರ ಜಾರಿಯಲ್ಲಿ ಕೇಂದ್ರ ಬಿಜೆಪಿ ಸರ್ಕಾರವು ಕೇಸರಿ ಸಿದ್ಧಾಂತಕ್ಕೆ ಬೇಕಾದಂತೆ ಪಠ್ಯಕ್ರಮವನ್ನು ಬದಲಾವಣೆ ಮಾಡಿರುವುದನ್ನು ನಾವು ಕಂಡಿದ್ದೇವೆ. ಶಾಲಾ ಪಠ್ಯದಿಂದ ಅವರು ಡಾರ್ವಿನ್ ಸಿದ್ಧಾಂತವನ್ನು, ಮೆಂಡಲೀವನ ಪೀರಿಯಾಡಿಕ್ ಟೇಬಲನ್ನು, ಮೊಘಲರ ಚರಿತ್ರೆಯನ್ನು, ಮನುಸ್ಮೃತಿಯ ಜಾರಿಯ ನಂತರದಲ್ಲಿ ಕಠಿಣ ಜಾತಿ ವಿಭಜನೆಯ ವಿವರವನ್ನು ಅಳಿಸಿ ಹಾಕಿದ್ದಾರೆ.

ರಾಷ್ಟ್ರೀಯ ವಸ್ತುಸಂಗ್ರಹಾಲಯದ ಪ್ರಾಚೀನ ಫಲಕಗಳು ಮತ್ತು ಕೃತಿಗಳಿಗೆ ಅಮೂಲ್ಯ ಚಾರಿತ್ರಿಕ ಮಹತ್ವವಿದೆ. ಇವು ಸಿಂಧೂ ಕಣಿವೆಯ ಹರಪ್ಪ ನಾಗರಿಕತೆಯ ಐತಿಹಾಸಿಕ ಸಾಕ್ಷ್ಯಗಳು. ಈ ನಾಗರಿಕತೆ ಸುಮಾರು ಕ್ರಿ.ಪೂ. 3000 ವರ್ಷಗಳಷ್ಟು ಹಳೆಯದಾದ ಮತ್ತು ಪಟ್ಟಣ ಕೇಂದ್ರಿತವಾದ ನಾಗರಿಕತೆ. ಆದರೆ ವೈದಿಕ ನಾಗರಿಕತೆ ಸುಮಾರು ಕ್ರಿ.ಪೂ. 1500–600 ವರ್ಷಗಳ ಹಿಂದಿನದ್ದು ಮತ್ತು ಗ್ರಾಮೀಣ, ಅರಣ್ಯ ಕೇಂದ್ರಿತ ನಾಗರಿಕತೆ. ಮ್ಯೂಸಿಯಂನಲ್ಲಿರುವ ಈ ಫಲಕಗಳು ಕಳೆದು ಹೋದರೆ 2000 ವರ್ಷಗಳ ಚರಿತ್ರೆ ಅಳಿಸಿ ಹೋದಂತೆಯೇ ಸರಿ. ಬಹುಶಃ ಕೋಮುವಾದಿ ಕೇಂದ್ರ ಸರ್ಕಾರಕ್ಕೆ ಇದೇ ಬೇಕಿರಬಹುದು. ಈ ಕಾರಣದಿಂದಲೇ, ರೋಮಿಲಾ ಥಾಪರ್, ಇರ್ಫಾನ್ ಹಬೀಬ್, ರಾಮಚಂದ್ರ ಗುಹಾ ಮೊದಲಾದ 2500ಕ್ಕೂ ಹೆಚ್ಚು ಮುಂಚೂಣಿ ಇತಿಹಾಸಕಾರರು ಮತ್ತು ಬುದ್ಧಿಜೀವಿಗಳು ಸರ್ಕಾರಕ್ಕೆ ಪತ್ರ ಬರೆದು ಇವುಗಳ ಸ್ಥಳಾಂತರದಲ್ಲಿರುವ ಅಪಾಯವನ್ನು ಗಮನಕ್ಕೆ ತಂದಿದ್ದಾರೆ. ನಮ್ಮ ದೇಶವಾಸಿಗಳು ಈ ಪ್ರಾಚೀನ ಕೃತಿಗಳ ಸಂರಕ್ಷಣೆ ಮತ್ತು ಇತಿಹಾಸದ ತಿರುಚುವಿಕೆಯನ್ನು ತಡೆಯಲು ಮುಂದಾಗಬೇಕು. ■

# ಸಂಗೀತ, ಚಿತ್ರಕಲಾ, ದೈಹಿಕ ಶಿಕ್ಷಣ ಹಾಗೂ ರಂಗ ಕಲಾ ಶಿಕ್ಷಕರನ್ನು ನೇಮಕಾತಿ ಮಾಡಿ!

## ಎಐಡಿವೈಓ ವತಿಯಿಂದ ರಾಜ್ಯದಾದ್ಯಂತ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ನೇತೃತ್ವದಲ್ಲಿ ಖಾಲಿ ಇರುವ ಚಿತ್ರಕಲಾ, ದೈಹಿಕ ಶಿಕ್ಷಣ, ಸಂಗೀತ ಮತ್ತು ರಂಗ ಕಲಾ ಶಿಕ್ಷಕರ ಖಾಯಂ ನೇಮಕಾತಿಗೆ ಆಗ್ರಹಿಸಿ ರಾಯಚೂರು, ಮೈಸೂರು, ಧಾರವಾಡ, ಕಲಬುರ್ಗಿ, ಬಳ್ಳಾರಿ, ಧಾರವಾಡ, ದಾವಣಗೆರೆ, ಚಿತ್ರದುರ್ಗ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಕಲಾವಿದರು













ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿಗಳ ಮೂಲಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಗೆ ಮನವಿ ಪತ್ರ ಸಲ್ಲಿಸಿದರು. ■

## ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್

...10ನೇ ಪುಟದಿಂದ

8. ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ನಿಷ್ಕ್ರಿಯಗೊಂಡಾಗ ರೀಚಾರ್ಜ್ ಮೊತ್ತವನ್ನು ಹಿಂತಿರುಗಿಸುವ ಯಾವುದೇ ಗ್ಯಾರಂಟಿ ಇರುವುದಿಲ್ಲ.

9. ಈ ವ್ಯವಸ್ಥೆಯನ್ನು ಜಾರಿಗೊಳಿಸಲು ಒಟ್ಟು ರೂ.3,00,000ಕೋಟಿ (ಮೂರು ಲಕ್ಷ ಕೋಟಿ) ಹಣಬೇಕು. ಇದರಲ್ಲಿ ರೂ.2,00,000 ಕೋಟಿ (ಎರಡು ಲಕ್ಷ ಕೋಟಿ) ಹಣವನ್ನು ರಾಜ್ಯ ಸರ್ಕಾರಗಳು ಮತ್ತು ಗ್ರಾಹಕರು ಪಾವತಿಸಬೇಕು. ಕೇಂದ್ರ ಸರ್ಕಾರದಿಂದ ಸಂದಾಯವಾಗುವ ಹಣ ಕೇವಲ ರೂ.1,00,000 ಕೋಟಿ (ಒಂದು ಲಕ್ಷ ಕೋಟಿ).

10. ಸ್ಮಾರ್ಟ್ ಮೀಟರಿಂಗ್ ವ್ಯವಸ್ಥೆಯನ್ನು ಖಾಸಗಿ ನಿರ್ವಾಹಕರು ನಿರ್ವಹಿಸಿದರೂ, ಸರ್ಕಾರಿ ಒಡೆತನದ ಸರಬರಾಜು ಕಂಪನಿಗಳು ಮೇಲ್ವಿಚಾರಣೆ ಮಾಡಿದರೂ, ಅದರ ಪರಿಣಾಮ ಒಂದೇ ರೀತಿಯದ್ದಾಗಿದೆ. ಅದರಲ್ಲೇನೂ ವ್ಯತ್ಯಾಸವಿಲ್ಲ. ಏಕೆಂದರೆ ಅದರ ಕಾರ್ಯವಿಧಾನ ಮತ್ತು ಉದ್ದೇಶ ಒಂದೇ ಆಗಿರುತ್ತದೆ.

11. ಈ ವ್ಯವಸ್ಥೆಯಿಂದ ದೇಶಾದ್ಯಂತ ಎರಡು ಲಕ್ಷ ಮೀಟರ್ ರೀಡರ್‌ಗಳು ಕೆಲಸ ಕಳೆದು ಕೊಳ್ಳುತ್ತಾರೆ. ಸಬ್ ಸ್ಟೇಷನ್‌ಗಳನ್ನು ಕೇಂದ್ರೀಯ SCADA (ಸೂಪರ್ವೈಸರಿ ಕಂಟ್ರೋಲ್ ಆಂಡ್ ಡೇಟಾ ಅಕ್ವಿಸಿಶನ್) ಕಂಟ್ರೋಲ್ ರೂಮಿನಿಂದ ಮಾನವಶಕ್ತಿಯ ಸಹಾಯವಿಲ್ಲದೇ ನಡೆಸಲಾಗುತ್ತದೆ. ಇದರಿಂದಾಗಿ ಅಪಾರ ಸಂಖ್ಯೆಯ ತಾಂತ್ರಿಕ ಮತ್ತು ತಾಂತ್ರಿಕೇತರ ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುತ್ತಾರೆ.

ಈ ಎಲ್ಲಾ ಮೇಲಿನ ಅಂಶಗಳಿಂದ, ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್ ಜನವಿರೋಧಿ, ರೈತವಿರೋಧಿ ಮತ್ತು ಕಾರ್ಮಿಕ ವಿರೋಧಿ ಎಂಬುದು ಸ್ಪಷ್ಟವಾಗುತ್ತದೆ. ಖಾಸಗಿ ಬಂಡವಾಳಗಾರರ ಹೊಟ್ಟೆ ತುಂಬಿಸಿ, ಜನಸಾಮಾನ್ಯರ ಹೊಟ್ಟೆ ಮೇಲೆ ಹೊಡೆಯುವ ಈ ಯೋಜನೆಗೆ ಕೇಂದ್ರ ಸರ್ಕಾರದ ನೇರ ಕೃಪಾಕಟಾಕ್ಷವಿದೆ ಎಂಬುದು ಸುಸ್ಪಷ್ಟ. ಹಾಗಾಗಿ, ವಿದ್ಯುತ್ತನ್ನು ಕಾಪಾಡಲು ಹಾಗೂ ಅದರ ನ್ಯಾಯಯುತ ಬಳಕೆಯನ್ನು ಖಾತ್ರಿಪಡಿಸಲು, ಸ್ಮಾರ್ಟ್ ಮೀಟರ್ ವಿರುದ್ಧ ನಾವು ರಾಜ್ಯದ ಹಳ್ಳಿ ಹಳ್ಳಿಗಳಲ್ಲೂ ಪ್ರತಿರೋಧ ಸಮಿತಿಗಳನ್ನು ರಚಿಸಿ, ಅದರ ಅಳವಡಿಕೆಗೆ ತಡೆಯೊಡ್ಡಬೇಕಿದೆ. ಆದರೆ ಎಡಪಕ್ಷವೆಂದು ಹೇಳಿಕೊಳ್ಳುವ ಸಿಪಿಎಂನ ಇಬ್ಬಗೆಯ ನಿಲುವು ಮಾತ್ರ ಖೇದಕರವಾದದ್ದು. ಪಶ್ಚಿಮ ಬಂಗಾಲ, ಆಸ್ಸಾಂ, ಇತರ ಎಲ್ಲಾ ಕಡೆ ಇದರ ವಿರುದ್ಧ ಮಾತನಾಡುವ ಸಿಪಿಎಂನ ನಿಲುವು ಅಧಿಕಾರದಲ್ಲಿರುವ ಕೇರಳದಲ್ಲಿ ಮಾತ್ರ ತದ್ವಿರುದ್ಧವಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಈ ಸ್ಮಾರ್ಟ್ ಮೀಟರ್ ಎನ್ನುವ ಪಿಡುಗಿನ ವಿರುದ್ಧ ದೇಶದಾದ್ಯಂತ ಏಕಾಂಗಿಯಾಗಿ ಅಷ್ಟೇ ದೃಢವಾಗಿ ಧ್ವನಿಯೆತ್ತುತ್ತಿರುವ ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘದ ನಿಲುವು ಮಾತ್ರ ಪ್ರಶಂಸನೀಯವಾದುದಾಗಿದೆ. ಎಲ್ಲಾ ಗ್ರಾಹಕರು, ಕಾಳಜಿಯುಳ್ಳ ವಿದ್ಯುತ್ ವಲಯದ ನಿವೃತ್ತ ಅಧಿಕಾರಿಗಳು, ಸಣ್ಣ–ಮಧ್ಯಮ ಉದ್ದಿಮೆದಾರರನ್ನು ಒಳಗೊಂಡಂತೆ ವಿಶಾಲ ವೇದಿಕೆಯನ್ನು ನಿರ್ಮಿಸಿ ಸ್ಮಾರ್ಟ್ ಮೀಟರ್ ಸೇರಿದಂತೆ ಇಡೀ ವಿದ್ಯುತ್ ವಲಯದ ಖಾಸಗೀಕರಣದ ವಿರುದ್ಧ ಸೆಡ್ಡು ಹೊಡೆದು ಸುದೀರ್ಘ ಚಳುವಳಿಯತ್ತ ಸಾಗುತ್ತಿರುವುದನ್ನು ಬೆಂಬಲಿಸಬೇಕಾಗಿದೆ. ಅತ್ಯಂತ ಪ್ರಮುಖ ಹಾಗೂ ಮೂಲ ಉದ್ದಿಮೆಯಾದ ವಿದ್ಯುತ್ ವಲಯವನ್ನು ಕಾರ್ಪೋರೇಟ್ ಕುಳಗಳು ನುಂಗಿ ನೀರು ಕುಡಿಯದಂತೆ, ಅದನ್ನು ಸಾರ್ವಜನಿಕ ರಂಗವಾಗಿಯೇ ಉಳಿಸಿಕೊಳ್ಳುತ್ತ, ವಿದ್ಯುತ್ ಸರಬರಾಜನ್ನು ಸರಕನ್ನಾಗಿಸಲು ಬಿಡದೆ, ಅದನ್ನು ಸೇವೆಯಾಗಿ ಉಳಿಸಿಕೊಳ್ಳಲು ಎಲ್ಲಾ ಸಾಮಾಜಿಕ ಕಳಕಳಿಯುಳ್ಳ ಜನತೆ ಮುಂದಾಗಬೇಕಿರುವುದು ಘಳಿಗೆಯ ಅಗತ್ಯವಾಗಿದೆ. ■

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಪರಿಹರಿಸಿ, ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲ ಬಗೆಹರಿಸಿ– ಎಐಡಿಎಸ್‌ಓ ಒತ್ತಾಯ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ತರಗತಿಗಳನ್ನು ಬಹಿಷ್ಕರಿಸಿ ಕಳೆದ ಎರಡು ವಾರಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಬಹುಪಾಲು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿರುವ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಹುತೇಕ ತರಗತಿಗಳು ಸ್ಥಗಿತಗೊಂಡಿವೆ. ಒಂದೆಡೆ ತರಗತಿಗಳು ನಡೆಯುತ್ತಿಲ್ಲ, ಮತ್ತೊಂದೆಡೆ ಸೆಮಿಸ್ಟರ್ ಪರೀಕ್ಷೆಯ ದಿನಾಂಕಗಳು ಸಮೀಪಿಸುತ್ತಿವೆ. ಈಗಾಗಲೇ, ಶೈಕ್ಷಣಿಕವಾಗಿ ನಷ್ಟ ಅನುಭವಿಸುತ್ತಿರುವ ವಿದ್ಯಾರ್ಥಿಗಳನ್ನು, ಈ ಪರಿಸ್ಥಿತಿಯು ಮತ್ತಷ್ಟು ಆತಂಕಕ್ಕೆ ತಳ್ಳಿದೆ. ರಾಜ್ಯ ಸರ್ಕಾರವು ಈ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಬೇಕೆಂದು ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟಿಸಿದ್ದಾರೆ. ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಪರಿಶೀಲಿಸಿ ಅವರಿಗೆ ನ್ಯಾಯ ಒದಗಿಸಬೇಕು ಮತ್ತು ಕಾಲೇಜುಗಳಲ್ಲಿ ಪಾಠಗಳು ಸರಿಯಾಗಿ ನಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.













# ಸಿಲ್ಕ್ಯಾರಾ ಸುರಂಗ ದುರಂತ

...1ನೇ ಪುಟದಿಂದ

ಲಾಭವನ್ನು ಹೆಚ್ಚಿಸುವ ಸಲುವಾಗಿ ಸಾಮಾನ್ಯ ನಾಗರಿಕರ ಹಿತಾಸಕ್ತಿಯನ್ನು ಬಲಿ ಕೊಡಲಾಗುತ್ತಿದೆ. ಇದು ಫ್ಯಾಸಿಸ್ಟ್ ನಿರಂಕುಶಾಧಿಕಾರ ಮತ್ತು ಬಂಡವಾಳಶಾಹಿ ಆಳ್ವಿಕೆಯ ಅಮಾನವೀಯ ಮುಖವಾಗಿದೆ. 'ಅಭಿವೃದ್ಧಿ'ಯ ಹೆಸರಿನಲ್ಲಿ ರೂಪಿಸಲಾಗುತ್ತಿರುವ ಇಂತಹ ಅನಾಹುತಕಾರಿ ಯೋಜನೆಗಳ ವಿರುದ್ಧ ಸ್ಥಳೀಯ ಜನರು, ಹಲವಾರು ವಿಜ್ಞಾನಿಗಳು ಮತ್ತು ಪರಿಸರವಾದಿಗಳು ಧ್ವನಿ ಎತ್ತುತ್ತಿರುವುದು ಹರ್ಷದಾಯಕ ಸಂಗತಿಯಾಗಿದೆ. ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಂಡು ಸರಿಯಾದ ನಾಯಕತ್ವದಲ್ಲಿ ಇಂತಹ ಯೋಜನೆಗಳ ವಿರುದ್ಧ ನಿರಂತರ ಪ್ರಬಲ ಚಳುವಳಿಯನ್ನು ಸಂಘಟಿಸುವುದು ಸದ್ಯದ ಆದ್ಯತೆಯಾಗಿದೆ. ಇದರಿಂದ ಉತ್ತರಾಖಂಡ, ಹಿಮಾಚಲ ಪ್ರದೇಶ, ಸಿಕ್ಕಿಂ ಮತ್ತು ಅರುಣಾಚಲದಂತಹ ಸುಂದರವಾದ ನೈಸರ್ಗಿಕ ತಾಣಗಳಲ್ಲಿ ವೈಜ್ಞಾನಿಕ ಸಮಿತಿಗಳ ಶಿಫಾರಸುಗಳನ್ನು ಉಲ್ಲಂಘಿಸುವ ಯೋಜನೆಗಳನ್ನು ನಿಲ್ಲಿಸಬಹುದು. ತನ್ಮೂಲಕ ಈ ಗುಡ್ಡಗಾಡು ಪ್ರದೇಶದ ಜನರ ಜೀವನ ಭದ್ರತೆ ಮತ್ತು ಸುರಕ್ಷತೆಯನ್ನು ಖಾತ್ರಿ ಪಡಿಸಬಹುದು.

ಆದ್ದರಿಂದ ಎಲ್ಲಾ ಬುದ್ಧಿಜೀವಿಗಳು ವಿಜ್ಞಾನಿಗಳು ಮತ್ತು ನಾಗರಿಕರು ಮುಂದೆ ಬಂದು ಇಂತಹ ಅವೈಜ್ಞಾನಿಕ ಯೋಜನೆಗಳನ್ನು ಸರಕಾರ ನಿಷೇಧಿಸಬೇಕೆಂದು ಒತ್ತಡ ಹೇರಬೇಕು. ಯಾವುದೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವ ಮೊದಲು ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಪುನರ್ವಸತಿ ಸೌಲಭ್ಯವನ್ನು ಕಲ್ಪಿಸಬೇಕು.

ದುಡಿಯುವ ಜನರ ಹೋರಾಟದ ದನಿ
ಕಾರ್ಮಿಕ ದೃಷ್ಟಿಕೋನ
ಚಂದಾದಾರರಾಗಿ!
ವಾರ್ಷಿಕ ಚಂದಾ: ರೂ.90

## ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ ವತಿಯಿಂದ
# ಮೂಲಭೂತ ಸೌಕರ್ಯಗಳಿಗಾಗಿ ಆದಿವಾಸಿ ಜನಗಳ ಯಶಸ್ವಿ ಹೋರಾಟ

ಸರಗೂರು ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅಳಲಹಳ್ಳಿ ಹಾಡಿಯಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಪ್ರತಿಭಟನೆ ಮಾಡಲಾಯಿತು.

**ಆಗ್ರಹಗಳು:**

1.ಅಳಲಹಳ್ಳಿ ಹಾಡಿಯಲ್ಲಿ ಇರುವ ನಾಲ್ಕು ನೀರಿನ ತೊಂಬೆಗಳನ್ನು ದುರಸ್ತಿ ಮಾಡಿ ಈ ಕೂಡಲೇ ನೀರು ಪೂರೈಕೆ ಮಾಡಬೇಕು.

2.ಮನೆ ಮನೆಗೆ ನೀರಿನ ಸಂಪರ್ಕ ಕಲ್ಪಿಸಿ ನೀರು ಪೂರೈಕೆ ಮಾಡಲು ವ್ಯವಸ್ಥೆ ಮಾಡಬೇಕು.

3.ಅಂಗನವಾಡಿ ಕಟ್ಟಡ ನಿರ್ಮಾಣ, ವಾಸಿಸಲು ಮನೆ ,ಶೌಚಾಲಯ, ರಸ್ತೆ ಸಮುದಾಯ ಭವನ, ಮನೆಗಳಿಗೆ ವಿದ್ಯುತ್ ಸಂಪರ್ಕ , ವಾಸಿಸುವ ಮನೆಗಳಿಗೆ ಹಕ್ಕು ಪತ್ರ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.

ಪ್ರತಿಭಟನೆಯ ನಂತರ ಬೋರ್ ವೆಲ್ ಮೋಟರನ್ನು ದುರಸ್ತಿಗೊಳಿಸಲಾಯಿತು. ಅಂಗನವಾಡಿ ಕೇಂದ್ರ ಆರಂಭಿಸಲು ತಾಲೂಕು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.







ಎಸ್‌ಯುಸಿಐ(ಸಿ)ಪಕ್ಷದ ಬಳ್ಳಾರಿ ಗ್ರಾಮೀಣ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ಬಳ್ಳಾರಿ–ಸಿರುಗುಪ್ಪ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ತಿಗೊಳಿಸಲು ಆಗ್ರಹಿಸಿ ಕೋಳೂರು ಕ್ರಾಸ್ ಬಳಿ ಪ್ರತಿಭಟನೆ




ದಾವಣಗೆರೆ: ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯಕ್ಕಾಗಿ ಆಗ್ರಹಿಸಿ ಎಐಎಂಎಸ್‌ಎಸ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷೆ ಕಾ. ಅಪರ್ಣಾ ಮಾತನಾಡಿದರು.

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA